ಶ್ರೀ ಕಾಗೋಡು ತಿಮ್ಮಪ್ಪ.—ಮುಖ್ಯಮಂತ್ರಿಗಳ ಮಾತಿನಲ್ಲಿ ನನಗೆ ನಂಬಿಕೆ ಇದೆ. ಈ ವರ್ಷ ಅವರ ತೀರ್ಮಾನ ಬರುವುದರೊಳಗಾಗಿ ಎರಡು ಸೆಂಟರ್‌ಗಳಲ್ಲಿ ಹೋದ ವರ್ಷ ಮಾಡಿದಂತೆ ಅಡ್ಮಿಷನ್ ಮಾಡುವುದಕ್ಕೆ ತಡೆಹಿಡಿದಂ ಒಂದೆ ಸೆಂಟರ್‌ನಲ್ಲಿ ಅಡ್ಮಿಷನ್ ಮಾಡುವಂತೆ ಮಾಡಬೇಕು.

SRI D. DEVARAJ URS.—When I make a statement, the Government should have to stick to it. Why there are two separate centres and why two separate independent admissions, these are all matters of detail. However it may be two separate admis ions or one admission, all these things will have to be viewed in the light of the policy decision I have made just now I have also replied just now whether they should have two colleges or one college. We cannot allow the same institution to have two colleges.

SRI H. M. CHANNABASAPPA.In the light of the Hon. Chief Minister's clarification the question of having two colleges does not arise. We have got to consult both the University and the Committee to know what exactly the imp rt from these thigs are. In the light of the Hon. Chief Minister's decision which has been conveye-d to the House We will call some of those people and the Committee also and try to understand ultimately Government's decision will prevail, but by convening the meeting it is necessary to understand what exactly the import of these things are and then we will make a statement.

ಶ್ರೀ ಎಚ್.ಡಿ. ದೇವೇಗೌಡ.— ತಾವು ಕೊಡತಕ್ಕ ಸ್ಟೇಟ್‌ಮೆಂಟಿನಲ್ಲಿ ನಾವು ಎತ್ತಿರತಕ್ಕಂಥಾ ಅಂಶಗಳನ್ನು ಸೇರಿಸಿ ಕೊಡಬೇಕು. ಯಾರು ಯಾರಿಗೆ ೫೦ ಸೀಟುಗಳು ಕೊಟ್ಟಿದ್ದೀರಿ ಮತ್ತು ಯಾರ್‍ಯಾರು ಕೊಟ್ಟಿದ್ದಾರೆ ಮತ್ತು ಈವಾಗ ನಾವು ಚರ್ಚೆ ಮಾಡಿದ ವಿವರಗಳನ್ನೆಲ್ಲಾ ಸೇರಿಸಿ ನಿಮ್ಮ ಸ್ಟೇಟ್‌ಮೆಂಟಿನಲ್ಲಿ ಹೇಳಬೇಕು.

SRI H. M. CHANNABASAPPA.—Further I would like to say immediately after the meeting is over, after assessing their views and also subject to the policy of having one college; wherein it is to be one unit, two units, or three units etc., etc., I will make a statement

Budget Estimates for 1977-78 Demands for Grants

Demand No. 3, 7 and 15

SMT. E. E. VAZ (Minister for Excise and Development of Kannada).—Madam Speaker, on the recommendation of the Governor I beg to move:

> "That a sum not exceeding Rs. 4,22,90 000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 7 "State Excise".

"That a sum not exceeding Rs. 2,74,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 15 'Stationery and Printing and Development of Kannada".

SRI H. SIDDAVEERAPPA (Minister for Law).—Madam Speaker, on the recommendation of the Governor, I beg to move:

"That a sum not exceeding Rs. 5,06,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 3 "Administration of Justice".

MADAM SPEAKER.—Motion moved:

"That a sum not exceeding Rs. 4,22,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 7 "State Excise".

and the other Demand Nos. 15 & 3 are befire the house for discussion.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರುಗಳು ಮಂಡಿಸಿದಂಥಾ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(Mv. Deputy Speaker in the Chair)

ಮುಖ್ಯವಾಗಿ ಹೇಳುವುದಾದರೆ ಕಾನೂನು ಮಂತ್ರಿಗಳು ಒಬ್ಬ ಉತ್ತಮವಾದಂಥಾ ನ್ಯಾಯವಾದಿಗಳಾಗಿ ಇವೊತ್ತು ಈ ಇಲಾಖೆಯ ನಿರ್ವಹಣೆಯನ್ನು ವಹಿಸಿಕೊಂಡಿದ್ದಾರೆ. ಅವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ನ್ಯಾಯಾಂಗ ಇಲಾಖೆಗೆ ಸ್ವಲ್ಪ ಕಾಯಕಲ್ಪ ಬರುತ್ತದೆ ಅನ್ನುವ ವಿಶ್ವಾಸ ನಮಗೆ ಇತ್ತು. ಆದರೆ ಈ ದಿಶೆಯಲ್ಲಿ ಶ್ರೀ ಮಾನ್ ಹೆಚ್. ಸಿದ್ಧವೀರಪ್ಪನವರು ಹೆಚ್ಚು ಯಶಸ್ವಿಯಾಗಲಿಲ್ಲಾ ಅನ್ನತಕ್ಕಂಥ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಾರಣ ಏನೆಂದರೆ ಈವೊತ್ತು ನ್ಯಾಯವನ್ನು ವಿತರಣೆ ಮಾಡುವಂಥಾ ಕಾಲದಲ್ಲಿ ಸಾಮಾನ್ಯ ಜನರಿಗೆ ಅದು ಮುಟ್ಟುವಂಥಾ ರೀತಿಯಲ್ಲಿ ಇರಬೇಕು. ಆದರೆ ನಮ್ಮ ನ್ಯಾಯ ವಿತರಣೆ ಅದಕ್ಕೆ ದೂರವಾಗಿದೆ. ಯಾವೊತ್ತೂ ಸಹ ಸಾಮಾನ್ಯ ಮನುಷ್ಯನಿಗೆ ತನ್ನ ನ್ಯಾಯ ಅತಿ ಶೀಘ್ರಗತಿಯಲ್ಲಿ ಮತ್ತು ಅತಿ ಸಮೀಪದಲ್ಲಿ ಪಡೆಯುವಂತಾದರೆ ಆವಾಗ ಮಾತ್ರ ಜನಸಾಮಾನ್ಯರಿಗೆ ಈ ನ್ಯಾಯ ವಿತರಣೆಯ ಪ್ರತಿಫಲ ಸಿಗುತ್ತದೆ ಅನ್ನುವ ಮಾತನ್ನು ಹೇಳುವಾಗ, ಈಗಿನ ಒಂದು ಪರಿಸ್ಥಿತಿ ನೋಡಿದರೆ ಇದರ ಬಗ್ಗೆ ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಏತಕ್ಕೆಂದರೆ ಇವೊತ್ತು ಕೋರ್ಟುಗಳಲ್ಲಿ ನ್ಯಾಯ ತೀರ್ಮಾನ ಮಾಡತಕ್ಕಂಥಾ ಕಾಲದಲ್ಲಿ ವಿಳಂಬ ವಿಪರೀತ ಆಗುತ್ತಾ ಇದೆ. ತಮಗೆ ಈ ಸಂದರ್ಭದಲ್ಲಿ ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ಬಹುಶಃ ಈ ದೇಶದಲ್ಲಿ ಯಾವನಾದರೂ ಒಬ್ಬ ತೀರಾ ಬಡವನಾಗಿದ್ದರೆ ಅವನಿಗೆ ಇಂತಹ ನ್ಯಾಯಾಲಯಗಳಲ್ಲಿ ಎಷ್ಟರಮಟ್ಟಿಗೆ ನ್ಯಾಯ ದೊರೆಯಬಹುದು, ಆ ನ್ಯಾಯ ಪಡೆಯುವಂಥಾವನು ಇದರಿಂದ ಎಷ್ಟರಮಟ್ಟಿಗೆ ಬದುಕಬಹುದು ಎನ್ನುವುದನ್ನು ಏನಾದರೂ ಹುಡುಕಿದ್ದೀರಾ? ಯಾವುದಾದರೂ ಒಂದು ಪ್ರಶ್ನೆ ಕೋರ್ಟಿನಲ್ಲಿ ಉದ್ಭವವಾದರೆ ಅದು ಎಷ್ಟು ಕಾಲದ ಒಳಗೆ ತೀರ್ಮಾನವಾಗಬೇಕು ಅನ್ನುವುದನ್ನು ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನದೇ ಆದ ಒಂದು ಕೇಸಿನ ಬಗ್ಗೆ

ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿರುವ ಒಬ್ಬ ಹರಿಜನ ಹೆಣ್ಣು ಮಗಳು ಅವಳ ಹೆಸರು ಗಾಮಿ ಅಂತ, ಅವಳಿಗೆ ಇದ್ದಂಥಾ ಎರಡು ಎಕರೆ ಭೂಮಿಯನ್ನು ಗೇಣಿದಾರಳಾಗಿ ಪಡೆಯುವುದಕ್ಕೆ ಇಂದಿಗೆ ೧೨ ವರ್ಷ ಪೂರ್ಣಗೊಂಡಿದ್ದರೂ ಕೂಡ ಇನ್ನೂ ತೀರ್ಮಾನವಾಗಿಲ್ಲ, ಅದು ಹೈಕೋರ್ಟ್‌ನಲ್ಲೇ ಇದೆ. ೧೯೬೦ನೇ ಇಸವಿಯಲ್ಲಿ ಅವಳ ಮೇಲೆ ಗೇಣಿವ್ಯಾಜ್ಯ ಶುರುವಾಯಿತು. ಅದು ೧೯೬೪ರವರೆಗೂ ಕೂಡ ಅದು ಗೇಣಿವ್ಯಾಜ್ಯದಲ್ಲೇ ಇತ್ತು. ೧೯೬೫ನೇ ಇಸವಿಯಲ್ಲಿ ಸಾಗರದ ಒಂದು ಮುನ್ಸೀಫ್ ಕೋರ್ಟಿನಲ್ಲಿ ಜಮೀನ್ದಾರರ ವಿರುದ್ಧವಾಗಿ ಪರ್ಮನೆಂಟ್ ಇಂಜಕ್ಷನ್ ಕೊಡಬೇಕು ಎಂದು ವ್ಯಾಜ್ಯ ಹೂಡಿದಳು ಅವಳಿಗೆ ಪರ್ಮನೆಂಟ್ ಇಂಜಕ್ಷನ್ ಕೊಡಬೇಕು ಅನ್ನುವ ತೀರ್ಮಾನವೂ ಸಹ ಆಯಿತು. ನಂತರ ಶ್ರೇಷ್ಠ ನ್ಯಾಯಾಲಯಕ್ಕೆ ಆ ಪರ್ಮನೆಂಟ್ ಇಂಜಕ್ಷನ್ ಕೂಡ ಬಂತು. ಅದು ೧೯೭೩ನೇ ಇಸವಿಯವರಿಗೂ ನಡೆಯಿತು. ೧೯೭೩ನೇ ಇಸವಿಯಲ್ಲಿ ಭೂನ್ಯಾಯ ಮಂಡಲಿಗೆ ಅವಳು ಕೇಸು ಹಾಕಿದ್ದಳು ನಂತರ ೧೯೭೪ರಲ್ಲಿ ಒಂದು ಅರ್ಜಿಯನ್ನೂ ಸಹ ಹಾಕಿದ್ದಳು. ಅದು ೧೯೭೬ನೇ ಇಸವಿಯಲ್ಲಿ ತೀರ್ಮಾನವಾಯಿತು ೧೯೭೬ರಲ್ಲಿ ಅದು ತೀರ್ಮಾನವಾದ ಮೇಲೆ ಮತ್ತೆ ಅದು ಶ್ರೇಷ್ಟ ನ್ಯಾಯಾಲಯಕ್ಕೆ ಬಂಧಿದೆ. ಈವೊತ್ತು ಆ ಕೇಸು ಶ್ರೇಷ್ಟನ್ಯಾಯಾಲಯದಲ್ಲೇ ಇವೆ. ಅವಳು ಎರಡು ಎಕರೆ ಜಮೀನಿಗೆ ೧೯೬೧ ರಿಂದ ಹೋರಾಟ ಮಾಡಿದರೂ ಸಹ ಅದು ಇನ್ನೂ ಇತ್ಯರ್ಥವಾಗಿಲ್ಲ. ಹೀಗಿರುವಾಗ ನಮ್ಮ ನ್ಯಾಯಾಲಯದಲ್ಲಿ ಸಾಮಾನ್ಯ ಜನರಿಗೆ ಎಷ್ಟರಮಟ್ಟಿಗೆ ನ್ಯಾಯದಾನ ಸಿಗುತ್ತದೆ ಅನ್ನುವುದನ್ನು ಊಹೆ ಮಾಡಬೇಕು ಏತಕ್ಕೆಂದರೆ ಇಂತಹ ಸಾಮಾನ್ಯ ಜನ ಯಾವುದಾದರೂ ಒಂದು ತಾಲ್ಲೂಕು ಮಟ್ಟದಲ್ಲಿರತಕ್ಕಂಥಾ ಮುನ್ಸೀಫ್ ಕೋರ್ಟಿನಲ್ಲಿ ಒಂದು ಸಣ್ಣ ದಾವಾ ಹಾಕಿ ಅದರಿಂದ ನ್ಯಾಯದಾನ ಪಡೆಯಬೇಕಾದರೆ ೪ ವರ್ಷ, ೫ ವರ್ಷ, ೬ ವರ್ಷ ಹಿಡಿಯುವುದಾದರೆ ಅದಕ್ಕೆ ಇದು ಎಂತಹ ನ್ಯಾಯದಾನ ಮಾಡತಕ್ಕಂಥಾ ನ್ಯಾಯಾಲಯ ಎಂದು ನಾವು ತಿಳಿದುಕೊಳ್ಳಬೇಕಾಗಿದೆ ಅಥವಾ ಈ ನ್ಯಾಯಾಲಯಗಳು ಈ ರೀತಿಯಾಗಿ ಶೋಷಣೆ ಮಾಡತಕ್ಕಂಥಾ ಕೇಂದ್ರಗಳಾಗಿವೆ ಅನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಆದುದರಿಂದ ಈವೊತ್ತು ಈ ನ್ಯಾಯಾಲಯಗಳಲ್ಲಿ, ಮುನ್ಸೀಫ್ ಕೋರ್ಟುಗಳಲ್ಲಿ ಇರತಕ್ಕಂಥಾ ದಾವಾಗಳು ಎಷ್ಟೆಷ್ಟು ವರ್ಷಗಳಿಂದ ಇವೆ ಅನ್ನುವುದು ತಮಗೆ ಗೊತ್ತಿದೆಯೇ ? ಇವೊತ್ತು ಜಿಲ್ಲಾ ಮಟ್ಟದಲ್ಲಿರತಕ್ಕಂಥಾ ನ್ಯಾಯಾಲಯಗಳಲ್ಲಿ ಎಷ್ಟು ಕೇಸುಗಳು ಎಷ್ಟು ವರ್ಷಗಳಿಂದ ಪೆಂಡಿಂಗ್ ಇವೆ, ಹೈಕೋರ್ಟಿನಲ್ಲಿ ಎಷ್ಟು ಕೇಸುಗಳು, ಎಷ್ಟು ವರ್ಷಗಳಿಂದ ಪೆಂಡಿಂಗ್ ಇವೆ ಅನ್ನುವುದು ಎಲ್ಲರಿಗೂ ಗೊತ್ತಿದೆ. ಈ ಕೇಸುಗಳು ಬಹಳ ವಿಳಂಬವಾಗಿ ತೀರ್ಮಾನ ಮಾಡುವುದಾದರೆ ಸಾಮಾನ್ಯ ಜನರಿಗೆ ಇದರಿಂದೇನೂ ಸುಖ ಸಿಗುವುದಿಲ್ಲ; ಅಲ್ಲದೆ ಅವರಿಗೆ ಇದರಿಂದೇನೂ ಅಷ್ಟು ಪ್ರಯೋಜನವಾಗುತ್ತಾ ಇಲ್ಲ ಎಂದು ನನಗೆ ಕಾಣುತ್ತದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು ಜೊತೆಗೆ ಸಾಕಷ್ಟು ಕೋರ್ಟುಗಳೂ ಸಹ ತಾಲ್ಲೂಕು ಮಟ್ಟದಲ್ಲಿ ಇಲ್ಲ ಎಂದು ಹೇಳುತ್ತೇನೆ ಅನೇಕ ಕಡೆಗಳಲ್ಲಿ ೨-೩ ತಾಲ್ಲೂಕುಗಳು ಸೇರಿ ಕೋರ್ಟು ಮಾಡಿದ್ದಾರೆ. ನಿಮಗೆ ಒಂದು ಉದಾಹರಣೆ ಹೇಳಬೇಕಾದರೆ ಸಾಗರ ಹೊಸನಗರ ಮತ್ತು ಸೊರಬ ಈ ಮೂರು ತಾಲ್ಲೂಕುಗಳೂ ಸೇರಿ ಒಂದು ಕೋರ್ಟ್ ಮಾಡಿದ್ದಾರೆ. ೬-೭ ತಿಂಗಳಾಯಿತು ಅಲ್ಲಿರುವ ಒಬ್ಬರು ಮುನ್ಸೀಫ್ ಮ್ಯಾಜಿಸ್ಟ್ರೇಟ್‌ರನ್ನು ವರ್ಗ ಮಾಡಿದ ಮೇಲೆ ಇನ್ನೂ ಯಾರೂ ಕೂಡ ಅಲ್ಲಿಗೆ ಬಂದಿಲ್ಲ. ಸಾಗರದಲ್ಲಿ ಒಂದು ಮುನ್ಸೀಫ್ ಕೋರ್ಟ್ ಮತ್ತು ಒಂದು ಮ್ಯಾಜಿಸ್ಟ್ರೇಟ್ ಕೋರ್ಟ್ ಇವೆ ಅಲ್ಲಿ ಮುನ್ಸೀಫರೇ ಸಿವಿಲ್ ಕೇಸನ್ನು ನೋಡಿಕೊಳ್ಳಬೇಕು ಮತ್ತು ಕ್ರಿಮಿನಲ್ ಕೇಸುಗಳನ್ನೂ ನೋಡಿಕೊಳ್ಳಬೇಕು. ಅಲ್ಲಿಗೆ ಮ್ಯಾಜಿಸ್ಟ್ರೇಟ್ ಇನ್ನೂ ಯಾರೂ ಬಂದಿಲ್ಲ. ಆದುದರಿಂದ ಆ ಜನಗಳು ೭ ತಿಂಗಳಿನಿಂದಲೂ ಕೂಡ ಮನೆಯಿಂದ ಕೋರ್ಟಿಗೆ, ಕೋರ್ಟಿನಿಂದ ಮನೆಗೆ ಅಲೆಯುತ್ತಿದ್ದಾರೆ, ಯಾವ ಕೇಸು ಕೂಡ ತೀರ್ಮಾನವಾಗಿಲ್ಲ. ಅವರು ನೋಡಿ ನೋಡಿ ಕಣ್ಣೀರು ಸುರಿಸಿಕೊಂಡು ಹೋಗುತ್ತಿದ್ದಾರೆ. ಒಂದು ಬೇಲ್‌ನಲ್ಲಿ ಬಿಡಿಸಿಕೊಳ್ಳಬೇಕಾದರೂ ಸಹ ೬ ತಿಂಗಳು ಓಡಾಡಿದರೂ ಬಹಳ ಕಷ್ಟ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈವೊತ್ತು ನ್ಯಾಯಾಲಯದ ಒಂದು ತೀರ್ಮಾನ ಎಷ್ಟು ವಿಳಂಬವಾಗುತ್ತಿದೆ ಅನ್ನುವುದಕ್ಕೆ ಹೇಳುತ್ತಿದ್ದೇನೆ. ಸಾಮಾನ್ಯ ಮನುಷ್ಯ ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಯೋಗ್ಯತೆ ಇರುವಂತಹವರನ್ನು ನೇಮಕ ಮಾಡಲು ಯಾವ ಕೊರತೆ ಬಂದಿದೆ ಎಂದು ನಾನು ತಮ್ಮನ್ನು ಕೇಳಬೇಕಾಗಿದೆ ಅಂತಹ ಒಂದು ಕೊರತೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮುನ್ಸೀಫ್ ಆಗಿ ಆಯ್ಕೆಯಾಗತಕ್ಕಂಥ ಜನರು ನಮ್ಮಲ್ಲಿದ್ದಾರೆ. ಆದರೂ ಸಹ ಈಗ ಖಾಲಿ ಇರತಕ್ಕಂಥ ಜಾಗಗಳನ್ನು ಭರ್ತಿ ಮಾಡಲು ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ

ರೀತಿ ವಿಳಂಬವಾಗುವುದಕ್ಕೆ ಕಾರಣವೇನು? ಕೂಡಲೇ ಈ ಬಗ್ಗೆ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಮತ್ತು ಪ್ರತಿ ತಾಲ್ಲೂಕಿನಲ್ಲಿಯೂ ಒಂದೊಂದು ಕೋರ್ಟಿರಬೇಕೆಂದು ನಾವು ಈ ಹಿಂದೆಯೂ ಒತ್ತಾಯ ಮಾಡಿ ಹೇಳಿದ್ದೇವೆ. ಈಗ ಕೆಲವು ತಾಲ್ಲೂಕುಗಳಲ್ಲಿ ಈ ಅನುಕೂಲವಿಲ್ಲದ ಕಾರಣ ಒಂದು ಸಣ್ಣ ಪ್ರಮಾಣದ ನ್ಯಾಯ ಪಡೆಯಬೇಕಾದರೂ ಇನ್ನೊಂದು ತಾಲ್ಲೂಕಿಗೆ ಹೋಗಬೇಕಾಗಿದೆ. ಇದರಿಂದ ಖರ್ಚು ಜಾಸ್ತಿಯಾಗುತ್ತದೆ ಈ ಖರ್ಚು ಸಾಮಾನ್ಯ ಮನುಷ್ಯನಿಗೆ ಎಟುಕುವುದಿಲ್ಲ ಆದಕಾರಣ ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ಕೋರ್ಟನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಮತ್ತು ಖಾಲಿ ಇರತಕ್ಕಂಥ ಜಾಗಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಹೇಳುತ್ತೇನೆ. ಈ ಕೆಲಸವನ್ನು ಒಂದೆರಡು ತಿಂಗಳುಗಳಲ್ಲಿ ಮಾಡಲು ಸಾಧ್ಯವಿದೆ. ಹೈಕೋರ್ಟಿನವರಿಗೆ ರೆಕ್ರೂಟ್‌ಮೆಂಟ್ ಮಾಡಲು ಅಧಿಕಾರವಿದೆ.

4–30 P.M.

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಇಲ್ಲ, ಪಿ.ಎಸ್.ಸಿ. ಅವರು ಮಾಡುವುದು.

ಶ್ರೀ ಕಾಗೋಡು ತಿಮ್ಮಪ್ಪ —ಅವರೇ ಮಾಡಲಿ. ಆದರೆ ಅವರಿಗೆ ಈಗ ಹೇರಳ ಕೆಲಸವಿದೆ. ಆದ್ದರಿಂದ ಅವರು ಯಾವುದು ಮಾಡುತ್ತಾರೆ, ಯಾವುದು ಬಿಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ಅವರಿಗೆ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಅವರಿಗೆ ಕೊಟ್ಟಿರುವ ಅಧಿಕಾರವನ್ನು ವಾಪಸ್ ಪಡೆದು ಹೈಕೋರ್ಟಿನವರಿಗೇ ವಹಿಸಿ. ಅವರೇ ನೇರವಾಗಿ ಈ ಬಗ್ಗೆ ಪರೀಕ್ಷೆ ನಡೆಸುತ್ತಾರೆ ಪಿ.ಎಸ್.ಸಿ ಅವರು ಯಾವ ವಿಧಾನವನ್ನು ಅನುಸರಿಸುತ್ತಾರೋ ಅದೇ ವಿಧಾನವನ್ನು ಇವರೂ ಅನುಸರಿಸಿ ಎರಡು ತಿಂಗಳಲ್ಲಿ ಈ ಕೆಲಸ ಮಾಡಬಹುದು ಇದೇನೂ ಸರ್ಕಸ್ ಅಲ್ಲ, ಇದೇನೂ ಸ್ಟ್ರಟಿಕ್ ಅಲ್ಲ, ಅದಕಾರಣ ಪಿ.ಎಸ್.ಸಿ.ಗೆ ಹೆಚ್ಚು ಕೆಲಸವಿದ್ದರೆ ಹೈಕೋರ್ಟಿನವರಿಗೇ ಈ ಕೆಲಸವನ್ನು ವಹಿಸಿಕೊಡಿ. ಹೈಕೋರ್ಟಿನವರಾದರೆ ಈ ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ. ಎಂತಹ ನ್ಯಾಯಾಧೀಶರು ಇರಬೇಕು, ಅವರ ಇಂಟೆಲಿಜೆನ್ಸ್ ಯಾವ ರೀತಿ ಇದೆ, ಅವರ ಪರ್‌ಫಾರ್ಮೆನ್ಸ್ ಯಾವ ರೀತಿ ಇದೆ ಎಂಬುದನ್ನೆಲ್ಲಾ ನಿರ್ಧಾರ ಮಾಡಲು ಪಿ.ಎಸ್.ಸಿ.ಯಲ್ಲಿ ನ್ಯಾಯಾಧೀಶರು ಇರುವುದಿಲ್ಲ. ಅದಕಾರಣ ಈ ಕೆಲಸವನ್ನು ಹೈಕೋರ್ಟಿನವರಿಗೇ ವಹಿಸಬೇಕು ಮತ್ತು ಈ ಕೆಲಸವನ್ನು ಕೂಡಲೇ ಪೂರ್ಣಗೊಳಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಆರ್ಟಿಕಲ್ 226 ಮತ್ತು 227 ಪ್ರಕಾರ ರಿಟ್ ಪಿಟಿಷನ್‌ಗಳು ಜಾಸ್ತಿಯಾಗಿವೆ. ಭೂಸುಧಾರಣೆಯ ಬಗ್ಗೆಯೇ ಹೆಚ್ಚು ರಿಟ್‌ಗಳು ಬರುತ್ತಿವೆ. ರಾಜ್ಯಾಂಗಕ್ಕೆ 42ನೇ ತಿದ್ದುಪಡಿ ಯಾದಮೇಲೆ, ಹೈಕೋರ್ಟಿಗಿರುವ ಹಕ್ಕನ್ನು ತೆಗೆದು, ರಾಜ್ಯಮಟ್ಟದಲ್ಲಿ ಇದಕ್ಕೇ ಒಂದು ಪ್ರತ್ಯೇಕ ಟ್ರಿಬ್ಯೂನಲ್ ರಚನೆ ಮಾಡಬೇಕು ಆ ಟ್ರಿಬ್ಯೂನಲ್ ತೀರ್ಮಾನ ಮಾಡಬೇಕು ಎಂದು ಹೇಳತಕ್ಕಂಥದ್ದು ಸೈದ್ಧಾಂತಿಕವಾದಂಥ ವಿಷಯ. ಆದರೆ ಈ ಕೆಲಸವನ್ನು ಸರ್ಕಾರದವರು ಇದುವರೆಗೆ ಮಾಡಲಿಲ್ಲ. ಇದರಿಂದ ಅನಾವಶ್ಯಕವಾಗಿ ಎಲ್ಲರೂ ಹೈಕೋರ್ಟಿಗೆ ಹೋಗುತ್ತಿರುವುದರಿಂದ ಅಲ್ಲಿ ರಿಟ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಲ್ಲಿ ಈ ರಿಟ್‌ಗಳ ಬಗ್ಗೆ ತೀರ್ಮಾನ ಕೊಡುವ ಹಂತದಲ್ಲಿ ನಮಗೆ ವಿವಂಚನೆ ಬಂದಿದೆ. ಇತ್ತೀಚೆಗೆ ಶ್ರೇಷ್ಠ ನ್ಯಾಯಾಲಯದವರು ಈ ಭೂಸುಧಾರಣೆಯ ಬಗ್ಗೆ ಎರಡು ತೀರ್ಮಾನಗಳನ್ನು ಕೊಟ್ಟಿದ್ದಾರೆ. ಒಂದು, ಪಹಣಿ ಇಲ್ಲದಿರುವ ಪ್ರಕರಣದ ಬಗ್ಗೆ ಎರಡು, ಖಾಸಗೀ ಜನರು ಭೂನ್ಯಾಯ ಮಂಡಲಿಯಲ್ಲಿ ಭಾಗವಹಿಸಬೇಕಾದಂಥ ಪಾತ್ರದ ಬಗ್ಗೆ ಒಂದು ಕೇಸಿನಬಗ್ಗೆ ಭೂನ್ಯಾಯ ಮಂಡಲಿಯಲ್ಲಿರತಕ್ಕಂಥ ಖಾಸಗೀ ಸದಸ್ಯರೇನಾದರೂ ಆಸಕ್ತಿ ವಹಿಸಿದ್ದಾರೆಂದು ಆ ಕೇಸ್‌ಗೆ ಸಂಬಂಧಪಟ್ಟವರು ತಿಳಿಸಿದರೆ ಅಂತಹ ಖಾಸಗೀ ಸದಸ್ಯರು, ಆ ಕೇಸನ್ನು ತೀರ್ಮಾನ ಮಾಡುವ ಕಾಲದಲ್ಲಿ ಹಾಜರಿರದೆ ರಿಟೈರ್ ಆಗಬೇಕು ಎಂದು ಶ್ರೇಷ್ಠ ನ್ಯಾಯಾಧೀಶರೇ ತೀರ್ಮಾನ ಕೊಟ್ಟಿದ್ದಾರೆ, ಇದರಿಂದ ಬಹಳ ತೊಡಕುಂಟಾಗಿದೆ. ಅವರ ಫ್ಯಾಕ್ಟ್ಸ್ ಒಂದುಕಡೆ ಇದ್ದರೆ, the principle enunciated in that decision will go against the very concept of the constitution of the tribunal. ಆದ್ದರಿಂದ ಈ ಬಗ್ಗೆ ಸುಪ್ರೀಂ ಕೋರ್ಟಿಗೆ ಅಫೀಲ್ ಹೋಗಿ ಈ ಒಂದು ತೀರ್ಮಾನವನ್ನು ರದ್ದುಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ, ಈ ಒಂದು ತೀರ್ಮಾನ ಬಂದಮೇಲೆ ರಾಜ್ಯದ ಅನೇಕ ಭಾಗಗಳಿಂದ ಒಂದಲ್ಲ ಒಂದು ಕಾರಣವನ್ನು ಕೊಟ್ಟು ಇಂತಹ ಸದಸ್ಯರು ಇಂತಹ ಕೇಸ್‌ನಲ್ಲಿ ಇರಬಾರದೆಂದು ರಿಟ್ ಹಾಕುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸೊರಬದ ಭೂನ್ಯಾಯ ಮಂಡಲಿಯಲ್ಲಿ ಖಾಸಗೀ ಸದಸ್ಯರಾಗಿ ಶ್ರೀ ಬಂಗಾರಪ್ಪನವರು ಹಾಗೂ ಶ್ರೀ ಕೆ.ಎಚ್. ಮರಿಯಪ್ಪನವರು ಇದ್ದಾರೆ. ಇವರುಗಳು

ತಮ್ಮ ಕೇಸ್ ತೀರ್ಮಾನದಲ್ಲಿ ಹಾಜರಿರಬಾರದೆಂದು ಕುಮಾರ್ ಎಂಬುವರು ರಿಟ್ ಹಾಕಿದ್ದಾರೆ ಈ ರಿಟ್ ನಂ. ೪೨,೪೪ ಆಫ್ ೭೭. ಈ ಬಗ್ಗೆ ಸರ್ಕಾರಕ್ಕೂ ನೋಟೀಸ್ ಜಾರಿಯಾಗಿದೆ. ಈ ಕೇಸ್ ಬಗ್ಗೆ ಅವರು ಕೊಟ್ಟಿರುವ ಕಾರಣವೇನೆಂದರೆ, ಶ್ರೀ ಬಂಗಾರಪ್ಪನವರು ಮತ್ತು ಶ್ರೀ ಮರಿಯಪ್ಪನವರು ಹಿಂದೆ ಸೋಷಿಯಲಿಸ್ಟ್ ಪಾರ್ಟಿಯಲ್ಲಿ ಇದ್ದವರು, ಆ ಊರಿನಲ್ಲಿ ಗೇಣಿದಾರರ ಪರವಾಗಿ ಮತ್ತು ಜಮೀನು ದಾರರ ವಿರುದ್ಧವಾಗಿ ಸಭೆ ನಡೆಸಿದ್ದರು, ಗೇಣಿದಾರರ ಉಚ್ಚಾಟನೆ ಮಾಡುವ ಸಂದರ್ಭದಲ್ಲಿ ಅವರಿಗೆ ರಕ್ಷಣೆ ಕೊಡಬೇಕೆಂದು ಸಭೆ ಮತ್ತು ಮೆರವಣಿಗೆಯನ್ನು ಮಾಡಿದ್ದರು ಗೇಣಿದಾರರ ಪರವಾಗಿ ಚಳುವಳಿ ಮಾಡಿದ್ದರು. ಈ ಎಲ್ಲ ಕಾರಣಗಳಿಂದ ಅವರಿಗೆ ಗೇಣಿದಾರರ ಬಗ್ಗೆ ಆಸಕ್ತಿ ಇದೆಯೇ ಹೊರತು ಜಮೀನು ದಾರರ ಬಗ್ಗೆ ಆಸಕ್ತಿ ಇರುವುದಿಲ್ಲವಾದ ಕಾರಣ ತಮ್ಮ ಕೇಸ್ ನಡೆಯುವಾಗ ಇವರುಗಳು ಹಾಜರಿರಬಾರ ದೆಂದು ತಮ್ಮ ರಿಟ್ ಅರ್ಜಿಯಲ್ಲಿ ವಿವರವಾಗಿ ಹೇಳಿದ್ದಾರೆ. ಇತ್ತೀಚೆಗೆ ಶ್ರೇಷ್ಠ ನ್ಯಾಯಾಧೀಶರು ಕೊಟ್ಟ ತೀರ್ಪನ್ನು ಉದಾಹರಣೆಯಾಗಿ ಇಟ್ಟುಕೊಂಡರೆ ಈ ರಿಟ್‌ನ್ನು ಹಾಕಿರುವಂತಹ ಜಮೀನುದಾರರಿಗೆ ಅನುಕೂಲವಾಗುತ್ತದೆ. ಮತ್ತು ಮಾನ್ಯ ಬಂಗಾರಪ್ಪನವರು ಹಾಗೂ ಮಾನ್ಯ ಮರಿಯಪ್ಪನವರು ಈ ಕೇಸ್ ನಡೆಯುವಾಗ ಹಾಜರಿರುವುದಕ್ಕೆ ಆಗುವುದಿಲ್ಲ. ಅವರು ಹಾಜರಿರದೇ ಹೋದರೆ ಸಂಬಂಧಪಟ್ಟ ಗೇಣಿದಾರರಿಗೆ ಅನ್ಯಾಯವಾಗುತ್ತದೆ. ೧೫ ದಿವಸಗಳ ಕೆಳಗೆ ಈ ಬಗ್ಗೆ ಶ್ರೇಷ್ಠ ನ್ಯಾಯಾಧೀಶರು ಕೊಟ್ಟ ತೀರ್ಮಾನ ಏನಿದೆ ಆ ಬಗ್ಗೆ ನಾನು ಕಾನೂನು ಕಾರ್ಯದರ್ಶಿಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಮುಖ್ಯವಾಗಿ ಈ ತೀರ್ಮಾನದ ಹಿನ್ನೆಲೆಯಲ್ಲಿ ಕೆಲವರು ನಾನಾ ಕಾರಣಗಳನ್ನು ಮುಂದಿಟ್ಟುಕೊಂಡು, ಉದಾಹರಣೆಗೆ ಇವರು ಕಾಂಗ್ರೆಸ್ ಪಾರ್ಟಿಯವರು, ಇವರು ಜನತಾ ಪಾರ್ಟಿಯವರು ಇವರು ನನ್ನನ್ನು ಎಲ್ಲೋ ಬೈದಿದ್ದಾರೆ ಎಂಬುದನ್ನೇ ದೊಡ್ಡವನ್ನಾಗಿ ಮಾಡಿಕೊಂಡು ಈಗ ಭೂನ್ಯಾಯ ಮಂಡಲಿಗಳಲ್ಲಿ ಖಾಸಗೀ ಜನರು ಭಾಗವಹಿಸುವುದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತಿದ್ದಾರೆ. ಆದಕಾರಣ ಈ ಬಗ್ಗೆ ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಯಾಧೀಶರಾದಂಥ ಶ್ರೀ ಭೀಮಯ್ಯನವರು ತುಮಕೂರು ಭೂನ್ಯಾಯ ಮಂಡಲಿಗೆ ಸಂಬಂಧಪಟ್ಟಂತೆ ಬಂದಂಥ ಒಂದು ರಿಟ್ ಅರ್ಜಿಯ ಬಗ್ಗೆ ತೀರ್ಮಾನ ಕೊಟ್ಟಿದ್ದಾರೆ. ಅದರಲ್ಲಿ ಒಬ್ಬ ಗೇಣಿದಾರನ ಹತ್ತಿರ ಯಾವ ದಾಖಲೆಗಳೂ ಇರಲಿಲ್ಲ. ಆದ್ದರಿಂದ ಸಿವಿಲ್ ಲಾ ಪ್ರಕಾರ The presumption is that the landlord is in possession of the land unless the coutrary is proved. ಇವೊತ್ತು ಪಹಣಿ ದಾಖಲೆ ಇಲ್ಲದಂಥ ರೈತರು ನಮ್ಮ ರಾಜ್ಯದಲ್ಲಿ ಬಹಳಷ್ಟು ಮಂದಿ ಇದ್ದಾರೆ. ಇಂತಹ ಸಂದರ್ಭಗಳಲ್ಲಿ ಭೂನ್ಯಾಯ ಮಂಡಲಿಯವರು ಸ್ಥಳ ಪರಿಶೀಲನೆ ಮಾಡಿ, ನಿಜಕ್ಕೂ ಆ ಜಮೀನು ಆತನ ಸ್ವಾಧೀನದಲ್ಲಿದ್ದರೆ ಮತ್ತು ಆತ ಗೇಣಿದಾರನಾಗಿದ್ದಾನೆಂದು ಕಂಡುಬಂದರೆ ಅಂತಹ ಸನ್ನಿವೇಶದಲ್ಲಿ ಗೇಣಿದಾರರ ಪರವಾಗಿ ತೀರ್ಮಾನ ಕೊಡಬೇಕಾಗುತ್ತದೆ. ಆದರೆ ನಮ್ಮ ಈ ಬಗ್ಗೆ ಹೈಕೋರ್ಟಿನ ಶ್ರೀ ಭೀಮಯ್ಯನವರ ನ್ಯಾಯಪೀಠ ಕೊಟ್ಟ ತೀರ್ಮಾನ ನಮಗೆ ಬಾಧಕ ವಾಗುತ್ತದೆ. ಏಕೆಂದರೆ ಅನೇಕ ಗೇಣಿದಾರರ ಹತ್ತಿರ ದಾಖಲೆಗಳೇ ಇರುವುದಿಲ್ಲ. ಎಲ್ಲ ದಾಖಲೆಗಳು ಜಮೀನುದಾರರ ಪರವಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಏನಾದರು ಗೇಣಿದಾರರ ಪರವಾಗಿ ತೀರ್ಮಾನ ಕೊಟ್ಟರೆ ಆಗ ಈ ಒಂದು ಹೈಕೋರ್ಟಿನ ತೀರ್ಮಾನದಿಂದ ಬಾಧಕ ಉಂಟಾಗುತ್ತದೆ. ಇಲ್ಲಿ ಯವರೆಗೆ ಗೇಣಿದಾರರ ಹತ್ತಿರ ದಾಖಲೆಗಳು ಇಲ್ಲದಿದ್ದರೆ ಭೂನ್ಯಾಯ ಮಂಡಲಿಯವರು ಸ್ಥಳ ಅಜಮಾಯಿಷಿ ಮಾಡಿ ನಿಜವಾಗಿಯೂ ಆ ಗೇಣಿದಾರ ಸಾಗುವಳಿ ಮಾಡುತಿದ್ದಾನೆಂದು ಮತ್ತು ಅದು ಆತನ ಸ್ವಾಧೀನದಲ್ಲಿದೆ ಎಂಬುದು ಕಂಡುಬಂದರೆ, ಅದಕ್ಕೆ ಮಾನ್ಯತೆ ಕೊಡುತ್ತಿದ್ದರು. ಇಂತಹ ಕೇಸ್ ಗಳನ್ನು ಎತ್ತಿ ಹಿಡಿಯುವಂತಹ ಒಂದು ಪ್ರಯತ್ನ ನಮ್ಮ ಶ್ರೇಷ್ಠ ನ್ಯಾಯಾಲಯದಲ್ಲಿ ಆಗಬೇಕು.

ನನಗೆ ಒಂದು ತೊಂದರೆ ಏನಾಗಿದೆ ಎಂದರೆ ಸರ್ಕಾರದ ವತಿಯಿಂದ ಕೆಲಸ ಮಾಡತಕ್ಕ ವಕೀಲರಲ್ಲಿ ಕೆಲವು ಕೊರತೆ ಇದೆ ಎಂದು ಕಾಣುತ್ತದೆ. ಶ್ರೀಮಾನ್ ಸಿದ್ಧವೀರಪ್ಪನವರೂ ವಕೀಲರಾಗಿದ್ದಾರೆ. ಅವರಿಗೂ ಈ ವಿಚಾರ ಚೆನ್ನಾಗಿ ಗೊತ್ತಿದೆ, ರಿಕಾರ್ಡ್ ಇದ್ದಂತಹ ಎವಿಡೆನ್ಸ್ ಇದ್ದಾಗ ಏನಾಗುತ್ತದೆ ಎಂದರೆ Presumption is, the documentary evidence should be taken as genuine unless contrary is proved documentary evidenceನ್ನು contradict ಮಾಡುವುದು ಕಷ್ಟವಾಗುತ್ತದೆ. ಆದರೆ ನ್ಯಾಯ ಮಂಡಲಿಯನ್ನು ಸರ್ಕಾರದವರು ನೇಮಿಸಿದ ಉದ್ದೇಶ ಡಾಕ್ಯುಮೆಂಟರಿ ಎವಿಡೆನ್ಸ್ ಇಲ್ಲದೆ ಇದ್ದಾಗ ಭೂಮಿಯನ್ನು ರೈತ ನಿಜವಾಗಿ ಸಾಗು ಮಾಡಿದ್ದರೆ ಅವನಿಗೆ ನ್ಯಾಯವನ್ನು ದೊರಕಿಸಿಕೊಡಬೇಕು ಎನ್ನುವ ಉದ್ದೇಶದಿಂದ ಆದರೆ ಭೂಸುಧಾರಣೆಯ

ಕಾನೂನಿನಲ್ಲಿ ಒಂದು ಹೊಸ ಸಿದ್ಧಾಂತವನ್ನು ನಿರೂಪಣೆ ಮಾಡಿದ್ದಾರೆ. ಅಸಿಸ್ಟೆಂಟ್ ಕಮೀಷನರು ದಾಖಲೆಯ ಆಧಾರದ ಮೇಲೆ ತೀರ್ಮಾನ ಮಾಡಬಹುದು ಎಂದು ಮಾಡಲಾಗಿದೆ ನಾನು ಶಾಸನಸಭೆಯ ಸದಸ್ಯನಾದ ಮೇಲೆ ನಮಗೆ ವಕೀಲರು ತೊಂದರೆ ಕೊಡುತ್ತಿದ್ದಾರೆ ಎಂದು ಅನೇಕರು ಆಪಾದಿಸಿದ್ದಾರೆ. ಭೂಸುಧಾರಣೆ ಕಾನೂನಿನ ಬಗ್ಗೆ ಪ್ರತಿಯೊಬ್ಬರೂ ಈ ಸದನದಲ್ಲಿ ನಂಬಿಕೆಯನ್ನು ಇಟ್ಟುಕೊಂಡು ಇಲ್ಲಿಯೂ ಪ್ರತಿಪಾದನೆ ಮಾಡಿದ್ದಾರೆ ಹೊರಗಡೆಯೂ ಪ್ರತಿಪಾದನೆ ಮಾಡಿದ್ದಾರೆ ಒಬ್ಬ ಮನುಷ್ಯ ಅಥವಾ ಸಾರ್ವಜನಿಕರು ಆಸ್ತಿಯನ್ನು ಕಳೆದುಕೊಂಡಾಗ ನ್ಯಾಯಾಧೀಶರು ನ್ಯಾಯದಾನ ಮಾಡತಕ್ಕ ಸಾಮರ್ಥ್ಯವನ್ನು ಪಡೆದಿರಬೇಕು. ಆದಕಾರಣ ನಾನು ಹೇಳುವುದೇನೆಂದರೆ ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಕೆಲಸ ಮಾಡತಕ್ಕ ವಕೀಲರು ನಮ್ಮ ಸಿದ್ಧಾಂತವನ್ನು ಭೂಸುಧಾರಣೆಯನ್ನು ಅನುಷ್ಠಾನಕ್ಕೆ ತರಬೇಕಾದ ಕರ್ತವ್ಯವನ್ನು ಅರ್ಥ ಮಾಡಿಕೊಳ್ಳದೆ ಸರ್ಕಾರವನ್ನು ಪ್ರತಿಪಾದನೆ ಮಾಡದೆ ಅನೇಕ ಕೇಸುಗಳು ಗೇಣಿದಾರರ ವಿರುದ್ಧವಾಗಿ ಈ ಸಭೆಯ ಸಿದ್ಧಾಂತಕ್ಕೆ ವಿರುದ್ಧವಾಗಿ ತೀರ್ಮಾನ ವಾಗುತ್ತಿವೆ ಸರ್ಕಾರದ ಪರವಾಗಿ ನೇಮಕವಾದಂತಹ ವಕೀಲರು ಸರ್ಕಾರದ ಪರವಾಗಿ ವಕಾಲತ್ತು ವಹಿಸಬೇಕು. ಆದರೆ ಅವರು ಆ ರೀತಿ ಮಾಡುತ್ತಿಲ್ಲ. ಆದ್ದರಿಂದ ಅಂಥಾ ಅರ್ಹತೆ ಇಲ್ಲದೆ ಇರುವವರನ್ನು ಬದಲಾವಣೆ ಮಾಡಬೇಕು ವಕೀಲರ ಪರ್‌ಫಾರ್ಮೆನ್ಸ್ ನೋಡಿ ಅವರ ಅರ್ಹತೆಯನ್ನು ನೋಡಿ ಹೈಕೋರ್ಟ್ ಮಟ್ಟದಲ್ಲಿ ಸರ್ಕಾರದ ವಕೀಲರನ್ನು ನೇಮಕ ಮಾಡಬೇಕು. ಮಂತ್ರಿಗಳ ಮುಖಾಂತರ ಬಂದಿದ್ದಾರೆ, ಅವರಿಂದ ವರ್ಚಸ್ಸು ಪಡೆದಿದ್ದಾರೆ ಎನ್ನುವ ಕಾರಣಕ್ಕಾಗಿ ಅರ್ಹತೆ ಇಲ್ಲದೆ ಇರತಕ್ಕವರನ್ನು ಸರ್ಕಾರದ ಪರವಾಗಿ ವಕೀಲರನ್ನು ನೇಮಿಸಿದರೆ ಅದರಿಂದ ಆಗತಕ್ಕಂಥಾ ಅನ್ಯಾಯ ಮತ್ತು ತೊಂದರೆ ಅಷ್ಟಿಷ್ಟಲ್ಲ. ಆದ್ದರಿಂದ ಸರ್ಕಾರದ ಪರವಾಗಿ ಹೈಕೋರ್ಟಿನಲ್ಲಿ ವಕೀಲರನ್ನು ನೇಮಿಸುವಾಗ ಮಾನ್ಯ ಸಚಿವರು ಆ ವಕೀಲರ ಪರ್‌ಫಾರ್ಮೆನ್ಸ್ ನೋಡಿ, ಅವರ ಅರ್ಹತೆಯನ್ನು ನೋಡಿ ನೇಮಕ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ರಾಜ್ಯದ ಅನೇಕ ಕಡೆಗಳಲ್ಲಿ ಕ್ರಿಮಿನಲ್ ಕೇಸುಗಳನ್ನು ವಿಚಾರಣೆ ಮಾಡುವ ಸಂಬಂಧದಲ್ಲಿ ಹಿಂದೆ ಪೋಲೀಸ್ ಪ್ರಾಸಿಕ್ಯೂಟರುಗಳು ಇದ್ದರು. ಈಗ ಅವರನ್ನು ರೀಪ್ಲೇಸ್ ಮಾಡಿ ವಕೀಲರನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಿದ್ದಾರೆ ಆದರೆ ಆ ಹುದ್ದೆಗಳಿಗೆ ಎಂತಹವರನ್ನು ನೇಮಿಸಿದ್ದಾರೆ ಎಂದರೆ ಆ ಪ್ರಾಸಿಕ್ಯೂಟರುಗಳಿಗೆ ಸರ್ಕಾರಿ ಸಂಬಳವನ್ನು ಕೊಡುತ್ತಿದ್ದಾರೆ. ಅವರಿಗೆ ಸಂಬಳವನ್ನು ಜಾಸ್ತಿ ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ ಅವರಿಗೆ ಸರ್ಕಾರಿ ಸಂಬಳವನ್ನು ಕೊಟ್ಟಮೇಲೆ ಅವರು ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ. ಜೊತೆಗೆ ಅವರ ಕೈಯ್ಯು ಮತ್ತು ಬಾಯಿ ಸ್ವಚ್ಛವಾಗಿರಬೇಕು. ಮತ್ತು ಅವರು ಕೆಲಸವನ್ನು ಚೆನ್ನಾಗಿ ಮಾಡಬೇಕು ಪೋಲೀಸ್ ಪ್ರಾಸಿಕ್ಯೂಟರು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಹೇಳಿ ಅವರನ್ನು ತೆಗೆದು ಅವರ ಜಾಗದಲ್ಲಿ ಲಾಯರ್ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರನ್ನು ನೇಮಿಸಿದರು ಇವರು ಚೆನ್ನಾಗಿ ಕೆಲಸ ಮಾಡದೇ ಹೋದರೆ ಪ್ರಯೋಜನ ಏನು? ಬತ್ತ ತಿನ್ನುವವನು ಹೋದ, ಅಕ್ಕಿ ತಿನ್ನುವವನು ಬಂದ, ಎನ್ನುವ ಹಾಗಾಗುತ್ತದೆ. ಈಗ ನೇಮಕ ಮಾಡಿರತಕ್ಕ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರುಗಳು ಏನು ಪ್ರಯೋಜನ ಇಲ್ಲ. ಆದ್ದರಿಂದ ಮಂತ್ರಿಗಳು ಈ ಅಸಿಸ್ಟೆಂಟ್ ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡಿಕೊಳ್ಳುವಾಗ ಅವರ ಪರ್‌ಫಾರ್ಮೆನ್ಸ್ ನೋಡಿಕೊಂಡು ಅವರ ಅರ್ಹತೆಯನ್ನು ನೋಡಿಕೊಂಡು ಒಳ್ಳೆಯ ದಕ್ಷರಾದಂತಹವರನ್ನು ನೇಮಕ ಮಾಡಬೇಕು. ಈಗ ಇವರಲ್ಲಿ ಅಸಮರ್ಥರಾಗಿರುವವರನ್ನು ತೆಗೆದು ಹಾಕಬೇಕು ಅವರಿಗೆ ಕೊಡತಕ್ಕ ಸಂಬಳ ಕಡಿಮೆ ಇದ್ದರೆ ಬೇಕಾದರೆ ಅವರಿಗೆ ಜಾಸ್ತಿ ಸಂಬಳವನ್ನು ಕೊಡಬಹುದು. ಆದರೆ ಒಳ್ಳೆಯ ದಕ್ಷರನ್ನು ನೇಮಕ ಮಾಡಿಕೊಳ್ಳಬೇಕು.

ಇನ್ನು ಹರಿಜನ ಗಿರಿಜನರಿಗೋಸ್ಕರ ಕೆಲವು ನ್ಯಾಯವಾದಿಗಳನ್ನು ಸರ್ಕಾರದವರು ನೇಮಕ ಮಾಡಿದ್ದಾರೆ. ಹೈಕೋರ್ಟ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಒಬ್ಬೊಬ್ಬರು ನ್ಯಾಯವಾದಿಗಳು ಇದ್ದಾರೆ. ಆದರೆ ಅಲ್ಲಿ ಎಂತಹವರನ್ನು ನೇಮಕ ಮಾಡಿದ್ದಾರೆ ಎಂದರೆ ಅವರು ನಿಜವಾಗಿ ಹರಿಜನ ಗಿರಿಜನರ ಕೇಸುಗಳಲ್ಲಿ ಶ್ರದ್ಧೆವಹಿಸಿ ಕೆಲಸ ಮಾಡುತ್ತಾರೆ ಎಂದು ಹೇಳುವುದು ಅನುಮಾನ. ಅಂತಹವರನ್ನು ಯಾವುದೋ ಒಂದು ಮೆಚ್ಚಿಗೆಗೆ ನೇಮಕ ಮಾಡುವುದಕ್ಕೆ ಹೋಗಬೇಡಿ. ಹರಿಜನ ಗಿರಿಜನರು ಪಾಪ ಬಡವರು ಅವರಿಗೆ ಓಡಾಡುವುದಕ್ಕೆ ಅವರ ಹತ್ತಿರ ಗತಿ ಇಲ್ಲ. ಅಂತಹವರ ಕೇಸುಗಳನ್ನು ನಡೆಸುವುದಕ್ಕೆ ಸರ್ಕಾರದವರು ನ್ಯಾಯವಾದಿಗಳನ್ನು ನೇಮಿಸುವಾಗ ಅನುಕಂಪ ಪ್ರಾಮಾಣಿಕತೆ ಕಳಕಳಿ ಇರುವವರನ್ನು ನೇಮಕ ಮಾಡಬೇಕು. ಈಗ ಹರಿಜನ ಗಿರಿಜನರಿಗೋಸ್ಕರ ನೇಮಕ ಮಾಡಿರತಕ್ಕ ನ್ಯಾಯವಾದಿಗಳು ಹೇಗಿದ್ದಾರೆ

ಎಂದರೆ, ಇವರ ಹತ್ತಿರ ಬರತಕ್ಕ ಹರಿಜನ ಗಿರಿಜನ ಕ್ಲಯಂಟ್‌ಗಳ ಹತ್ತಿರ ೫ ರೂಪಾಯಿ ಇದ್ದರೆ ೩ ರೂಪಾಯಿ ಕೊಡಿ ಎಂದು ಕೇಳುತ್ತಾರೆ. ಕಕ್ಷಿದಾರ ಊಟಕ್ಕೆಂದು ೨ ರೂಪಾಯಿಗಳನ್ನು ಇಟ್ಟುಕೊಂಡಿದ್ದರೆ ಒಂದು ರೂಪಾಯಿ ಕೊಡಿ ಎಷ್ಟಿದ್ದರೆ ಅಷ್ಟೇ ಕೊಡು ಸಾಕು ಎಂದು ಕೇಳತಕ್ಕ ನ್ಯಾಯವಾದಿಗಳು ಇದ್ದಾರೆ. ಇವರು ಈ ರೀತಿ ಮಾಡುವುದಾದರೆ ಹರಿಜನ ಗಿರಿಜನರು ಏನು ಅಂದುಕೊಳ್ಳುತ್ತಾರೆ ಎಂದರೆ ನಾನು ಹುಟ್ಟಿದ್ದೇ ಹೀಗೆ ನನ್ನ ಹಣೆಯು ಬರಹವೇ ಹೀಗೆ ಎಂದು ತಿಳಿದುಕೊಂಡು ಸುಮ್ಮನಾಗುತ್ತಾರೆ. ಇಂತಹ ನ್ಯಾಯವಾದಿಗಳನ್ನು ಹರಿಜನರಿಗೆ ಕಾನೂನಿನ ನೆರವು ನೀಡುವುದಕ್ಕೆ ನೇಮಕ ಮಾಡಿದ್ದೇವೆ ಎಂದರೆ ಹೇಗೆ? ಅದಕ್ಕಾಗಿ ನಾನು ಹೇಳುವುದೇನೆಂದರೆ ಹರಿಜನ ಗಿರಿಜನರ ಬಗ್ಗೆ ಕಳಕಳಿ ಇರತಕ್ಕಂಥಾ, ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥಾ ಹರಿಜನ ಗಿರಿಜನರ ಬಗ್ಗೆ ಕನಿಕರ, ಅನುಕಂಪ ಇರತಕ್ಕ ನ್ಯಾಯವಾದಿಗಳನ್ನು ಜಿಲ್ಲಾ ಮಟ್ಟದಲ್ಲಿ ಮತ್ತು ಹೈಕೋರ್ಟ್ ಮಟ್ಟದಲ್ಲಿ ಸರ್ಕಾರದವರು ನೇಮಕ ಮಾಡಬೇಕು ಎಂದು ನಾನು ಹೇಳುತ್ತೇನೆ, ಹರಿಜನಗಿರಿಜನರಿಗೆ ಸಂಬಂಧಪಟ್ಟ ಒಂದು ಕೇಸಿನಲ್ಲಿ ಪತ್ರಿಕೆಯಲ್ಲಿ ಬಂದದ್ದನ್ನು ಕಟ್ ಮಾಡಿ ಇಟ್ಟುಕೊಂಡಿದ್ದೇನೆ. ಹರಿಜನರ ಕೇಸನ್ನು ಇಂಥವರಿಗೇ ಕೊಡಬೇಕೆಂದು ಹೇಳಿದ್ದಾರೆ. ಅವರಿಗೆ ೩ ಸೆಟ್ ಅಪ್ಲಿಕೇಷನ್ ಅನ್ನು ಹರಿಜನರಿಗೋಸ್ಕರ ನೇಮಕ ಮಾಡಿರತಕ್ಕ ನ್ಯಾಯವಾದಿಗಳಿಗೆ ಕಳುಹಿಸಿಕೊಟ್ಟು ೪ ತಿಂಗಳಾಗಿದೆ. ಅವರು ವಕಾಲತ್ತನ್ನು ಹೈಕೋರ್ಟಿಗೆ ಹಾಕಿಲ್ಲ. ಆ ಮೇಲೆ ಇನ್ನೊಂದು ಹರಿಜನರಿಗೆ ಸಂಬಂಧಪಟ್ಟ ಗಾಮಿ ಎನ್ನುವವರ ಕೇಸಿನಲ್ಲಿ ಮುನ್ಸೀಫ್ ಕೋರ್ಟಿನಲ್ಲಿ ತೀರ್ಮಾನವಾಗಿ ಹೈಕೋರ್ಟಿಗೆ ಬಂದು ಅಲ್ಲಿ ಕನಫರ್ ಆಗಿದೆ. ಅದರ ಆಧಾರದ ಮೇಲೆ ಈ ಕೇಸನ್ನು ಟ್ರಿಬ್ಯೂನಲ್‌ನವರು ತೀರ್ಮಾನ ಮಾಡಿದ್ದಾರೆ. ೧೦ ಗುಂಟೆ ಭೂಗಾಯಿತು ಜಮೀನಿನ ಬಗ್ಗೆ ಅಪೀಲು ಬಂದಿದೆ ಹೈಕೋರ್ಟಿನವರು ಇಂಜಂಕ್ಷನ್ ಕೊಟ್ಟಿದ್ದಾರೆ. ಈ ಬಗ್ಗೆ ಆ ನ್ಯಾಯವಾದಿಗಳು ಕೋರ್ಟಿಗೆ ವಕಾಲತ್ತು ಹಾಕಿಲ್ಲ. ಅಬ್ಜಕ್ಷನ್ ಹಾಕಿಲ್ಲ. ಈ ರೀತಿ ಹರಿಜನಗಿರಿಜನರಿಗೆ ಸಂಬಂಧಪಟ್ಟ ೨-೩ ಕೇಸುಗಳಲ್ಲಿ ಕೋರ್ಟಿಗೆ ವಕಾಲತ್ತು ಹಾಕಿಲ್ಲ. ಈ ಬಗ್ಗೆ ಸರ್ಕಾರದವರು ಒಂದು ದಿವಸವಾದರೂ ಆ ನ್ಯಾಯವಾದಿಗಳನ್ನು ಕರೆದು ಕೇಳಿದ್ದಾರೆಯೇ? ಸರ್ಕಾರ ಈ ಕೇಸುಗಳಿಗೆ ಸಂಬಂಧಪಟ್ಟ ಹಾಗೆ ಸ್ಟಾಂಪು ದುಡ್ಡು ಕೊಟ್ಟಿದೆಯೇ? ಮಿಸಲೇನಿಯಸ್ ಖರ್ಚು ದುಡ್ಡು ಕೊಟ್ಟಿದೆಯೇ? ಇದರಲ್ಲಿ ಸರ್ಕಾರದ ತಪ್ಪೂ ಕೂಡ ಇದೆ. ಹರಿಜನಗಿರಿಜನರಿಗೋಸ್ಕರ ವಕೀಲಿ ನೆರವು ನೀಡಲು ನ್ಯಾಯವಾದಿಗಳನ್ನು ನೇಮಕ ಮಾಡಿದ ಮೇಲೆ ಅವರ ಕೇಸುಗಳಿಗೆ ಸಂಬಂಧಪಟ್ಟ ಹಾಗೆ ಕೊಡಬೇಕಾದ ಖರ್ಚನ್ನು ಕೊಡದಿದ್ದರೆ ಕೆಲಸವನ್ನು ಹೇಗೆ ಮಾಡೋಣ ಎಂದು ಆ ನ್ಯಾಯವಾದಿಗಳು ಕೇಳುತ್ತಾರೆ ಇದರಿಂದಾಗಿ ಅವರು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗಿಲ್ಲ.

SRI H. SIDDAVEERAPPA.—I will find out. These lawyers are appointed by the Social Welfare department and they are the people who have to meet the expenditure. I will find out.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ಇದು ನೇರವಾಗಿ ತಮ್ಮ ಕಾನೂನು ಇಲಾಖೆಗೆ ಇರಬೇಕಾದದ್ದು. ಇದು ತಮಗೆ ಸಂಬಂಧಪಟ್ಟ ವಿಷಯ ಲಾ ಸೆಕ್ರೆಟರಿಯವರು ಇರುತ್ತಾರೆ. ಅದಕ್ಕಾಗಿ ಹಣ ಕೊಡುವ ಮಟ್ಟಿಗೆ ತಾವೇ ಇಟ್ಟುಕೊಳ್ಳಿ ನ್ಯಾಯವಾದಿಗಳನ್ನು ನೇಮಕ ಮಾಡತಕ್ಕದ್ದು, ಅವರ ಮೇಲ್ವಿಚಾರಣೆ ಮಾಡತಕ್ಕದ್ದು ಇತ್ಯಾದಿ ಎಲ್ಲಾ ವಿಚಾರಗಳೂ ಕೂಡ ಕಾನೂನು ಖಾತೆಗೆ ಇರಬೇಕು. ಅದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಬೇಕಾಗಿಲ್ಲ.

ಇದು ಕಾನೂನು ನೆರವಿನ ದೃಷ್ಟಿಯಲ್ಲಿ ನೋಡತಕ್ಕಂಥ ವಿಷಯವಾದುದರಿಂದ ಇದು ಕಾನೂನು ಇಲಾಖೆಯಲ್ಲಿರಬೇಕು. ಹರಿಜನಗಿರಿಜನರಿಗೆ ನ್ಯಾಯದ ಸಹಕಾರ ಕೊಡಬೇಕು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಏನಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ದುರ್ಬಲವರ್ಗದವರಿಗೆ ನಿಜವಾದಂಥ ಪ್ರಾಮಾಣಿಕವಾದಂಥ ನ್ಯಾಯ ಸಿಕ್ಕುವ ರೀತಿಯಲ್ಲಿ ಅವರಿಗೆ ಬೇಕಾದ ಅನುಕೂಲತೆ ಒದಗಿಸಿಕೊಟ್ಟು, ಅವರಿಗೆ ನ್ಯಾಯದ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತೇನೆ, ಇದರ ಜೊತೆಗೆ ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ಹೈಕೋರ್ಟಿನಲ್ಲಿ ನ್ಯಾಯಾಧೀಶರ ಹುದ್ದೆಗಳ ಏನು ಖಾಲಿ ಇವೆ ಅವು ಭರ್ತಿಯಾಗಿಲ್ಲ, ಖಾಲಿಯಾಗಿಯೇ ಇವೆ. ಇದುವರೆಗೆ ಅವನ್ನು ಏಕೆ ಭರ್ತಿ ಮಾಡಲಿಲ್ಲ. ಇವತ್ತು ಹೇರಳವಾದಂಥ ಕೇಸುಗಳು ಪೆಂಡಿಂಗ್ ಇವೆ ಭೂಸುಧಾರಣಾ ತಿದ್ದುಪಡಿ ಕಾನೂನು ಜಾರಿಗೆ ಬಂದಮೇಲೆ ವಿಪರೀತ ಕೇಸುಗಳಿವೆ. ಆದುದರಿಂದ ಪೆಂಡಿಂಗ್ ಇರತಕ್ಕ ಕೇಸುಗಳನ್ನು ರೆಡ್ಯೂಸ್ ಮಾಡುವುದಕ್ಕೆ

ತತ್‌ಕ್ಷಣ ಕೆಲಸಮಾಡಬೇಕು. ಇಲ್ಲದೇಹೋದರೆ ನ್ಯಾಯದ ವಿತರಣೆ ಕಾಲದಲ್ಲಿ ವಿಳಂಬವಾದರೆ, Justice delayed is justice denied. ಆದುದರಿಂದ ಇದರ ಬಗ್ಗೆ ಒಂದು ಸೂತ್ರವನ್ನಿಟ್ಟುಕೊಂಡು ಆಲೋಚನೆ ಮಾಡಬೇಕಾದ ಕರ್ತವ್ಯ ಸರ್ಕಾರದ್ದಿದೆ.

ಇನ್ನು ಅಬ್ಕಾರಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ನಾನು ಒಂದು ಸಾರಿ ಹೇಳಿದ್ದೇನೆ. ಶೇಂದಿ ಮತ್ತು ಸಾರಾಯಿಗಳನ್ನು ಹರಾಜುಮಾಡತಕ್ಕ ಕೆಲಸದಲ್ಲಿ ಒಂದು ವರ್ಷಕ್ಕೆ ಮಂಜೂರಾತಿಯನ್ನು ಕೊಡತಕ್ಕ ಕೆಲಸವನ್ನು ಮಾಡಿದೆ. ಇದು ಇವತ್ತು ನ್ಯಾಯಾಂಗ ತನಿಖೆಗೆ ಒಳಪಟ್ಟಿರುವುದರಿಂದ ಇದರ ಬಗ್ಗೆ ನಾನು ಹೇಳುವುದಿಲ್ಲ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಶೇಂದಿ ಇಳಿಸತಕ್ಕ ಟ್ಯಾಪರ್ಸ್‌ಗೆ, ರವರ ಕ್ಷೇಮಾಭಿವೃದ್ಧಿಗೋಸ್ಕರ ಒಂದು ಕಾನೂನು ಮಾಡಬೇಕು ಎಂದು ಮಾನ್ಯ ಲಿಂಗಪ್ಪನವರೂ ಹೇಳಿದ್ದಾರೆ, ನಾನು ಕೂಡ ಹೇಳಿದ್ದೇನೆ. ಇವತ್ತಿನವರೆಗೂ ಸರ್ಕಾರ ಆ ಕೆಲಸವನ್ನು ಮಾಡಿಲ್ಲ. ಕೇರಳ ಸರ್ಕಾರದವರು, ಟ್ಯಾಪರ್ಸ್ ವೆಲ್‌ಫೇರ್ ಫಂಡ್ ಎಂದು ಕ್ರಿಯೇಟ್‌ಮಾಡಿ ಅವರಿಗೆ ಬೇಕಾದಂಥ ಸವಲತ್ತನ್ನು ಒದಗಿಸಿಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ಸಾಕಷ್ಟು ಹಣ ಬರುತ್ತದೆ. ಇವತ್ತು ಟ್ಯಾಪರ್ಸ್ ಮರ ಹತ್ತಬೇಕು, ಶೇಂದಿಯನ್ನು ಇಳಿಸಬೇಕು, ಅದನ್ನು ಹೊತ್ತುಕೊಂಡು ಹೋಗಿ ಮಾರಬೇಕು. ಆದುದರಿಂದ ಶೇಂದಿ ಇಳಿಸತಕ್ಕವರ ಸ್ಥಿತಿಗತಿ ಏನಾಗಿದೆ ಎನ್ನುವುದನ್ನು ಈ ವರೆಗೆ ಆಲೋಚನೆ ಮಾಡದೇ ಇರುವುದರಿಂದ ಅವರು ಶೋಷಣೆಗೆ ಒಳಪಟ್ಟಿದ್ದಾರೆ, ಅವರ ಬಗ್ಗೆ ಸರ್ಕಾರ ಏನೂ ಗಮನಹರಿಸಿಲ್ಲ ಎಂದು ನಾನು ಆರೋಪಣೆ ಮಾಡಬೇಕಾಗಿದೆ. ಈಗ ಯಾವ ಕೆಲಸ ಹೇಳಿದರೂ ತಕ್ಷಣ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಈ ಟ್ಯಾಪರ್ಸ್ ಬಗ್ಗೆ ಕೇರಳ ಸರ್ಕಾರದವರು ಮಾಡಿದಂಥ ಕಾನೂನನ್ನು ಇಲ್ಲೂ ಕೂಡ ಮಾಡಿ ಅವರಿಗೆ ಸವಲತ್ತುಗಳನ್ನು ಒದಗಿಸಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ. ಇದರ ಬಗ್ಗೆ ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ. ಏನೆಂದರೆ ಸಾರಾಯಿ ಅಂಗಡಿಗಳನ್ನು ಉತ್ತಮವಾದ ಸ್ಥಿತಿಗೆ ತರುವುದಕ್ಕೆ ಸರ್ಕಾರ ಏನೂ ಶ್ರಮಪಟ್ಟಿಲ್ಲ. ಅದರ ಬಗ್ಗೆ ನಿಗಾವಹಿಸಿಲ್ಲ. ಇವತ್ತು ಕುಡಿಯುವವರು ಸಾರಾಯಿ ಅಂಗಡಿ ಎಲ್ಲಿದ್ದರೂ ಹೋಗಿ ಕುಡಿಯುತ್ತಾರೆ. ಇವತ್ತು ಆ ಅಂಗಡಿ ಯಾರಿಗೂ ಬೇಡವಾದ ಜಾಗದಲ್ಲಿರುತ್ತದೆ. ಇವತ್ತು ಈ ಸಾರಾಯಿ ಅಂಗಡಿಗಳು ಏನಿವೆ, ಆ ಅಂಗಡಿಗೆ ಒಂದು ಹಾಲು, ಕುಳಿತುಕೊಳ್ಳುವುದಕ್ಕೆ ಜಾಗ, ಅದು ಸ್ವಚ್ಛವಾಗಿರಬೇಕು. ಇವತ್ತು ಹೋಟೆಲ್‌ಗಳಿಗೆ ಲೈಸನ್ಸ್ ಕೊಡಬೇಕಾದರೆ. ಬೆಂಚು ಹಾಗಿರಬೇಕು, ಅದು ಹಾಗಿರಬೇಕು, ಇದು ಹೀಗಿರಬೇಕು ಎಂದು ನಿಯಮಗಳಿವೆ. ಹಾಗೆಯೇ ಶೇಂದಿ ಮತ್ತು ಸಾರಾಯಿ ಅಂಗಡಿಗಳಿಗೆ ಲೈಸನ್ಸ್ ಕೊಡುವಾಗ ಆ ನಿಯಮಗಳು ಇದಕ್ಕೆ ಅನ್ವಯಿಸುವುದಿಲ್ಲ. ಆದುದರಿಂದ ಇದಕ್ಕೂ ಕೂಡ ನಿಯಮಗಳು ಅನ್ವಯಿಸುವಂತೆ ಮಾಡಬೇಕು. ಇವತ್ತು ದುರ್ಬಲವರ್ಗದವರು ಹೆಚ್ಚಾಗಿ ಸಾರಾಯಿಯನ್ನು ಕುಡಿಯುತ್ತಾರೆ. ಇವತ್ತು ಈ ಬಾಬಿನಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಆದುದರಿಂದ ಕುಡಿಯತಕ್ಕ ಸ್ಥಳ ಈ ರೀತಿ ಇರಬೇಕು ಎಂದು ಸರ್ಕಾರ ಕಡ್ಡಾಯವಾಗಿ ನಿಯಮಗಳನ್ನು ತರಬೇಕು ಎಂದು ನಾನು ಒತ್ತಾಯಮಾಡುತ್ತೇನೆ. ಇವತ್ತು ಸಾರಾಯಿಯನ್ನು ಹರಾಜು ಮಾಡತಕ್ಕ ಕಾಲದಲ್ಲಿ ದೊಡ್ಡ ದೊಡ್ಡ ಗುತ್ತೇದಾರರನ್ನು ಹಚ್ಚಿಬಿಟ್ಟಿದ್ದಾರೆ. ಸಣ್ಣಪುಟ್ಟ ಗುತ್ತೇದಾರರು ಯಾರೂ ಭಾಗವಹಿಸಿ ಅವರ ಮೇಲೆ ಸ್ಪರ್ಧೆಮಾಡಿ ಗೆಲ್ಲುವುದಕ್ಕೆ ಆಗುವುದಿಲ್ಲ. ದೊಡ್ಡ ದೊಡ್ಡ ಗುತ್ತಿಗೇದಾರರು ಜಿಲ್ಲೆಯಿಂದ ರಾಜ್ಯದಿಂದ ಹೊಡೆಯುತ್ತಾರೆ, ೫೦ ಕೋಟಿ, ೧೦೦ ಕೋಟಿ ಹೊಡೆಯುತ್ತಾರೆ. ಅವರು ಗುಂಪು ಮಾಡಿಕೊಂಡು ಮಾಡಿಬಿಡುತ್ತಾರೆ. ಸಣ್ಣಪುಟ್ಟ ಜನರು ಅವರ ವಿರುದ್ಧ ಪೈಪೋಟಿಗೆ ಹೋಗಿ ಗೆಲ್ಲುವುದಕ್ಕೆ ಆಗುವುದಿಲ್ಲ. ಇದರಿಂದ ಬಂಡವಾಳಗಾರರು ಮತ್ತಷ್ಟು ಶ್ರೀಮಂತರಾಗುತ್ತಿದಾರೆ, ಸಣ್ಣಪುಟ್ಟ ಸಾಮಾನ್ಯ ಜನರು ಬಡವರಾಗುತ್ತಿದ್ದಾರೆ. ಇದರಿಂದ ಶಾಶ್ವತವಾಗಿ ಬಂಡವಾಳಗಾರರನ್ನು ಸೃಷ್ಟಿಮಾಡುವಂಥ ವ್ಯವಸ್ಥೆಯಾಗಿದೆ. ಇದನ್ನು ತಪ್ಪಿಸಬೇಕು. ಪ್ರತಿಯೊಂದು ಅಂಗಡಿಯನ್ನು ಹರಾಜ ಮೂಲಕ ವಿತರಣೆ ಮಾಡಬೇಕು. ಹಿಂದೆ ದಕ್ಷಿಣ ಕನ್ನಡದಲ್ಲಿ ಫಿರ್ಕಾ ಮೂಲಕ ಮಾಡಿದ್ದರು. ಇವತ್ತು ಈ ಒಂದು ಉದ್ಯೋಗ ಮಾನೋಪಲಿಯಾಗಿಬಿಟ್ಟಿದೆ, ಅದನ್ನು ಬ್ರೇಕ್ ಮಾಡಬೇಕು. ಮಾನೋಪಲಿಯನ್ನು ಒಡೆಯುವ ದೃಷ್ಟಿಯಿಂದ ಹರಾಜು ಮೂಲಕ ವಿತರಣೆಮಾಡಿ, ಸಾಮಾನ್ಯ ಜನರನ್ನು ಬದುಕಿಸುವ ಕೆಲಸವನ್ನು ಮಾಡಬೇಕು. ಹಿಂದೆ ಸಾರಾಯಿಯನ್ನು ಹರಾಜುದಾರರಿಗೆ ಹಂಚಬೇಕಾದರೆ ತಾಲ್ಲೂಕುಮಟ್ಟದಲ್ಲಿ ಡಿಪೋಗಳು ಇರುತ್ತಿದ್ದುವು. ಸರ್ಕಾರ ಕಂಪೆನಿಯಿಂದ ಪಡೆದುಕೊಂಡ ಸಾರಾಯಿಯನ್ನು ಕೋಟೆಯೊಳಗೆ ಇಡುತ್ತಿದ್ದರು. ಅಲ್ಲಿಂದ ಕಂಟ್ರಾಕ್ಟ್‌ದಾರರಿಗೆಲ್ಲಾ ಎಕ್ಸೈಜ್ ಇನ್‌ಸ್ಪೆಕ್ಟರ್ ಮುಖಾಂತರ ಹಂಚುತ್ತಿದ್ದರು

ಈಗ ಜೈಮಿನಿ ಡಿಸ್ಟಿಲರೀಸ್‌ವರಿಗೆ ನೇರವಾಗಿ ಕಂಟ್ರಾಕ್ಟ್ ದಾರರಿಗೆ ಹಂಚತಕ್ಕ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರ ಬಗ್ಗೆ ಎಕ್ಸೈಜ್ ಕಮಿಷನರು ಒಂದು ದೊಡ್ಡ ಯೋಜನೆಯನ್ನು ಮಾಡಿದ್ದಾರೆ. ಸರ್ಕಾರಕ್ಕೆ ಖರ್ಚು ತಪ್ಪುತ್ತದೆ, ಲಾಭ ಹೆಚ್ಚುತ್ತದೆ ಎಂದು ಪುಂಗಿ ಊದಿ ದೊಡ್ಡ ಸಾಧನೆ ಮಾಡಿದ್ದಾರೆ ಅದೇನೆಂದರೆ, ಜೈಮಿನಿ ಡಿಸ್ಟಿಲರೀಸ್‌ನವರು ಗುತ್ತಿಗೇದಾರರಿಗೆ ಸಾರಾಯಿಯನ್ನು ಹಂಚುವುದು. ಈ ರೀತಿ ಮಾಡಿ ಪ್ರತಿ ತಿಂಗಳು ಅವರು ೭೫,೩೦ ಲಕ್ಷ ರೂಪಾಯಿಗಳನ್ನು ಲಾಭ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇವತ್ತು ಸಾರಾಯಿಯನ್ನು ಮಾರಬೇಕಾದರೆ ಅದಕ್ಕೆ ಹಾಲ್ಕೋಹಾಲ್ ಇಷ್ಟೇ ಪರ್ಸೆಂಟ್ ಇರಬೇಕು. ಟೆಂಪರೇಚರ್ ಇಷ್ಟೇ ಇರಬೇಕು ಎಂದು ಇದೆ ಅದನ್ನು ಟೆಸ್ಟ್ ಮಾಡಿ ಕೊಡಬೇಕಾಗಿದೆ. ಮಂಡ್ಯ ಶುಗರ್ ಕಂಪೆನಿಯವರು ಸಾರಾಯಿಯನ್ನು ತರಬೇಕಾದರೆ ಟೆಂಪರೇಚರ್ ನೋಡಿ ಕೊಡುತ್ತಿದ್ದರು ಅದಕ್ಕೆ ಮ್ಯಾನುಫ್ಯಾಕ್ಚರಿಂಗ್ ಡೇಟ್ ಎಲ್ಲಾ ಇರುತ್ತದೆ, ಅದನ್ನೆಲ್ಲಾ ನೋಡ ಬೇಕಾಗಿದೆ ಈಗ ಇವರಿಗೆ ವಹಿಸಿರುವುದರಿಂದ ಯಾವುದೊ ಅವಧಿಯನ್ನು ಬರೆಯುತ್ತಾನೆ ಅದರಲ್ಲಿ ಲಿಕ್ಕರ್ ಎಷ್ಟು ಪರ್ಸೆಂಟ್ ಇರಬೇಕು ಎಂದು ಇದೆಯೋ ಅದನ್ನು ನೋಡುವುದಿಲ್ಲ, ಟೆಂಪರೇಚರ್ ಎಷ್ಟಿದೆ ಎಂದು ನೋಡುದಿವುಲ್ಲ. ಹಾಲ್ಕೊಹಾಲ್ ಎಷ್ಟು ಪರ್ಸೆಂಟ್ ಇದೆಯೆಂದು ಸರಿಯಾಗಿ ನೋಡುವುದಿಲ್ಲ, ಇಂತಹ ಸಾರಾಯಿಯನ್ನು ತೆಗೆದುಕೊಂಡು ಮಾರುವುದರಿಂದ, ಇದನ್ನು ಕುಡಿಯುವವರು ಒಬ್ಬರೂ ಬದುಕುವುದಿಲ್ಲ, ಬದುಕುವುದು ಕಷ್ಟ ಇಂತಹ ಸಾರಾಯಿಯನ್ನು ೩ ವರ್ಷ ಕುಡಿದರೆ ಲಾಗ ಹಾಕುವುದೇ. ಇವತ್ತು ಜನರು ಪೌಷ್ಟಿಕ ಆಹಾರದ ಕೊರತೆಯಿಂದ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇಂತಹ ಸಾರಾಯಿಯನ್ನು ಅವರಿಗೆ ಕುಡಿಸಿ ಸಾಮೂಹಿಕವಾಗಿ ಸಾಯುವ ಸ್ಥಿತಿಗೆ ಅವರನ್ನು ತಂದಿದೆದ್ದಾರಲ್ಲಾ ಎನ್ನುವ ಭಯ ಇವತ್ತು ನನಗೆ ಉಂಟಾಗುತ್ತಿದೆ. ಇವತ್ತು ಖಾಸಗೀ ಕಂಪೆನಿಗೆ ಈ ವ್ಯವಹಾರವನ್ನು ಕೊಡಲೇ ಬಾರದು. ಇವತ್ತು ಸಾರಾಯಿಯನ್ನು ಒದಗಿಸತಕ್ಕ ಕೆಲಸವನ್ನು ಸರ್ಕಾರದ ವಶದಲ್ಲಿರತಕ್ಕ ಕಂಪೆನಿಗೆ, ಮಂಡ್ಯ ಶುಗರ್ ಕಂಪನಿಗೆ ಕೊಡಬೇಕು. ದಯವಿಟ್ಟು ಖಾಸಗೀ ಕಂಪೆನಿಗಳಿಗೆ ಕೊಡುವುದಕ್ಕೆ ಹೋಗಬಾರದು. ಖಾಸಗಿ ಕಂಪೆನಿಗಳವರು ಇವತ್ತು ಅಧಿಕಾರಿಗಳನ್ನು ಒಲಿಗೆಹಾಕಿಕೊಂಡು ಟೆಂಪರೇಚರ್ ಮೇಂಟೇನ್ ಮಾಡುವುದಿಲ್ಲ, ಹಾಲ್ಕೋಹಾಲ್ ಮೇಂಟೈನ್ ಮಾಡುವುದಿಲ್ಲ. ಕನ್ಸಂಪಷನ್‌ಗೆ ರಿಲೀಸ್ ಮಾಡಬೇಕಾದರೆ, ಇಂತಹ ದಿವಸ ಮ್ಯಾನುಫ್ಯಾಕ್ಚರ್ ಆಗಿದೆ, ಇಷ್ಟು ದಿವಸ ಇರಬೇಕು, ಅಮೇಲೆ ಕೊಡ ಬೇಕು ಎನ್ನತಕ್ಕ ನಿಯಮಗಳನ್ನು ಪಾಲನೆ ಮಾಡದೇ ಹೋದರೆ, ಅದನ್ನು ಕುಡಿಯತಕ್ಕ ಜನ ಅನಾ ರೋಗ್ಯಕ್ಕೆ ಒಳಗಾದರೆ ಬಹುಬೇಗ ಸಾಯುವ ಸ್ಥಿತಿಗೆ ಬರುತ್ತಾರೆ. ಖಾಸಗಿ ಕಂಪೆನಿಗೆ ಇದನ್ನು ಹಂಚತಕ್ಕ ಕಾರ್ಯವನ್ನು ಕೊಟ್ಟು ಇದರಿಂದ ದುರಂತವನ್ನುಂಟು ಮಾಡುತ್ತಿದ್ದಾರೆ, ಜೊತೆಗೆ ಇದರಿಂದ ಸರ್ಕಾರಕ್ಕೆ ಲುಕ್ಸಾನು ಮಾಡಿದ್ದಾರೆ. ಆದುದರಿಂದ ಇದನ್ನು ಕೂಡಲೇ ರದ್ದುಪಡಿಸಬೇಕು ಎಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಹಿಂದಿನಂತೆ ಈ ಕೆಲಸವನ್ನು ಮಂಡ್ಯ ಶುಗರ್ ಕಂಪೆನಿಗೆ ಕೊಡಬೇಕು. ಎಕ್ಸೈಜ್ ಇನ್‌ಸ್ಪೆಕ್ಟರ್ ಟೆಸ್ಟ್ ಮಾಡಿ ಅಲ್ಲಿಂದ ವಿತರಣೆ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಈಗ ಈ ರೀತಿ ಮಾಡಿ ಶ್ರೀಮಂತ ಗುತ್ತೆಗೇದಾರರನ್ನು ಉದ್ಧಾರ ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ತಪ್ಪಿಸಿ ಇದನ್ನು ರದ್ದುಪಡಿಸಬೇಕು ಎಂದು ನಾನು ಒತ್ತಾಯಮಾಡುತ್ತೇನೆ ಸರ್ಕಾರಕ್ಕೆ ಹಣ ಉಳಿತಾಯ ಮಾಡುವ ದೃಷ್ಟಿಯಿಂದ ಸಾರಾಯಿ ಕುಡಿಯತಕ್ಕಜನರ ಆರೋಗ್ಯದ ದೃಷ್ಟಿಯಿಂದ ಸರ್ಕಾರದ ವಶದಲ್ಲಿ ರತಕ್ಕ ಕಂಪನಿಗೆ ಈ ಕೆಲಸವನ್ನು ವಹಿಸಬೇಕು ಎಂದು ಹೇಳಿ, ಇಷ್ಟು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

† ಶ್ರೀ ಎಸ್ ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಡಿಮ್ಯಾಂಡ್ ನಂ. ೭,೧೫ ಮತ್ತು ೩ ಇವುಗಳನ್ನು ಸಮರ್ಥಿಸಿ ನಾಲ್ಕು ಮಾತುಗಳನ್ನು ಆಡಲು ಬಯಸು ತ್ತೇನೆ. ಕನ್ನಡ ಅಭಿವೃದ್ಧಿಯ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ಇತ್ತೀಚೆಗೆ ಬಹಳಷ್ಟು ಆಸಕ್ತಿ ವಹಿಸಿ ದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಹಲವಾರು ಬಹುಮಾನಗಳನ್ನು ಹಂಚುವುದರ ಮೂಲಕ ಕನ್ನಡಮ್ಮನ ಸೇವೆಯನ್ನು ಮಾಡಿ ತೋರಿಸಿದ್ದಾರೆಂದು ಮೆಚ್ಚುಗೆ ಮಾತನ್ನು ಆಡುತ್ತಿದ್ದೇನೆ. ಇಷ್ಟು ಮಾಡಿದರೆ ಸಾಲದು ಕನ್ನಡದ ಸೇವೆಯನ್ನು ಇಷ್ಟು ಮಟ್ಟಿಗೆ ೩೦ ವರ್ಷಗಳ ಸ್ವಾತಂತ್ರ್ಯ ನಂತರ ಆದ್ದುದನ್ನು ನೆನೆಸಿಕೊಂಡರೆ, ನನಗೆ ಉಂಟಾದ ತೃಪ್ತಿಯನ್ನು ನಾನು ಈ ಸಭೆಯಲ್ಲಿ ವ್ಯಕ್ತಪಡಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಇದು ಸಂಪೂರ್ಣವಾಗಿ ಇನ್ನೂ ಆಗಿಲ್ಲ ವೆಂದೇ ನಾನು ಹೇಳುತ್ತೇನೆ. ಇವತ್ತು ಕನ್ನಡದ ಕೀರ್ತಿಗಾಗಿ ಇಡೀ ಕರ್ನಾಟಕಕ್ಕಾಗಿ ದುಡಿದಂಥ ವ್ಯಕ್ತಿಗಳು

ಅನೇಕ ಜನರಿದ್ದಾರೆ. ಅವರು ನಮ್ಮ ಕನ್ನಡನಾಡ ನುಡಿಯಾಗಲಿ, ನಾಡ ಭಾಷೆಯಾಗಲಿ ಎನ್ನುವ ಅಭೀಷ್ಟವನ್ನು ಇಟ್ಟುಕೊಂಡು ಅದಕ್ಕಾಗಿ ಆತ್ಮ ತ್ಯಾಗ ಮಾಡಿರುವ ನಿದರ್ಶನಗಳು ಅನೇಕ ಇವೆ. ಈಗ ನಮ್ಮ ರಾಜ್ಯದಲ್ಲಿ ಕರ್ನಾಟಕವನ್ನು ರಚನೆ ಮಾಡಿದ್ದಾಗಿದೆ. ಅಂದ ಮೇಲೆ ಕನ್ನಡ ಅಧಿಕೃತ ಭಾಷೆಯಾಗ ಬೇಕು. ಆದರೆ ಅದಿನ್ನೂ ರಾಜ್ಯಭಾಷೆಯಾಗಿ ಬರಲಿಲ್ಲ. ಎಲ್ಲಾ ಆಡಳಿತ ಮಟ್ಟದಲ್ಲೂ ಕನ್ನಡ ಬರಬೇಕು. ಎಲ್ಲಾ ವಿಶ್ವವಿದ್ಯಾ-ನಿಲಯಗಳಲ್ಲೂ ಕನ್ನಡದ ಪ್ರವೇಶ ಆಗಬೇಕು ನ್ಯಾಯಾಂಗಗಳಲ್ಲಿ ಕನ್ನಡದ ಪ್ರವೇಶ ಆಗಬೇಕು ಎಂಬುದೇ ನಮ್ಮ ಹಿರಿಯರ ಆಶೆಯಾಗಿತ್ತು. ೧೯೫೬ನೇ ಇಸವಿಯಲ್ಲಿ ಕರ್ನಾಟಕವಾದಂದು. ಇಲ್ಲಿಯವರೆಗೆ ಸುಮಾರು ೨೧ ವರ್ಷಗಳು ಕಳೆದು ಹೋದುವು. ಆ ೨೧ ವರ್ಷಗಳ ಕಾಲದಿಂದ ಕನ್ನಡ ದಲ್ಲಿ ಆಗಿರತಕ್ಕಂಥ ಅಭಿವೃದ್ಧಿಯನ್ನು ನೆನೆಸಿಕೊಂಡರೆ ನಮಗೆ ನಿಜವಾಗಿ ಆತ್ಮ ತೃಪ್ತಿ ಯಾವ ರೀತಿ, ಎಷ್ಟರಮಟ್ಟಿಗೆ ಆಗುತ್ತದೋ ಎನ್ನುವಂತಹ ಶಂಕೆಯನ್ನು ನಾನು ವ್ಯಕ್ತಪಡಿಸುತ್ತಾ ಕೆಲವು ಸೂಚನೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕನ್ನಡ ಯಾವ ಭಾಷೆಗೂ ಕೂಡ ಕಡಿಮೆ ಇಲ್ಲ ಎಂಬ ಬಗ್ಗೆ ಏನೂ ಶಂಕೆ ಬೇಡ. ಇಂಗ್ಲೀಷ್ ಮತ್ತು ಹಿಂದಿಯ ಸಾಹಿತಿಗಳಲ್ಲಿ ಹೇಗೆ ಇದ್ದಾರೋ ಹಾಗೆ ಕನ್ನಡದಲ್ಲೂ ಕೂಡ ಉದ್ದಾಮ ಪಂಡಿತರೂ ಹಾಗೊ ಸಾಹಿತಿಗಳೂ ಹಿಂದೆಯೂ ಇದ್ದರು, ಈಗಲೂ ಇದ್ದಾರೆ ಎಂಬು ದನ್ನು ನಾವು ಅರ್ಥಮಾಡಿಕೊಳ್ಳುವುದಾದರೆ ಕನ್ನಡದ ಹಿರಿಮೆ ಎಷ್ಟು ಎಂಬುದನ್ನು ನಾವೀಗ ತಿಳಿದು ಕೊಳ್ಳಬೇಕಾಗಿದೆ. ನಮ್ಮ ಮಕ್ಕಳು ಕನ್ನಡ ಕಲಿಯುವ ಬಗ್ಗೆ ಇವತ್ತು ಅದು ಯಾವ ಭಾಷೆಗೂ ಕಡಿಮೆ ಇಲ್ಲ ಆ ಭಾಷೆಯ ಬಗ್ಗೆ ಅತ್ಯುತ್ತಮ ಅಭಿಮಾನವಿದೆ. ಯಾವ ಕೆಲಸದಲ್ಲೇ ಆಗಲೀ, ಎಲ್ಲಾ ಕೂಡ ಕನ್ನಡ ಜಾರಿಗೆ ತರಲಿಕ್ಕೆ ಹೆಚ್ಚು ಪ್ರಯತ್ನಗಳನ್ನು ಮಾಡಬೇಕು ಎನ್ನುವ ಕೋರಿಕೆ ನನ್ನದಾಗಿದೆ. ಆದರೆ ಅದರಲ್ಲಿರತಕ್ಕಂಥ ನ್ಯೂನತೆಯನ್ನು ನಾವು ಈಗ ಅಳಿಯಬೇಕಾಗಿದೆ. ಕನ್ನಡ ಇವತ್ತು ಸ್ವತಂತ್ರ ಭಾಷೆ ಯಾಗಿ ಬೆಳಿಯಬೇಕು. ಬೇರೆ ಭಾಷೆಗಳಲ್ಲಿರುವಂತಹ ಉಪಯುಕ್ತವಾದ ಪದಗಳನ್ನು ಕನ್ನಡದಲ್ಲಿ ಅಳವಡಿಸಿ ಕೊಂಡು ಬೆಳಿಯಬೇಕು. ಇವತ್ತು ಅಸಿಸ್ಟೆಂಟ್ ಇಜಿನೀಯರ್ ಎಂಬ ಪದಕ್ಕೆ ಅನುವಾದಕ್ಕಾಗಿ ಸರಿಯಾದ ಕನ್ನಡಪದವನ್ನು ಹುಡುಕಿ ತೆಗೆಯುವ ಪ್ರಮೇಯವಿಲ್ಲ. ಹಾಗೆಯೇ ಸಬ್ ಇನ್‌ಸ್ಪೆಕ್ಟರ್ ಎಂಬ ಪದಕ್ಕೂ ಕನ್ನಡ ಅನುವಾದಕ್ಕಾಗಿ ನಾವು ಹೋಗಬೇಕಾಗಿಲ್ಲ. ಒಬ್ಬ ಮನುಷ್ಯನಿಗೆ ಅಸಿಸ್ಟೆಂಟ್ ಇಂಜಿನೀಯರ್ ಹಾಗೂ ಸಬ್ ಇನ್‌ಸ್ಪೆಕ್ಟರ್ ಎಂಬ ಪದಗಳು ಸಾಮಾನ್ಯವಾಗಿ—ಅರ್ಥವಾಗುವ ಮಟ್ಟಿಗೆ ಇರುವುದರಿಂದ ಅವಕ್ಕೆ ಬೇರೆ ಕನ್ನಡ ಅನುವಾದ ಬೇಕಾಗಿರುವುದಿಲ್ಲ. ಅವರೆಡಕ್ಕೂ ಕನ್ನಡ ಅನುವಾದ ಮಾಡಲು ಹೋದರೆ, ಆ ಮೇಲೆ ಅವು ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವುದಿಲ್ಲ. ಇದನ್ನು ನಾವು ಅರ್ಥಮಾಡಿ ಕೊಳ್ಳಬೇಕು. ಅಸಿಸ್ಟೆಂಟ್ ಇಂಜಿನೀಯರ್, ಸಬ್ ಇನ್‌ಸ್ಪೆಕ್ಟರ್ ಎಂಬ ಪದಗಳು ಜನಬಳಕೆಗೆ ಯೋಗ್ಯ ವಾಗಿವೆ, ಜನಜನಿತವಾದ ಶಬ್ದಗಳಾಗಿವೆ. ಅವು ಆದಿಯಿಂದಲೂ ಪದ್ಧತಿಯಲ್ಲಿದ್ದು ಜಾರಿಯಲ್ಲಿವೆ ಇದರ ಸಂದೇಹ ಇಟ್ಟುಕೊಳ್ಳಬೇಕಾಗಿಲ್ಲವೆಂಬವಾದ ಇದೆ ಆದ್ದರಿಂದ ಈ ವಿಚಾರವನ್ನು ನಾವು ಮಾನವೀಯ ತೆಯ ದೃಷ್ಟಿಯಿಂದ ಇಟ್ಟುಕೊಳ್ಳಬೇಕಾದುದು ಅವಶ್ಯಕ. ಹಿಂದೆ ಈ ಸಭೆಯಲ್ಲಿ ಇದೇ ರೀತಿ ಒಂದು ಪ್ರಶ್ನೆಬಂದಾಗ ಮಾನ್ಯ ಮುಖ್ಯ ಮಂತ್ರಿಗಳೇ ಅದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ ಯಾವ ಯಾವ ಶಬ್ದಗಳ ಬಳಕೆ ಮಾಡಬೇಕು ಎಂಬುದನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡೋಣವೆಂಬ ಆಶ್ವಾಸನೆಯನ್ನು ಕೊಟ್ಟರು. ಒಟ್ಟಿನಲ್ಲಿ ಈಗ ಕೂಡಲೇ ಕನ್ನಡದ ಬೆಳವಣಿಗೆ ಎಲ್ಲಾ ಹಂತಗಳಲ್ಲಿಯೂ ಯಶಸ್ವಿಯಾಗಿ ಆಗಲಿ ಎಂಬುದೇ ನನ್ನ ಅಭೀಷ್ಟ ಇವತ್ತು ನ್ಯಾಯಾಂಗಗಳಲ್ಲಿ ಕನ್ನಡದ ಬಳಕೆಯೇ ಇಲ್ಲ ಉತ್ತರ ಪ್ರದೇಶದಲ್ಲಿ, ಮಧ್ಯಪ್ರದೇಶದಲ್ಲಿರತಕ್ಕ ಎಲ್ಲಾ ನ್ಯಾಯಾಂಗಗಳಲ್ಲಿಯೂ ಹಿಂದಿ ಬಳಕೆ ಈ ಗಾಗಲೇ ಶುರುವಾಗಿದೆ ನಮ್ಮಲ್ಲಿ ಇನ್ನೂ ಕನ್ನಡ ಬಳಕೆ ಪ್ರಾರಂಭವಾಗಿಲ್ಲ. ಸುಮಾರು ೨೧ ವರ್ಷಗಳಾದರೂ ಕೂಡ ಇವತ್ತು ಇದರಲ್ಲಿರತಕ್ಕ ನ್ಯೂನತೆಗಳು ಏನಿವೆಯೆಂಬುದನ್ನು ಕಂಡು ಹಿಡಿದಿಲ್ಲ. ವಕೀಲರಿಗೆ ಆಗಲೀ ಕಕ್ಷಿದಾರರಿಗೇ ನ್ಯಾಯಾಂಗಗಳಲ್ಲಿನ ವ್ಯವಹಾರಗಳು ಅರ್ಥವಾಗುವುದಿಲ್ಲ. ಲಾಯರ್ ಗಳು ಮೇಜು ಗುದ್ದಿ ಗುದ್ದಿ ವಾದ ಮಾಡಿದ್ದಾರೆಂದು ಮಾತ್ರ ರೈತನಾದವನು ತಿಳಿದುಕೊಳ್ಳುತ್ತಾನೆ. ಅವನಿಗೆ ಅರಿವಿಲ್ಲದ ಭಾಷೆಯಲ್ಲಿ ನ್ಯಾಯಾಂಗಗಳ ವ್ಯವಹಾರ ಮಾಡುವುದರಿಂದ ಅವನಿಗೆ ಸರಿಯಾಗಿ ಅದು ಅರ್ಥವಾಗುವುದಿಲ್ಲ. ಅವನಿಂದ ಲಾಯರ್‌ಗಳು ಹೆಚ್ಚು ಫೀಸ್ ಕೊಡಿಸುವುದಕ್ಕೆ ಇಂಗ್ಲೀಷ್ ಭಾಷೆಯಲ್ಲಿ ಅಲ್ಲಿನ ವ್ಯವಹಾರ ಇಟ್ಟುಕೊಡಿದ್ದಾರೆಂದು ಅವನು ಹೇಳಬಹುದು. ಆದ್ದರಿಂದ ಇವತ್ತು ಕನ್ನಡದ ಬೆಳವಣಿಗೆ ಬಗ್ಗೆ ಯೋಚನೆ ಮಾಡುವುದಾದರೆ ಸಾಮಾನ್ಯ ಜನಗಳಿಗೆ ಅರ್ಥವಾಗುವ ಭಾಷೆಯನ್ನು ಕೋರ್ಟುಗಳಲ್ಲಿ ಹಾಗೂ ಕಛೇರಿಗಳಲ್ಲಿ ಅಳವಡಿಸಿಕೊಂಡರೆ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನೂ ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ, ಕೋರ್ಟುಗಳಲ್ಲಿ ಹಾಗೂ ಕಚೇರಿಗಳಲ್ಲಿ ಇಂಗ್ಲೀಷ್ ಪದಗಳ ಬಳಕೆಯನ್ನೇ ಇನ್ನೂ ಬಿಟ್ಟಿಲ್ಲ. ಅನೇಕ ಹಂತಗಳಲ್ಲಿ ಎಲ್ಲಾ ಸರ್ಕಾರಿ ಕಾಗದ ಪತ್ರಗಳು

ಇಂಗ್ಲೀಷ್‌ನಲ್ಲಿಯೇ ಅಳವಡಿಸಿಕೊಂಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗಲಾದರೂ ಆದಷ್ಟು ಜಾಗ್ರತೆಯಾಗಿ ಕನ್ನಡವನ್ನು ಹಂತ ಹಂತವಾಗಿ ಉಪಯೋಗ ಮಾಡದೇ ಹೋದರೆ ನಿಜವಾಗಿಯೂ ಸಾಮಾನ್ಯ ಜನರಿಗೆ ನ್ಯಾಯ ದೊರಕಿಸಿಕೊಟ್ಟಂತಾಗುವುದಿಲ್ಲ ಯಾವ ಭಾಷೆಯ ಬೆಳವಣಿಗೆ ಬಗ್ಗೆಯೂ ನನಗೆ ಸಂಕುಚಿತ ಮನೋಭಾವ ಇಲ್ಲ. ನನಗೆ ಬೇರೆ ಭಾಷೆಯ ಬಗ್ಗೆ ದ್ವೇಷ ಇಲ್ಲ. ಒಟ್ಟಿನಲ್ಲಿ ನಮ್ಮ ಕನ್ನಡ ಭಾಷೆಯನ್ನು ಹೆಚ್ಚು ಹೆಚ್ಚಿಗೆ ಬೆಳಸಬೇಕು ಎಂಬುದು ನನ್ನ ಅರಿಕೆ.

ಇನ್ನು ಕಾನೂನು ವಿಭಾಗದಲ್ಲಿಯೂ ಕನ್ನಡ ಭಾಷೆಯನ್ನು ಅಳವಡಿಸಬೇಕು ಮಾನ್ಯ ಸಿದ್ದವೀರಪ್ಪ ನವರು ಶಿವಮೊಗ್ಗದಿಂದ ಆರಿಸಿ ಬಂದಿರುವ ಸದಸ್ಯರು. ಅವರು ಶಿವಮೊಗ್ಗ ಕೋರ್ಟಿನಲ್ಲಿ ವಕೀಲ ರಾಗಿದ್ದಂತಹವರು. ಅಲ್ಲಿನ ಕೋರ್ಟು ವ್ಯವಹಾರಗಳಿಗೆ ಶಿವಮೊಗ್ಗವೇ ಕೇಂದ್ರವಾಗಿತ್ತು. ಅಂತಹ ಕೇಂದ್ರದಲ್ಲಿ ಅವರು ಕರೀ ಕೋಟು ಹಾಕಿಕೊಂಡು ವಕೀಲಿ ವೃತ್ತಿಯನ್ನು ಮಾಡಿದಂತಹವರು. ಆದರೆ ಅದನ್ನು ನಾನು ನೋಡಿಲ್ಲ ಇದು ಬಹಳ ಹಿಂದಿನ ಮಾತು. ಆ ಒಂದು ದೃಷ್ಟಿಯಿಂದ ತಮ್ಮಲ್ಲಿ ಹೇಳು ವುದೇನಂದರೆ, ಹೈಕೋರ್ಟಿನಲ್ಲಿ ಪುರಸತ್ತು ಇಲ್ಲದೆ ಕೇಸುಗಳು ಈಗಾಗಲೇ ಜಾಸ್ತಿಯಾಗಿವೆ ೫೦೦_೧೦೦೦ ಗಟ್ಟಲೆ ಕೇಸುಗಳು ಅಲ್ಲಿ ತೀರ್ಮಾನವಾಗದೆ ಹಾಗೆಯೇ ಉಳಿದಿವೆ. ಸರ್ಕಾರದವರು ಶಿವಮೊಗ್ಗದಲ್ಲಿ ಈಗಾಗಲೇ ಒಂದು ದೊಡ್ಡ ಕೋರ್ಟನ್ನು ಕಟ್ಟಿಸಿಕೊಟ್ಟಿದ್ದಾರೆ. ಅಂದ ಮೇಲೆ ಅಲ್ಲಿಯೇ ಒಂದು ಹೈಕೋರ್ಟ್ ಶಾಖೆಯನ್ನು ಏಕೆ ತೆರೆಯಬಾರದು ? ಆ ರೀತಿಯಾಗಿ ಹೊಸ ಶಾಖೆಯನ್ನು ತೆರೆಯುವುದ ರಿಂದ ಅಲ್ಲಿಯ ವಕೀಲರುಗಳಿಗೂ ಕೂಡ ಕೆಲಸ ಕೊಟ್ಟಂತಾಗುತ್ತದೆ. ಜೊತೆಗೆ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನೂ ಸಹ ಹೈಕೋರ್ಟು ವ್ಯವಹಾರಕ್ಕಾಗಿ ಬೆಂಗಳೂರಿಗೇ ಬರಬೇಕೆಂದರೆ ಬಹಳ ಕಷ್ಟ. ಶಿವಮೊಗ ಕರ್ನಾಟಕದ ಮಧ್ಯ ಭಾಗದಲ್ಲಿರುವುದರಿಂದ ಅಲ್ಲಿಯೇ ಹೈಕೋರ್ಟಿನ ಒಂದು ಶಾಖೆಯನ್ನು ತೆರೆಯುವ ಕೆಲಸ ಮಾಡಿದರೆ ನಿಮ್ಮ ಭಾವಚಿತ್ರವನ್ನು ಅಲ್ಲಿಯೇ ಹಾಕಿ ಜನರು ಪೂಜೆ ಮಾಡುತ್ತಾರೆಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಇವತ್ತು ಅಲ್ಲಿ ನ್ಯಾಯಾಂಗ ಏನಿದೆ, ಯಾರು ವಕೀಲಿ ವೃತ್ತಿಯನ್ನು ಅವಲಂಬಿಸಿಕೊಂಡಿದ್ದಾರೋ ಅವರಿಗೆ ಬಹಳ ಕಷ್ಟ. ಬೆಂಗಳೂರಿನಲ್ಲಿರುವ ವಕೀಲರಿಗಂತೂ ಬೇಕಾದಷ್ಟು ಕೆಲಸವಿದೆ. ಕೇಸುಗಳು ಬೇಕಾದಷ್ಟು ಇವೆ. ಆದರೆ ಜಿಲ್ಲಾ ಹಾಗೂ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿರ ತಕ್ಕ ಕೋರ್ಟುಗಳಿಗೆ ಸಂಬಂಧಪಟ್ಟ ವಕೀಲರಿಗೆ ಕೋರ್ಟಿನ ಬೇರೆ ಕೆಲಸಗಳಿಲ್ಲದೆ ಕೇವಲ ಕಾಫಿ, ಸಿಗರೇಟ್ ಕುಡಿಯುವುದೇ ಆಗುತ್ತದೆ ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ದೊಡ್ಡ ಮನಸು ಮಾಡಿ ಶಿವಮೊಗ್ಗದಲ್ಲಿ ಒಂದು ಹೈಕೋರ್ಟ್ ಶಾಖೆಯನ್ನು ಆದಷ್ಟು ಜಾಗ್ರತೆಯಾಗಿ ತೆರೆಯಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಜೊತೆಗೆ ಒಬ್ಬ ಸಾಮಾನ್ಯ ಮನುಷ್ಯ ಅಲ್ಲಿಂದ ಬೆಂಗಳೂರಿನ ಒಂದು ನ್ಯಾಯಾಲಯಕ್ಕೆ ಬರಬೇಕೆಂದರೆ ಬಹಳ ಶ್ರಮವಾಗುತ್ತದೆ; ಹಣ ಹೆಚ್ಚು ಖರ್ಚಾಗುತ್ತದೆ ಇಲ್ಲಿಗೆ ಬಂದು ಅವನು ಕೋರ್ಟು ಫೀಜು, ಲಾಯರ್ಸ್ ಫೀಜು ಎಲ್ಲಾ ಕೊಡಬೇಕಾಗುತ್ತದೆ. ಈಗಿನ ಒಂದು ಸನ್ನಿವೇಶದಲ್ಲಿ ಆತನ ದಿನನಿತ್ಯ ಜೀವನವೇ ಬಹಳ ಕಷ್ಟವಾಗಿರುವಾಗ ಇಲ್ಲಿಗೆ ಬಂದು ನ್ಯಾಯ ದೊರಕಿಸಿ ಕೊಳ್ಳುವುದೂ ಸಹ ಬಹಳ ಕಷ್ಟವಾಗುತ್ತದೆ. ಆ ದೃಷ್ಟಿಯಿಂದಲೇ ಕಡು ಒಡವರಿಗಾಗಿಯೇ ಕೆಲವು ೧೦ ಜನ ವಕೀಲರುಗಳು ಸಹಾಯ ಮಾಡುವ ಒಂದು ಪದ್ಧತಿಯನ್ನು ಜಾರಿ ಮಾಡಬೇಕೆಂದು ಹಿಂದೆ ತತ್ವಶಃ ಒಪ್ಪಿಕೊಂಡಿದ್ದರೂ ಅದಿನ್ನೂ ಕಾರ್ಯಗತವಾಗಿಲ್ಲ ಇದು ಎಂದು ಜಾರಿಯಾಗುತ್ತದೆ ಎಂಬ ಆಶ್ವಾಸನೆ ಯನ್ನು ಈ ಸದನಕ್ಕೆ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಕೂಡ ಇಂತಹ ಒಂದು ಕೋರ್ಟನ್ನು ತೆರೆಯ ಬೇಕೆಂದು ಈಗಾಗಲೇ ಹೇಳಿದ್ದಾರೆ ತಾಲ್ಲೂಕು ಮಟ್ಟದಲ್ಲಿ ಒಂದೊಂದು ಮುನ್ಸೀಫ್ ಕೋರ್ಟನ್ನು ತೆರೆಯಬೇಕಾದ್ದು ಅವಶ್ಯಕ. ಏಕೆಂದರೆ ಇವತ್ತಿನದಿವಸ ಲಿಟಿಗೆಂಟ್ ಪಬ್ಲಿಕ್ ಆದವನು ತಾಲ್ಲೂಕಿನಿಂದ ಜಿಲ್ಲಾ ಮಟ್ಟಕ್ಕೆ ಬಂದು ಕೋರ್ಟ್‌ನಲ್ಲಿ ಪುರಾವೆಗಳನ್ನು ಹಾಕಿಕೊಂಡು ತನ್ನ ಹಕ್ಕುಭಾದ್ಯತೆಗಳನ್ನು ರಕ್ಷಣೆ ಮಾಡಿಕೊಳ್ಳಬೇಕು ಎಂದರೆ ಅದರಿಂದ ಆತನಿಗೆ ಬಹಳ ಹಣ ವೆಚ್ಚವಾಗುತ್ತದೆ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಒಂದೊಂದು ಮುನ್ಸೀಫ್ ಕೋರ್ಟನ್ನು ಕೊಟ್ಟರೆ ಬಹಳಷ್ಟು ಜನರಿಗೆ ಅದರಿಂದ ಅನುಕೂಲ ವಾಗುತ್ತದೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಈ ಎಕ್ಸೈಜ್ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ನಾನು ಒಂದು ಮಾತನ್ನು ಈ ಬಗ್ಗೆ ಮಾನ್ಯ ಅಬ್ಕಾರಿ ಮಂತ್ರಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಕುಡಿಯುವ ಅಂಗಡಿ ಗಳನ್ನು ಶಾಲೆಗಳ ಎದುರಿಗೆ ಮತ್ತು ದೇವಸ್ಥಾನಗಳ ಎದುರಿಗೆ ಹಾಕಿಸಬಾರದು. ಇದು ಬಹಳ ಅನ್ಯಾಯ. ನನ್ನ ಜೊತೆಯಲ್ಲಿ ಬಂದರೆ, ಎಷ್ಟು ಶಾಲೆಗಳ ಎದುರಿಗೆ, ಎಷ್ಟು ದೇವಸ್ಥಾನಗಳ ಎದುರಿಗೆ ಈ ಕುಡಿಯುವ

ಅಂಗಡಿಗಳು ಇವೆ ಎಂಬುದನ್ನು ನಾನು ನಿಮಗೆ ತೋರಿಸುತ್ತೇನೆ. ಇದರಿಂದ ಆಗತಕ್ಕಂಥ ದುಷ್ಪರಿಣಾಮ ಅಷ್ಟಿಷ್ಟಲ್ಲ. ಹೊಸದಾಗಿ ಕುಡಿಯತಕ್ಕಂಥವರಿಗೆ ಇದನ್ನು ನಾವೇ ಕಲಿಸಿದಂತೆ ಆಗುತ್ತದೆ. ಭಗವಂತನ ಪೂಜೆಯನ್ನು ಮಾಡತಕ್ಕಂಥ ಸ್ಥಳದಲ್ಲಿ ಈ ಮದ್ಯದ ಅಂಗಡಿಗಳು ಇದ್ದರೆ, ಇದು ಹೊಟ್ಟೆಗೆ ಹೋದ ಮೇಲೆ ದೇವರ ಪೂಜೆ ಮಾಡುವುದಕ್ಕೂ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ನಿಗಾ ವಹಿಸಬೇಕು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ. ಈ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ನ್ಯಾಯಾಂಗ ಪ್ರತ್ಯೇಕವಾಗಿ ಇರಬೇಕು ಮತ್ತು ಅದು ನಿರ್ಭೀತಿಯಿಂದ ಕೆಲಸ ಮಾಡತಕ್ಕಂಥ ವಾತಾವರಣ ಇರಬೇಕು. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆದಿರುವಂಥ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ ನಮ್ಮ ಕರ್ನಾಟಕ ಹೈಕೋರ್ಟ್ ತನ್ನ ಘನತೆ ಗೌರವವನ್ನು ಎತ್ತಿ ಹಿಡಿಯುತ್ತಾ ಬಂದಿದೆ. ಅದಕ್ಕೋಸ್ಕರ ನಾವು ಶ್ಲಾಘನೆ ಮಾಡಬೇಕಾಗಿದೆ ನಮ್ಮ ಕರ್ನಾಟಕ ರಾಜ್ಯದ ಶ್ರೇಷ್ಠ ನ್ಯಾಯಾಧೀಶರು ಜಸ್ಟೀಸ್ ನರೋನರವರು ದಿವಂಗತರಾದಾಗ ಅವರ ಸಂತಾಪಸೂಚಕ ಸಭೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅವರು ಪ್ರಸ್ತಾಪ ಮಾಡುವಾಗ ಕೆಲವು ಜನ ಮಂತ್ರಿಗಳು ಕೆಲವು ಕೇಸ್‌ಗಳಲ್ಲಿ ನ್ಯಾಯಾಧೀಶರ ಮೇಲೆ ಪ್ರಭಾವ ಬೀರುವುದಕ್ಕೆ ಹೋಗಿದ್ದರು ಎಂದು ಹೇಳಿದರು. ಅದರ ಬಗ್ಗೆ ಈ ಅಸೆಂಬ್ಲಿಯಲ್ಲೂ ಪ್ರಸ್ತಾಪವಾಯಿತು. ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ತೀವ್ರ ಗಮನಹರಿಸಿದ್ದರೆ ಯಾವಯಾವ ಮಂತ್ರಿಗಳು ನ್ಯಾಯಾಧೀಶರ ಮೇಲೆ ಪ್ರಭಾವ ಬೀರುವುದಕ್ಕೆ ಹೋಗಿದ್ದರು ಎಂಬುದನ್ನು ಕಂಡುಹಿಡಿಯುವುದಕ್ಕೆ ಕಷ್ಟ ಇರಲಿಲ್ಲ. ಇದು ಬಹಳ ಗಂಭೀರವಾದ, ಗಹನವಾದ ವಿಚಾರವಾದರೂ ಸಹ, ನಮ್ಮ ಮಂತ್ರಿಮಂಡಲಕ್ಕೆ ಮತ್ತು ಈ ದೇಶಕ್ಕೆ ಕಳಂಕವನ್ನು ತರುವಂಥ ವಿಚಾರವಾದರೂ ಸಹ ಈ ಬಗ್ಗೆ ಸುಮ್ಮನೆ ಇರತಕ್ಕಂಥದ್ದನ್ನು ನೋಡಿದರೆ ನಮಗೆ ವಿಷಾದವಾಗುತ್ತದೆ. ಈ ರೀತಿ ಕೆಲವು ಮಂತ್ರಿಗಳು ನ್ಯಾಯಾಧೀಶರ ಮೇಲೆ ಪ್ರಭಾವ ಬೀರುವುದಕ್ಕೆ ಹೋಗಿದ್ದರು ಎಂದರೆ ಇದು ಸಾಮಾನ್ಯವಾದ ವಿಚಾರವಲ್ಲ ಇಂತಹ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಸರಿಯಾಗಿ ನಡೆಯುವುದಕ್ಕೆ ಅವಕಾಶವಿದೆಯೋ ಎಂದು ನಮಗೆ ಶಂಕೆ ಬಂದಿದೆ ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ರಾಜ್ಯದ ಹೈಕೋರ್ಟ್ ತನ್ನ ಘನತೆ ಗೌರವಗಳನ್ನು ಎತ್ತಿ ಹಿಡಿದಿದೆ. ತುರ್ತು ಪರಿಸ್ಥಿತಿಯಲ್ಲೂ ಸಹ ನಿರ್ಭೀತಿಯಿಂದ ಹೈಕೋರ್ಟ್ ನ್ಯಾಯಾಧೀಶರುಗಳು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಇಬ್ಬರು ನ್ಯಾಯಾಧೀಶರನ್ನು ವರ್ಗ ಮಾಡಿದ್ದಾರೆ. ಇದು ಕೇಂದ್ರ ಸರ್ಕಾರದವರ ಗಮನಕ್ಕೂ ಬಂದಿದೆ. ಅವರು ಇಷ್ಟಪಟ್ಟರೆ ಆ ನ್ಯಾಯಾಧೀಶರು ಇಲ್ಲಿಗೆ ಮತ್ತೆ ಬರಬಹುದು ಎಂದು ಸಹ ಹೇಳಿದ್ದಾರೆ. ಆದರೆ ಈ ಬಗ್ಗೆ ಆದದ್ದೇ ಒಂದು. ಅವರು ಬೇರೆ ರಾಜ್ಯಗಳಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ನಡೆದುಕೊಂಡ ರೀತಿಯನ್ನು ನೋಡಿದರೆ ಅದು ನಮಗೆ ಕಳಂಕ ತರುವಂಥದ್ದಾಗಿದೆ. ಈ ಒಂದು ದಿಶೆಯಲ್ಲಿ ನ್ಯಾಯಾಂಗ ಚೆನ್ನಾಗಿ ಕೆಲಸಮಾಡುವುದಕ್ಕೆ ಅವಕಾಶ ಇದೆಯೋ ಎಂದು ನಾವು ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ನ್ಯಾಯಾಂಗ ಸಚಿವರು ಏನು ಹೇಳುತ್ತಾರೆ ಎಂಬುದನ್ನು ನಾವು ಕಾದು ನೋಡುತ್ತೇವೆ ಇನ್ನೊಂದು ವಿಚಾರವೇನೆಂದರೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಬಹಳ ಇವೆ. ಸುಮಾರು ೨೧ ಸಾವಿರ ಅರ್ಜಿಗಳು ಇವೆ ಎಂದು ನಾನು ಕೇಳಿದ್ದೇನೆ. ಅದರಲ್ಲಿ ಲ್ಯಾಂಡ್ ರಿಫಾರಂಸ್‌ಗೆ ಸಂಬಂಧಪಟ್ಟ ಅರ್ಜಿಗಳು ಸುಮಾರು ೧೨, ೧೩ ಸಾವಿರ ಇರಬಹುದೆಂದು ತಿಳಿದು ಬಂದಿದೆ. ರಾಜ್ಯಾಂಗದ ೯ನೇ ಷೆಡ್ಯೂಲ್‌ನಲ್ಲಿ ಈ ಲ್ಯಾಂಡ್ ರಿಫಾರಂಸ್ ಸೇರಿದರೂ ಸಹ ಆರ್ಟಿಕಲ್ ೨೨೬ ಇರುವವರೆಗೂ ಈ ತರಹ ಅರ್ಜಿಗಳು ಬರುತ್ತವೆ. ಆದರೆ ಈ ಲ್ಯಾಂಡ್ ಟ್ರಿಬ್ಯುನಲ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇವು ನ್ಯಾಚುರಲ್ ಜಸ್ಟೀಸ್‌ಗೆ ಮತ್ತು ಕಾನೂನಿಗೆ ವಿರುದ್ಧವಾಗಿ ಕೆಲಸಮಾಡುತ್ತಾ ಇರುವುದರಿಂದ ಹೈಕೋರ್ಟ್‌ನಲ್ಲಿ ರಿಟ್‌ಗಳು ಅಂಗೀಕಾರವಾಗುತ್ತಿವೆ. ಈ ರಿಟ್‌ಗಳನ್ನು ಸ್ವೀಕಾರ ಮಾಡುವಾಗ ಹೈಕೋರ್ಟ್ ನ್ಯಾಯಾಧೀಶರುಗಳು ಉಪಯುಕ್ತವಾದ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಆ ಬಗ್ಗೆ ಅಂತಹ ಯಾವುದೇ ಕ್ರಮವನ್ನು ಇಲ್ಲಿಯವರೆಗೆ ತೆಗೆದುಕೊಳ್ಳದೇ ಇರುವುದು ವಿಷಾದಕರ. ಇನ್ನು ಮುಂದಾದರೂ ಹೈಕೋರ್ಟಿನ ಜಡ್ಜ್‌ಮೆಂಟಿಗೆ ಮನ್ನಣೆ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ, ಆಮೇಲೆ ಹೈಕೋರ್ಟಿನಲ್ಲಿ ಈ ರಿಟ್ ಅರ್ಜಿಗಳು ಯಥೇಚ್ಛವಾಗಿ ಇರುವಾಗ, ಹೈಕೋರ್ಟಿನಲ್ಲಿ ೫ ನ್ಯಾಯಾಧೀಶರುಗಳ ಸ್ಥಾನಗಳು ಖಾಲಿ ಇದ್ದು, ಅವುಗಳನ್ನು ಇನ್ನೂ ಏತಕ್ಕೆ ಭರ್ತಿ ಮಾಡಲಿಲ್ಲ ಎಂಬುದು ನಮಗೆ ತಿಳಿಯದ ಪ್ರಶ್ನೆಯಾಗಿದೆ. ಹೈಕೋರ್ಟಿನಲ್ಲಿರುವ ಈ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾ

ರೆಂದು ನಾನು ನಂಬಿದ್ದೇನೆ. ಆ ಮೇಲೆ ಎಲ್ಲಾ ಇಲಾಖೆಗಳಿಗಿಂತಲೂ ಈ ನ್ಯಾಯಾಂಗ ಇಲಾಖೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದೆ ಎಂಬ ವಿಚಾರವನ್ನು ನಾವು ಒಪ್ಪಿಕೊಳ್ಳಬೇಕು. ಇಲ್ಲಿ ಯಾವ ಒಂದು ಭ್ರಷ್ಟಾಚಾರವೂ ಕಂಡುಬರುತ್ತಾ ಇಲ್ಲ. ಆದರೆ ಇತ್ತೀಚೆಗೆ ಈ ನ್ಯಾಯಾಂಗ ಇಲಾಖೆಗೆ ದಕ್ಷರೂ ಅನುಭವಶಾಲಿಗಳೂ ಆದಂಥ ಲಾಯರ್‌ಗಳು ಬರುವುದು ಕಡಿಮೆಯಾಗಿದೆ. ಏಕೆಂದರೆ ಅವರಿಗೆ ಅಲ್ಲಿ ಕೊಡತಕ್ಕಂಥ ಸಂಬಳ ಕಡಿಮೆ, ಇಂಸೆಂಟಿವ್ ಸಹ ಸಿಹ ಸಿಕ್ಕುತ್ತಾ ಇಲ್ಲ. ಆದ್ದರಿಂದ ಬೇರೆ ಕಡೆ ಹೆಚ್ಚಾಗಿ ವಕಾಲತ್ತು ಇರತಕ್ಕಂಥ ಲಾಯರ್‌ಗಳು ಮುನ್ಸೀಫ್ ಕೆಲಸಕ್ಕೆ, ಮ್ಯಾಜಿಸ್ಟ್ರೇಟ್ ಕೆಲಸಕ್ಕೆ ಬರುತ್ತಿಲ್ಲ ಎಂದು ಕಂಡು ಬರುತ್ತಿದೆ. ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಅವರನ್ನು ರೆಕ್ರೂಟ್‌ಮೆಂಟ್ ಮಾಡಲು ಇಂಟರ್‌ವ್ಯೂಗೆ ಕರೆದಾಗ ಅನೇಕರು ಬರಲಿಲ್ಲ ಎಂದು ಗೊತ್ತಾಗಿದೆ. ಆದ್ದರಿಂದ ಹೈಕೋರ್ಟ್‌ನವರು ಮತ್ತು ನಮ್ಮ ಸರ್ಕಾರದವರು ಇದನ್ನು ಪರಿಶೀಲಿಸಿ, ದಕ್ಷರೂ, ಅನುಭವಶಾಲಿಗಳೂ ಆದಂತ ಲಾಯರ್‌ಗಳು ಈ ನ್ಯಾಯಾಂಗ ಇಲಾಖೆಗೆ ಬರುವುದಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಮತ್ತು ಅವರಿಗೆ ಸಂಬಳ ಸಾರಿಗೆಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ ಈ ನ್ಯಾಯಾಧೀಶರಿಗೆ ಮತ್ತು ಮ್ಯಾಜಿಸ್ಟ್ರೇಟರಿಗೆ ಬೇರೆ ಕಡೆಗಳಲ್ಲಿ ಈ ಕೆಲಸಕ್ಕೆ ಹೋದಾಗ ವಾಸಕ್ಕೆ ಮನೆಗಳು ಇರುವುದಿಲ್ಲ. ಅವರು ಹೋದಕಡೆ ಬೇರೆಯವರ ಆಶ್ರಯದಲ್ಲಿ ಬಾಡಿಗೆ ಮನೆಯಲ್ಲಿ ಇರಬೇಕಾಗುತ್ತದೆ. ಅಂತಹ ಸಮಯದಲ್ಲಿ ಅವರಿಗೆ ಎಂಬರಾಸಿಂಗ್ ಆಗುವಂತಾದ್ದು ಇರುತ್ತದೆ. ಆದ್ದರಿಂದ ನ್ಯಾಯಾಂಗ ಇಲಾಖೆಯವರು ಅವರಿಗೆ ಪ್ರತ್ಯೇಕವಾದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದರಲ್ಲಿ ಸರ್ಕಾರದವರ ಹೊಣೆಗಾರಿಕೆಯೂ ಇದೆ ಎಂದು ನಾನು ಹೇಳುತ್ತೇನೆ. ಇನ್ನು ಬಹುಮುಖ್ಯವಾಗಿ ಈ ರೆಂಟ್ ಕಂಟ್ರೋಲ್‌ಗೆ ಸಂಬಂಧಪಟ್ಟಂಥ ಕೇಸ್‌ಗಳು ಬಹಳ ದಿವಸಗಳಿಂದ ಪೆಂಡಿಂಗ್ ಇದೆ. ಅವು ಆದಷ್ಟು ಬೇಗ ವಿಲೇವಾರಿ ಆಗಬೇಕಾಗಿದೆ. ಅದು ೪-೫ ವರ್ಷಗಳಿಂದ ವಿಲೇವಾರಿ ಆಗಿಲ್ಲ. ಇನ್ನು ೬ ತಿಂಗಳೊಳಗಾಗಿ ಈ ಕೇಸುಗಳು ಇತ್ಯರ್ಥವಾಗುವ ಹಾಗೆ ನೋಡಿಕೊಳ್ಳಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಆಮೇಲೆ ಈ ಡಿಸ್ಟ್ರಿಕ್ಟ್ ಜಡ್ಜಸ್ ಕೋರ್ಟನ್ನು ಜಿಲ್ಲೆಗೆ ಒಂದೊಂದು ಮಾಡಿದ್ದಾರೆ. ಮೊದಲು ಮೈಸೂರು ಡಿವಿಜನ್‌ಗೆ ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳು ಸೇರಿದ್ದವು. ಶಿವಮೊಗ್ಗ ಡಿವಿಜನ್‌ಗೆ ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಸೇರಿದ್ದವು. ಆಗ ಹೈಕೋರ್ಟ್‌ಗಳಲ್ಲಿ ಕೆಲಸ ಹೆಚ್ಚು ಇತ್ತು. ಈಗ ಪ್ರತ್ಯೇಕವಾಗಿ ಜಿಲ್ಲೆಗೆ ಒಂದೊಂದು ಜಿಲ್ಲಾಕೋರ್ಟ್ ಮತ್ತು ಸೆಷನ್ ಕೋರ್ಟ್ ಎಂದು ಮಾಡಿರುವುದರಿಂದ ಅಲ್ಲಿ ಸಿಬ್ಬಂದಿ ಜಾಸ್ತಿಯಾಗಿದೆ. ಆದರೆ ಹೆಚ್ಚು ಕೆಲಸ ಇಲ್ಲ. ಕೆಲವರಿಗೆ ೧½, ೨ ಗಂಟೆಯವರೆಗೂ ಕೆಲಸ ಇರುವುದಿಲ್ಲ. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚು ಬರುತ್ತದೆ. ಈ ಬಗ್ಗೆ ಎರಡು ಜಿಲ್ಲೆಗಳನ್ನು ಒಂದು ಮಾಡಿ ಅದಕ್ಕೆ ಒಂದು ಕೋರ್ಟ್ ಮಾಡುವುದು ನ್ಯಾಯವಾಗಿದೆ. ಈ ರೀತಿ ಮಾಡುವುದರಿಂದ ಸರ್ಕಾರಕ್ಕೆ ಆಗುವ ಖರ್ಚು ತಪ್ಪಿ ಹಣ ಉಳಿತಾಯವಾಗುತ್ತದೆ ಎಂದು ಸಲಹೆ ಮಾಡುತ್ತೇನೆ. ಆಮೇಲೆ ಹಾಸನ ಆಲೂರು, ಬೇಲೂರು, ಸಕಲೇಶಪುರ ಈ ನಾಲ್ಕು ತಾಲ್ಲೂಕುಗಳನ್ನು ಸೇರಿಸಿ, ಇವೆಲ್ಲಕ್ಕೂ ಒಂದು ಮ್ಯಾಜಿಸ್ಟ್ರೇಟ್ ಕೋರ್ಟ್ ಹಾಸನದಲ್ಲಿ ಇದೆ. ಮಲೆನಾಡು ಗಡಿಯಿಂದ ಇಲ್ಲಿಗೆ ಬರಬೇಕಾದರೆ ೬೦-೭೦ ಮೈಲಿ ಆಗುತ್ತದೆ. ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಸಕಲೇಶಪುರದಲ್ಲಿ ಒಂದು ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟನ್ನು ಕೊಡಬೇಕೆಂದು ಬಹಳ ದಿವಸಗಳಿಂದ ನಾವು ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ನ್ಯಾಯಾಂಗ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಸಕಲೇಶಪುರಕ್ಕೆ ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಪ್ರಾಸಿಕ್ಯೂಷನ್ ಡೈರೆಕ್ಟೋರೇಟ್ ಏನಿದೆ ಇದು ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸಮಾಡಬೇಕಾಗಿದೆ. ಕೆಲವು ಕಡೆಗಳಲ್ಲಿ ೫-೬ ವರ್ಷಗಳಿಂದ ಕೇಸ್‌ಗಳು ಡಿಸ್ಪೈಡ್ ಆಗಿಲ್ಲ. ಅಲ್ಲಿ ಕೇಸ್‌ಗಳನ್ನು ಸರಿಯಾಗಿ ನೋಡುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಅಸಿಸ್ಟೆಂಟ್ ಪ್ರಾಸಿಕ್ಯೂಟರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಈ ಕೇಸ್‌ಗಳ ಬಗ್ಗೆ ಹೆಚ್ಚಿನ ನಿಗಾ ವಹಿಸುತ್ತಾ ಇಲ್ಲ. ಇದರಿಂದ ಲಿಟಿಗೆಂಟ್ ಪಬ್ಲಿಕ್‌ಗೆ ತೊಂದರೆಯಾಗುತ್ತಿದೆ. ಆದ್ದರಿಂದ ಈ ಡೈರೆಕ್ಟೋರೇಟ್ ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸಮಾಡುವಂತೆ ತಾವು ನೋಡಿಕೊಳ್ಳಬೇಕು ಎಂದು ಮಾನ್ಯ ನ್ಯಾಯಾಂಗ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಮುಖ್ಯವಾಗಿ ಈ ಇಲಾಖೆಯಲ್ಲಿ ನಿರ್ಭೀತಿಯಿಂದ, ನಿರ್ಭಯವಾಗಿ ಕೆಲಸ ಮಾಡುವಂಥಾ ಒಂದು ವಾತಾವರಣವಿರಬೇಕು ಮತ್ತು ಕಾರ್ಯಾಂಗ ಯಾವ ರೀತಿಯಿಂದಲೂ ನ್ಯಾಯಾಂಗದ ಮೇಲೆ ಪ್ರಭಾವವನ್ನು ಹೇರಬಾರದು. ಮತ್ತೆ ರೆಕ್ರೂಟ್‌ಮೆಂಟ್ ಬಗ್ಗೆ ಹೇಳುವುದಾದರೆ ಮುನ್ಸೀಫ್, ಮ್ಯಾಜಿಸ್ಟ್ರೇಟ

ರನ್ನು ಅಪಾಯಿಂಟ್ ಮಾಡುವಾಗ ದಕ್ಷರನ್ನು ನೇಮಕ ಮಾಡಬೇಕು, ಬರೀ ಜಾತಿ ಆಧಾರದ ಮೇಲೆ ಹೋದರೆ ಈ ಇಲಾಖೆಯಲ್ಲಿಯೂ ಸಹ ದಕ್ಷತೆ ಹೋಗಿ ಜನಗಳಿಗೆ ನ್ಯಾಯ ದೊರಕುವುದಿಲ್ಲ. ಆದುದರಿಂದ ಅನುಭವಶಾಲಿಗಳು ದಕ್ಷರೂ ಬರಬೇಕಾದರೆ ತಾವು ಹೆಚ್ಚಿನ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಆಮೇಲೆ ಸ್ಟೇಷನರಿ ಪ್ರಿಂಟಿಂಗ್ ಪ್ರೆಸ್ ಬಗ್ಗೆ ಮಾತನಾಡಬೇಕೆಂದರೆ ಬಹಳ ವ್ಯಥೆಯಾಗುತ್ತದೆ. ಏತಕ್ಕೆಂದರೆ ನಮ್ಮ ಕರ್ನಾಟಕ ಸರ್ಕಾರದವರು ಗೆಜೆಟ್‌ನ್ನು ಏನು ಪ್ರಿಂಟ್ ಮಾಡಿಸುತ್ತಿದ್ದಾರೆ ಅದರಲ್ಲಿರುವ ತಪ್ಪುಗಳನ್ನು ನೋಡಿದರೆ ಅಲ್ಲಿ ಪ್ರೂಫ್ ರೀಡರ್‌ಗಳು ಇದ್ದಾರೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಮತ್ತು ಅಲ್ಲಿ ಪ್ರಿಂಟಿಂಗ್‌ಗೆ ಉಪಯೋಗಿಸತಕ್ಕಂಥ ಮೆಟೀರಿಯಲ್ಸ್‌ನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಮತ್ತು ಪ್ರೂಫ್ ರೀಡಿಂಗ್ ಚೆನ್ನಾಗಿರುವುದಿಲ್ಲ. ಅಲ್ಲಿ ಎಫಿಶಿಯೆನ್ಸಿ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ ಇದನ್ನು ಸಂಬಂಧಪಟ್ಟ ಸಚಿವರು ಗಮನದಲ್ಲಿಟ್ಟುಕೊಂಡು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಉಪಾಧ್ಯಕ್ಷರೇ, ಬೇಡಿಕೆಯ ಸಂಖ್ಯೆ ೩, ೧೫, ೭ ಏನಿದೆ ಅದನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ.

ಅಬ್ಕಾರಿ ತಮಗೆಲ್ಲಾ ಗೊತ್ತಿರುವ ಹಾಗೆ, ಈ ವನಲಕ್ಷ್ಮಿ, ವರಲಕ್ಷ್ಮಿ, ಧನಲಕ್ಷ್ಮಿ ಮತ್ತು ಸುರಾಲಕ್ಷ್ಮಿ, ಈ ಬಾಬುಗಳಿಂದ ವರ್ಷೇವರ್ಷೇ ಉತ್ಪನ್ನ ಜಾಸ್ತಿಯಾಗುತ್ತಿದೆ. ಆದರೆ ಸುರಾಲಕ್ಷ್ಮಿ ಏನಿದೆ ಆ ಕುಡಿತದ ಹಣದಿಂದ ಸರ್ಕಾರವನ್ನು ನಡೆಸುವುದು ಬೇಡ. ಇವತ್ತು ಇದರಿಂದ ಏನಾಗಿದೆಯೆಂದರೆ ಹೆಂಡದ ಅಂಗಡಿಗಳನ್ನು ಎಲ್ಲೆಲ್ಲಿ ಇಡಬಾರದೆಂದು ಇದೆಯೋ ಅಲ್ಲೆಲ್ಲಾ ಕಾಣುತ್ತಿದೆ. ಕಾಲೇಜುಗಳ ಹತ್ತಿರ, ದೇವಸ್ಥಾನದ ಹತ್ತಿರ, ಕಮರ್ಷಿಯಲ್ ಶಾಪ್‌ಗಳ ಹತ್ತಿರ ಮಾರುತ್ತಿರುವುದು ಕಂಡುಬರುತ್ತಿದೆ. ಆ ರೀತಿ ಮಾಡಬಾರದೆಂಬುದು, ಬರೀ ನಿಮ್ಮ ಪುಸ್ತಕದಲ್ಲಿ ಕಾನೂನಿನ ರೂಪದಲ್ಲಿದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನೀವು ಹೆಂಡವನ್ನೇನು ಅಥವ ಶರಾಬು ಹರಾಜು ಹಾಕುತ್ತೀರಿ ? ಅದನ್ನು ಕೆಲವು ಫ್ಯಾಮಿಲಿಗಳು ಮಾತ್ರ ಮನಾಪಲಿ ಮಾಡಿಕೊಂಡು ಅವರೇ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಬಡವರೂ ಲಾಭ ಮಾಡಿಕೊಳ್ಳುವುದು ತಪ್ಪುತ್ತಿದೆ. ಆದುದರಿಂದ ತಾವು ತಾಲ್ಲೂಕ್‌ವಾರ್, ಜಿಲ್ಲಾವಾರು ಹರಾಜು ಹಾಕಿ ಬಡವರಿಗೂ ಅದರಿಂದ ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಇವತ್ತು ಈಚಲ ಮರಗಳು ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ ಕಾರ್ಬನ್ ಕ್ಲೋರೈಡ್ ಮತ್ತು ಇನ್ನು ಯಾವುದೋ ಔಷದಿಯನ್ನು ಹಾಕುತ್ತಾರೆ ಅಂತೆ. ಅದರಿಂದ ನೊರೆ ಜಾಸ್ತಿ ಬರುತ್ತಂತೆ. ಇದರಿಂದ ಜನರಿಗೆ ಅನಾರೋಗ್ಯದಿಂದ ನಶಿಸಿ ಹೋಗುತ್ತಾರೆ. ಈಚಲು ಮರಗಳು ಕಮ್ಮಿಯಾಗುತ್ತಿವೆ. ಆದುದರಿಂದ ಇದರ ಬಗ್ಗೆ ನಮ್ಮ ಸರ್ಕಾರದವರು ಒಂದು ಪಾಲಿಸಿಯನ್ನು ಇಟ್ಟುಕೊಂಡು, ಅಂಥ ಕಡಿಯುವವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕುಡಿತದ ಬಗ್ಗೆ ಹೇಳುವುದಾದರೆ ಇದು ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. ಆದರೆ ಇವತ್ತು ನೀವು ಪಾನ ನಿರೋಧವನ್ನು ನಮ್ಮ ಸಂಸ್ಥಾನದಲ್ಲಿ ಮೊದಲು ಜಾರಿಗೆ ತಂದರೆ ಇತರ ರಾಜ್ಯಗಳವರೂ ನಮ್ಮಂತೆ ಅನುಸರಿಸಬಹುದು. ಪೂಜ್ಯ ಮಹಾತ್ಮಾ ಗಾಂಧೀಜಿಯವರು ಏನು ಹೇಳಿದ್ದರು ಅದನ್ನು ನಾನು ಈಗ ಪುನಃ ತಮಗೆ ಜ್ಞಾಪಿಸಲು ಇಷ್ಟಪಡುತ್ತೇನೆ. ಆದುದರಿಂದ ಇವತ್ತು ತಾವು ಈಚಲ ಮರಗಳನ್ನು ಕಡಿಯುವುದನ್ನು ಕಡಿಮೆ ಮಾಡಿಸಿದರೆ, ನಿಮಗೆ ಸಾಧ್ಯವಾದಷ್ಟು ಹೆಂಡ ಸಿಗುತ್ತದೆ. ಹೆಂಡ, ಜಿನ್, ರಮ್, ಬ್ರಾಂದಿ, ಬೀರು, ಇನ್ನು ಏನೇನು ಹೇಳುತ್ತಾರೆ ಅದನ್ನು ಮೊದಲು ಮನೆಯಲ್ಲಿ ಕುಡಿಯುತ್ತಿದ್ದರು. ಆದರೆ ಇವತ್ತು ಹುಡುಗರು, ಯುವಕರು ರಸ್ತೆಗಳಲ್ಲಿಯೇ ಕುಡಿದು ತೂರಾಡುತ್ತಿರುವುದನ್ನು ನಾವು ಕಾಣಬಹುದು. ಆದುದರಿಂದ ಇದನ್ನು ಆದಷ್ಟು ಊರಿನಿಂದ ಆಚೆಗೆ ಸಾಗಿಸಬೇಕೆಂದು ಹೇಳಬಯಸುತ್ತೇನೆ. ಆದರೆ ಈ ವ್ಯವಹಾರದಲ್ಲಿ ಮಾಮೂಲಿ ನಡೆಯುತ್ತಿದೆಂದು ಕೇಳಿಬರುತ್ತಿದೆ. ಅದರಲ್ಲಿ ಪೋಲೀಸರು ಮತ್ತು ಅಧಿಕಾರಿಗಳೂ ಭಾಗಿಯಾಗಿದ್ದಾರೆಂದು ನಮಗೆ ತಿಳಿದು

ಬರುತ್ತಿದೆ. ತಮ್ಮ ಮುಖಾಂತರ ಯುವಕರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಆದಷ್ಟು ಕುಡಿತವನ್ನು ಕಡಿಮೆ ಮಾಡಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರಿಂದ ಯುವಕರ ನಡೆ ನುಡಿಯ ಮೇಲೆ ಪ್ರಭಾವ ಬೀರುತ್ತದೆ.

ಇನ್ನು ಕನ್ನಡ ಭಾಷೆಯ ಬಗ್ಗೆ ತಾವು ಮಾತನಾಡುತ್ತೀರಿ. ಆದರೆ ಇವತ್ತು ನಮ್ಮಲ್ಲಿ ಕನ್ನಡ ಟೈಪರೈಟರ್‌ಗಳು ಇಲ್ಲ. ಬರೀ ಎರಡೂವರೆ ಸಾವಿರ ಟೈಪ್‌ರೈಟರ್‌ಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತೀರಿ. ಕನ್ನಡ ಭಾಷೆಯನ್ನು ಹೈಕೋರ್ಟ್‌ಗಳಲ್ಲಿ ತಾಲ್ಲೂಕ್ ಆಫೀಸ್‌ಗಳಲ್ಲಿ ಕನ್ನಡವನ್ನೇ ಕಡ್ಡಾಯವಾಗಿ ಬಳಸಬೇಕು ಮತ್ತು ರೂಲ್ಸ್ ರೆಗ್ಯುಲೇಷನ್‌ಗಳನ್ನೆಲ್ಲಾ ಕನ್ನಡಕ್ಕೆ ತರ್ಜುಮೆ ಮಾಡಿಸಬೇಕು. ಇವತ್ತು ನೀವು ಕನ್ನಡ ಟೈಪ್‌ರೈಟರ್‌ನ್ನು ಬೇರೆ ಕಡೆಯಿಂದ ತರಿಸುತ್ತಿದ್ದೀರಿ ಏತಕ್ಕೆ ನಮ್ಮ ಸರ್ಕಾರದವರೇ 'ಕನ್ನಡ ಟೈಪ್‌ರೈಟರ್ ಕಾರ್ಖಾನೆಯೊಂದನ್ನು'' ಸ್ಥಾಪಿಸಬಾರದೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ತಾವು ಕನ್ನಡ ಟೈಪ್‌ರೈಟಿಂಗ್ ಕಲಿಯುವವರಿಗೆ ಇನ್‌ಸೆಂಟಿವ್ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಅದು ಏನೂ ಸಾಲದು. ಇವರ ಸಂಖ್ಯೆ ಹೆಚ್ಚಬೇಕು.

ಇನ್ನು ಪಬ್ಲಿಕೇಷನ್ ಬಗ್ಗೆ ಹೇಳುವುದಾದರೆ, ಕರ್ನಾಟಕ ಯೂನಿವರ್ಸಿಟಿಯಲ್ಲಿ ೫೦ ಲಕ್ಷ, ೮೦ ಲಕ್ಷ ರೂಪಾಯಿಗಳ ಪುಸ್ತಕಗಳು ಬಿದ್ದಿವೆ ಎಂದು ತಿಳಿದು ಬಂದಿದೆ, ಇದಕ್ಕೆ ಕಾರಣವೇನೆಂದರೆ ಜನರು ಓದುವುದನ್ನು ಕಡಿಮೆ ಮಾಡಿರುವುದೇ ಆಗಿದೆ. ಆದುದರಿಂದ ಅಂಥಾ ಪುಸ್ತಕಗಳನ್ನು ತಾವು ಕಡಿಮೆ ರೇಟ್‌ನಲ್ಲಿ ಸಂಘ ಸಂಸ್ಥೆಗಳಿಗೆ, ಲೈಬ್ರರಿಗಳಿಗೆ ಏತಕ್ಕೆ ಕೊಡುತ್ತಿಲ್ಲ ಎಂದು ಕೇಳಬಯಸುತ್ತೇನೆ. ಆ ರೀತಿ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಕೊಟ್ಟರೆ ಅದರಿಂದ ಸರ್ಕಾರಕ್ಕೆ ಸ್ವಲ್ಪ ಲಾಭವಾದರೂ ಆಗುತ್ತದೆ. ಇನ್ನು ಬರಹಗಾರರಿಗೆ ಎಷ್ಟು ಜನಕ್ಕೆ ಉತ್ತೇಜನ ಕೊಟ್ಟಿದ್ದೀರಿ ಎಂದು ನಾನು ಕೇಳಬಯಸುತ್ತೇನೆ. ಇನ್ನು "Gem Dictionary'' ಪ್ರತಿಯೊಂದು ಮನೆಯಲ್ಲೂ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ನಾನೇ ಕೇಳಿದರೆ, ನನಗೊಂದು ಅದರ ಕಾಪಿನೂ ಇನ್ನೂ ಸಿಗುತ್ತಿಲ್ಲ. ಆದುದರಿಂದ ಅದು ಪ್ರತಿಯೊಬ್ಬ ಮನುಷ್ಯನಿಗೂ ಸುಲಭ ದರದಲ್ಲಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕನ್ನಡ ಭಾಷೆಯ ಅಭಿಮಾನ ತಮಗೂ ಇರಬೇಕು. ನಾನು ಮೊನ್ನೆ ಮೈಸೂರಿಗೆ ಹೋಗಿದ್ದೆ. Regional Language Regional Englishನಲ್ಲಿ Research ನಡೆಯುತ್ತಿತ್ತು. ಕನ್ನಡ ಲಿಪಿಗೂ ಮತ್ತು ತೆಲುಗು ಲಿಪಿಗೂ ಕೇವಲ ೫–೬ ಅಕ್ಷರಗಳು ವ್ಯತ್ಯಾಸವಿದೆ ಎಂಬುದನ್ನು ತಿಳಿದು ಬಂತು. ಆದುದರಿಂದ "ಲಿಪಿ ಸಂಧಾರಣೆಗೂ'' ತಾವು ಶ್ರಮವಹಿಸಿದರೆ ಕನ್ನಡ ತೆಲುಗು ಏಕ ಲಿಪಿಯಾಗಿ ಕನ್ನಡಿಗರ ಮತ್ತು ತೆಲುಗರ ಭಾವೈಕ್ಯತೆ ಉಂಟಾಗಲು ಸಾಧ್ಯ, ಅದು ಆಗಲು ಮೊದಲು ನೀವು ಕನ್ನಡ ಟೈಪ್‌ರೈಟರ್‌ಗಳನ್ನು ನಮ್ಮ ಸರ್ಕಾರದವರೇ ತಯಾರಿಸಬೇಕು. ಈಗ ಮೈಕ್ರೋ ಫಿಲಂ ಬಂದಿರುವಂಥಾ ಕಾಲದಲ್ಲಿ ಇನ್ನು ನಮ್ಮ ಸರ್ಕಾರದವರು ಕನ್ನಡ ಟೈಪ್‌ರೈಟರ್‌ಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದರೆ ಬಹಳ ವಿಶಾದಕರವಾದ ಸಂಗತಿ ಎಂದು ಮತ್ತೊಮ್ಮೆ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಟಿವ್ ಜಸ್ಟೀಸ್ ಬಗ್ಗೆ ಹೇಳುವುದಾದರೆ ಕೋಲಾರ ಡಿಸ್ಟ್ರಿಕ್ಟ್ ಮಾಲೂರು ತಾಲ್ಲೂಕು ಕದಬಳ್ಳಿ ಗ್ರಾಮದಲ್ಲಿರುವ ಶ್ರೀ ಪ್ರಾಣೇಶ್ವರ ಮತ್ತು ಪಾಪಯ್ಯ ಎಂಬುವವರ ಕೇಸು ಸುಮಾರು ೫೬ ವರ್ಷಗಳಿಂದಲೂ ನಡೆಯುತ್ತಿದೆ. ಅಂದರೆ ನಾನು ಹುಟ್ಟುವುದಕ್ಕಿಂತಲೂ ಒಂದು ವರ್ಷದಿಂದಲೂ ನಡೆಯುತ್ತಿದ್ದು ಅದು ಇನ್ನೂ ಮುಗಿದಿಲ್ಲ. ಆ ಕೇಸು ಇನ್ನೂ ನಡೆಯುತ್ತಲೇ ಇದೆ. ಇದರಿಂದ ಊಹಿಸಬಹುದು ನ್ಯಾಯ ಎಷ್ಟು ಜಾಗ್ರತೆಯಾಗಿ ಸಿಕ್ಕುತ್ತೆ ಎಂದು? ನ್ಯಾಯ, ಧರ್ಮವೆಂದು ಏನು ಹೇಳುತ್ತೇವೆ. ಅದನ್ನು ರಕ್ಷಣೆ ಮಾಡತಕ್ಕಂಥ ಜನರಿಗೇ ಒಳ್ಳೆಯ ಕ್ವಾರ್ಟರ್ಸ್ ಇಲ್ಲ. ಆದುದರಿಂದ ಪ್ರತಿಯೊಂದು ತಾಲೂಕಿನಲ್ಲಿಯೂ ಜಡ್ಜಸ್‌ಗೆ ಕ್ವಾರ್ಟರ್ಸ್‌ನ್ನು ಕೊಡಬೇಕೆಂದು ಹೇಳುತ್ತೇನೆ. ಎಷ್ಟೋ ಕೇಸ್‌ಗಳಿಗೆ ವಕೀಲರು ಬರುತ್ತಾರೆ. ಬಂದಾಗ ಅವರೇನೋ ಬಾರ್ ಅಸೋಷಿಯೇಷನ್‌ನಲ್ಲಿ ಇರುತ್ತಾರೆ. ಆದರೆ ಬಡ ಕೇಸ್‌ದಾರರು ಕಡ್ಲೆಕಾಯಿ ತಿಂದುಕೊಂಡು ಅಲ್ಲೆಲ್ಲೋ ಮರದ ನೆರಳಿನಲ್ಲಿ ಕಾಲ ಕಳೆಯಬೇಕಾಗುತ್ತದೆ. ಆದುದರಿಂದ ಲಿಟಿಗೆಂಟ್ ರೆಸ್ಟ್ ಹೌಸ್‌ನ್ನು (Letigent Rest House) ಕಟ್ಟಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೋರ್ಟ್‌ಗಳಲ್ಲಿರುವ ಕೇಸ್‌ಗಳನ್ನು ಬೇಗನೆ ಇತ್ಯರ್ಥ ಮಾಡಲು ಇನ್‌ಸೆಂಟಿವ್ ಕೊಟ್ಟರೆ ಸಹ ಒಳ್ಳೆಯದೆಂದು ಹೇಳುತ್ತೇನೆ. ಇನ್ನು ಒಳ್ಳೆಯ ಸ್ಟೆನೋಗ್ರಾಫರ್ಸ್ ಕೋರ್ಟಿನಲ್ಲಿ ಸಿಕ್ಕುವುದೇ

ಇಲ್ಲ. ಏತಕ್ಕೆಂದರೆ ಹೊರಗಡೆ ಇವರಿಗೆ ೮೦೦, ೧೦೦೦ ರೂ.ಗಳ ಸಂಬಳ ಸಿಗುತ್ತದೆ. ಆದರೆ ಈಗ ಕೋರ್ಟಿನಲ್ಲಿರುವ ಸಂಬಳ ಸ್ಕೇಲುಗಳು ಬಹಳ ಕಡಿಮೆ ಇರುವುದರಿಂದ ಅದನ್ನು ಅಪ್ ಗ್ರೇಡ್ ಮಾಡಿ ಅವರಿಗೆ ಹೆಚ್ಚಿನ ಸಂಬಳ ಸವಲತ್ತುಗಳನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಬಗ್ಗೆ ಒಂದು ಕೊನೆಯ ಮಾತನ್ನು ಹೇಳಬಯಸುತ್ತೇನೆ. ನೀವು ಕೋರ್ಟಿನಲ್ಲಿ ರೂಲ್ಸ್, ರೆಗ್ಯುಲೇಷನ್‌ಗಳನ್ನು ಮತ್ತು ತೀರ್ಪುಗಳನ್ನು ಕನ್ನಡದಲ್ಲಿ ಕೊಡುವುದಕ್ಕೆ, ಕನ್ನಡಕ್ಕೆ ತರ್ಜುಮೆ ಮಾಡುವುದಕ್ಕೆ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಷಾಂತರಕಾರರನ್ನು ನೇಮಿಸಬೇಕು. ಇವತ್ತು ಜಡ್ಜ್ ಕೊಡತಕ್ಕಂಥ ತೀರ್ಪು ಸರಳವಾಗಿ, ಸುಲಭವಾಗಿ, ಸಾಮಾನ್ಯ ಜನರಿಗೂ ಎಡಗೈ ಹೆಬ್ಬೆಟ್ಟು ಒತ್ತತಕ್ಕಂಥವರಿಗೂ ಅರ್ಥವಾಗುವಂತಿರಬೇಕು. ಆದುದರಿಂದ ಇವತ್ತು ಎಷ್ಟು ಜನ ಭಾಷಾಂತರಕಾರರನ್ನು ನೇಮಿಸಿದ್ದೀರಿ ಎಂದು ಕೇಳಬಯಸುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಕನ್ನಡ ಭಾಷೆ ಅಭಿವೃದ್ಧಿಯಾಗಬೇಕು, ನ್ಯಾಯ ಸಿಗಬೇಕು ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5–30 P.M.

† ಶ್ರೀ ಹೆಚ್. ಡಿ ದೇವೇಗೌಡ (ಹೊಳೇನರಸೀಪುರ) —ಸನ್ಮಾನ್ಯ ಉಪ ಸಭಾಪತಿಗಳೇ, ಅಬ್ಕಾರಿ ಹಾಗೂ ನ್ಯಾಯಾಂಗ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಾನ್ಯ ಸಚಿವರು ಸಭೆಯ ಮುಂದಿಟ್ಟಿದ್ದಾರೆ. ಈ ಬೇಡಿಕೆಗಳನ್ನು ಸಭೆಯು ಅಂಗೀಕಾರ ಮಾಡುವುದಕ್ಕಿಂತ ಪೂರ್ವದಲ್ಲಿ ಇಲಾಖೆಗಳ ಕಾರ್ಯಭಾರ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ಒಂದು ಅವಕಾಶವಿದೆ. ಮಾರಾಟ ತೆರಿಗೆ ಇಲಾಖೆ ಬಿಟ್ಟರೆ ಸರ್ಕಾರಕ್ಕೆ ಹೆಚ್ಚು ಆದಾಯವನ್ನು ತರುವ ಇಲಾಖೆ ಎಂದರೆ ಅಬ್ಕಾರಿ ಇಲಾಖೆ. ಈ ಇಲಾಖೆಯ ಆಡಳಿತ ಸರಿಯಾದ ಮಾರ್ಗದಲ್ಲಿ ನಡೆಯದಿದ್ದರೆ, ಸರ್ಕಾರದ ಖಜಾನೆಗೆ ಬರುವ ಹಣ ಹೊರಗಡೆ ನಿಂತು ಸರ್ಕಾರವನ್ನು ನಡೆಸುವ ಕೆಲವು ಶಕ್ತಿಯುತ ಜನರ ಜೇಬಿಗೆ ಹೋಗುತ್ತದೆ. ಇದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು. ನಾವು ಅಧಿಕಾರಕ್ಕೆ ಬಂದ ಮೇಲೆ ಪ್ರತಿ ವರ್ಷ ಅಬ್ಕಾರಿ ಇಲಾಖೆಯ ವರಮಾನ ಹೆಚ್ಚುತ್ತಾ ಬಂದಿದೆ ; ಇದರಿಂದ ಇಲಾಖೆಯ ದಕ್ಷತೆ ಹೆಚ್ಚಿದೆ, ಪ್ರಾಮಾಣಿಕತೆ ಹೆಚ್ಚಿದೆ ಎಂದು ಸಮರ್ಥನೆ ಮಾಡಿಕೊಳ್ಳುವ ವಾದವನ್ನು ಸಭೆಯ ಮುಂದೆ ಮಾನ್ಯ ಸಚಿವರು ಮಂಡಿಸಬಹುದು. ನಮ್ಮ ರಾಜ್ಯದಲ್ಲಿ ಪಾನ ನಿರೋಧವನ್ನು ರದ್ದು ಮಾಡಿದ ವರ್ಷ ಅಬ್ಕಾರಿ ಇಲಾಖೆಗೆ ಬಂದ ವರಮಾನವನ್ನು ಈಗಿನ ವರಮಾನಕ್ಕೆ ತುಲನೆ ಮಾಡಿದರೆ, ಸುಮಾರು ಐವತ್ತು ಕೋಟಿ ರೂಪಾಯಿಗಳ ವರಮಾನ ಇದೆ ಎಂದು ಗೊತ್ತಾಗುತ್ತದೆ. ಆದರೆ, ಈ ಇಲಾಖೆ ಉತ್ತಮ ರೀತಿಯಲ್ಲಿ ಹಾಗೂ ಪ್ರಾಮಾಣಿಕ ರೀತಿಯಲ್ಲಿ ಕೆಲಸ ಮಾಡಿದರೆ ಕನಿಷ್ಟ ಪಕ್ಷ ಇನ್ನೂ ಇಪ್ಪತ್ತು ಕೋಟಿ ರೂಪಾಯಿಗಳನ್ನು ಸರ್ಕಾರದ ಖಜಾನೆಗೆ ತುಂಬುವುದಕ್ಕೆ ಸಾಧ್ಯವಿದೆ. ಈ ಇಪ್ಪತ್ತು ಕೋಟಿ ರೂಪಾಯಿಗಳು ಇಂದು ಸರ್ಕಾರವನ್ನು ಉಳಿಸತಕ್ಕ ಹೊರಗಡೆ ಇರುವ ಶಕ್ತಿಯುತ ಜನರ ಕಿಸೆಗೆ ಹೋಗುತ್ತಿದೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ನಮ್ಮಲ್ಲಿ ಟಾಡಿ ತಯಾರಿಸುವುದಕ್ಕೆ ಸಾಕಾಗುವಷ್ಟು ಮರಗಳಿಲ್ಲ. ಆದುದರಿಂದ, ಆಂಧ್ರಪ್ರದೇಶ ಮತ್ತಿತರ ನೆರೆರಾಜ್ಯಗಳಿಂದ ಟಾಡಿಯನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಅಲ್ಲಿಂದ ತಂದ ಟಾಡಿಯನ್ನು ಹಾಗೆಯೇ ನಮ್ಮ ಜನರಿಗೆ ಪೂರೈಕೆಯಾಗುತ್ತಿಲ್ಲ ಕೆಲವು ಕಂಟ್ರಾಕ್ಟರುಗಳು ಇದಕ್ಕೆ ಹೆಚ್ಚು ನೀರನ್ನು ಬೆರಸುವುದರ ಮೂಲಕ ಅಕ್ರಮವಾಗಿ ಹಣವನ್ನು ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಕೊಡಲಾದ ಟಾಡಿಯನ್ನು ಕುಡಿದ ಜನರಿಗೆ ನಿಶಾ ಬರದೆ ಹೋದರೆ, ಮಾರನೆಯ ದಿವಸದಿಂದ ಅವರು ಆ ಅಂಗಡಿಗೆ ಹೋಗುವುದಿಲ್ಲ; ಆ ಅಂಗಡಿಯವನ ವ್ಯಾಪಾರ ಬಿದ್ದು ಹೋಗುತ್ತದೆ, ಇದನ್ನರಿತ ಆ ಅಂಗಡಿಯವನು ಆ ನೀರು ಬೆರೆಸಿದ ಟಾಡಿಗೆ ಮತ್ತು ಬರುವ ಸಲುವಾಗಿ ಕ್ಲೋರಿನ್ ಹೈಡ್ರೇಡ್ ಲವಣವನ್ನು ಬೆರೆಸುವ ವ್ಯವಸ್ಥೆ ಮಾಡಿಕೊಳ್ಳುತ್ತಾನೆ. ಇದನ್ನು ಕುಡಿಯುವುದರಿಂದಾಗುವ ಪರಿಣಾಮವನ್ನು ಮಾನ್ಯ ಸದಸ್ಯ ನಾಯುಡು ಅವರು ಹೇಳಿದಾರೆ. ಇದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಅಬ್ಕಾರಿ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಒಂದು ಸಂದರ್ಭದಲ್ಲಿ ಅಬ್ಕಾರಿ ಇಲಾಖೆಯ ಮುಖ್ಯಾಧಿಕಾರಿಗಳವರ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಈ ಸದನದಲ್ಲಿ ಇವತ್ತಿನ ಕಾರ್ಯಕ್ರಮ ಮುಗಿದ ಮೇಲೆ ಮಾನ್ಯ ಅಬ್ಕಾರಿ ಸಚಿವರು, ಬೇಕಾದರೆ ಇನ್ನಿಬ್ಬರೊಡನೆ ನನ್ನ

ಜೊತೆಯಲ್ಲಿ ಬರಲಿ; ಒಬ್ಬ ಕೆಮಿಕಲ್ ಎಕ್ಸಾಮಿನರ್ ಕೂಡ ಬರಲಿ. ನಾವೆಲ್ಲಾ ಹೋಗಿ ಒಂದು ಟಾಡಿ ಅಂಗಡಿಗೆ ಹೋಗಿ, ಅಲ್ಲಿ ಮಾರುವ ಟಾಡಿಯನ್ನು ಪರಿಶೀಲಿಸೋಣ. ಆಗ, ನಾನು ಮೇಲೆ ಹೇಳಿದ ಆರೋಪಗಳು ಸತ್ಯಕ್ಕೆ ದೂರವಾಗಿಂದೆಂದು ಕಂಡುಬಂದರೆ ಈ ಸದನದಲ್ಲಿ ನಾನು ಬೇಷರತ್ ಕ್ಷಮೆ ಕೇಳುತ್ತೇನೆ. ಇವತ್ತು ಅಬ್ಕಾರಿ ಇಲಾಖೆ ಅಪ್ರಾಮಾಣಿಕತೆ, ಅದಕ್ಷತೆಯಲ್ಲಿ ಪರಮಾವಧಿ ಎಲ್ಲೆಯನ್ನು ಮೀರಿದೆ ಎಂದು ಹೇಳುತ್ತೇನೆ. ಬೆಂಗಳೂರಿನಲ್ಲಿ ಒಬ್ಬರು ಟಾಡಿ ಕಂಟ್ರಾಕ್ಟರು ಇದ್ದಾರೆ. ಅವರ ಹೆಸರನ್ನು ಹೇಳುವುದು ಬೇಡ. ಮಾನ್ಯ ಅಧ್ಯಕ್ಷರು ಸಭೆಯಿಂದ ಹೊರತಾದ ವ್ಯಕ್ತಿಯ ಹೆಸರನ್ನು ಇಲ್ಲಿ ಹೆಸರಿಸುವುದು ಬೇಡವೆಂದು ನಿರ್ಣಯ ಕೊಟ್ಟಿದ್ದಾರೆ. ಆದರೆ ಅವರು ಹೇಳಿ ಎಂದರೆ, ನಾನು ಹೇಳಲು ಸಿದ್ಧನಿದ್ದೇನೆ. ಆ ಬೆಂಗಳೂರಿನ ಕಂಟ್ರಾಕ್ಟರ್ ಅವರ ಜೊತೆಗೆ ಜೆಮಿನಿ ಡಿಸ್ಟಿಲರೀಸ ಮಾಲೀಕರ ಸೋದರಿಯ ಮಗ ಸೇರಿಕೊಂಡಿದ್ದಾನೆ ಇವರು ನಡೆಸುವ ಅಕ್ರಮವನ್ನು ಸರ್ಕಾರ ಎಂದಾದರೂ ಗಮನಿಸಿದೆಯೆ ? ಅವರು ಟಾಡಿಯನ್ನು ಎಷ್ಟರಮಟ್ಟಿಗೆ ಬೆರಕೆ ಮಾಡಿ ಜನತೆಗೆ ಕೊಡುತ್ತಿದ್ದಾರೆ ಎಂದರೆ ಪ್ರತಿ ತಿಂಗಳು ಅಬ್ಕಾರಿ ಕಮೀಷನರಿಗೆ ಒಂದು ಲಕ್ಷಕ್ಕೂ ಹೆಚ್ಚು ಹಣ ಲಂಚದ ರೂಪದಲ್ಲಿ-ಇದನ್ನು ಭ್ರಷ್ಟಾಚಾರವೆಂದು ಕರೆಯಿರಿ; ಅಥವಾ ಮೆಂಹರ್ಬಾನಿ ಎಂದು ಕರೆಯಿರಿ, ಅಥವಾ ಮಾಮೂಲಿ ಎಂದು ಕರೆಯಿರಿ ಪಾವತಿಯಾಗುತ್ತಿದೆ ಈ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಇದರ ಬಗ್ಗೆ ಇನ್ನು ಮೇಲಾದರೂ ಅಬ್ಕಾರಿ ಸಚಿವರು ಗಮನ ಹರಿಸಬೇಕೆಂದು ಸೂಚನೆ ಕೊಡಬಯಸುತ್ತೇನೆ.

ಇದೊಂದು ಪ್ರಕರಣವನ್ನು ನಾನು ಬೆಂಗಳೂರಿನ ಉದಾಹರಣೆಯನ್ನಾಗಿಟ್ಟುಕೊಂಡು ಹೇಳಿದೆ ಅಷ್ಟೆ. ಆದರೆ, ಟಾಡಿಗೆ ಕೆಮಿಕಲ್‌ನ್ನು ಬೆರೆಸಿ ಮತ್ತು ಬರುವ ಹಾಗೆ ಮಾಡಿ, ಮಾರುವುದು ರಾಜ್ಯದ ಎಲ್ಲ ಕಡೆಯೂ ನಡೆಯುತ್ತಿದೆ. ಈ ರೀತಿಯಾಗಿ ಅಕ್ರಮವಾಗಿ ಹಣ ಸಂಪಾದನೆ ಮಾಡುವ ವ್ಯವಹಾರವೇ ನಡೆಯುತ್ತಿದೆ.

ಇನ್ನು ಎಕ್ಸೈಸ್ ಸೇಲ್ಸ್ ಬಗ್ಗೆ ಒಂದು ಮಾತು. ಈ ವಿಚಾರವಾಗಿ ನಾವು ಕಮಿಷನ್ನಿನ ಮುಂದೆ ಆರೋಪಗಳನ್ನು ಸಲ್ಲಿಸಿದ್ದೇವೆ. ಅವರು ನೀಡುವ ಅಭಿಪ್ರಾಯಕ್ಕೂ ನಾವೆಲ್ಲರೂ ಬದ್ಧರಾಗಿದ್ದೇವೆ. ರಾಜ್ಯದ ಐದು ಜಿಲ್ಲೆಗಳಲ್ಲಿ ಮಾರ್ಚ್ ತಿಂಗಳ ಪೂರ್ವದಲ್ಲಿ ಅಬ್ಕಾರಿ ಹರಾಜು ಮಾಡುವುದರ ಬಗ್ಗೆ ಸರ್ಕಾರ ನಿರ್ಣಯ ಮಾಡಿದ್ದಾರೆ. ಈ ನಿರ್ಣಯದ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಬಯಸುವುದಿಲ್ಲ. ಈ ವಿಚಾರ ಆಯೋಗದ ಮುಂದಿರುವುದರಿಂದ ಅವರು ಈ ಬಗ್ಗೆ ವಿವರವಾಗಿ ಹಾಗೂ ಕೂಲಂಕುಷವಾಗಿ ಪರಿಶೀಲನೆ ಮಾಡುತ್ತಾರೆ. ಆಗಿನ್ನೂ ತುರ್ತು ಪರಿಸ್ಥಿತಿ ಇತ್ತು. ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಂತೆ ಆ್ಯಕ್ಷನ್‌ನ್ನು ಸುಧಾ ಅಂಡ್ ಕಂಪೆನಿಗೆ ಕೊಟ್ಟಿದ್ದಾರೆ.

ಸುಧಾ ಕಂಪನಿಯವರಿಗೆ ಈ ಒಂದು ಹರಾಜಿನಲ್ಲಿ ಯಶಸ್ವಿಯಾಗಿ ನಿಲ್ಲಲಿಕ್ಕೆ ಸರ್ಕಾರ ನಿರ್ಣಯ ಮಾಡಿದೆ. ಕೇರಳದಿಂದ ಒಬ್ಬರು ಗೋವಿಂದನ್ ಕಂಪನಿಯವರು ಈ ಹರಾಜಿನಲ್ಲಿ ಪಾಲ್ಗೊಳ್ಳಲಿಕ್ಕೆ ಬಂದಾಗ ಅವರಿಗೆ ಎಕ್ಸೈಜ್ ಕಮೀಷನರ್‌ರವರು ತ್ರೆಟ್ ಮಾಡಿದಾರೆ. ಈ ಒಂದು ಹರಾಜಿನಲ್ಲಿ ನೀವು ಪಾಲ್ಗೊಂಡರೆ ಬಹಳ ತೊಂದರೆಗೆ ಗುರಿಯಾಗುತ್ತೀರಿ ಎಂದೂ, ನೀವು ಇದರಲ್ಲಿ ಕೈಹಾಕಕೂಡದೆಂದು ಹೇಳಿದ್ದಾರೆ. ಸರ್ಕಾರ ಹೇಳದೇ ಇರಬಹುದು, ಅವರು ಒಂದು ತಿಂಗಳಿಗೆ ೪೦ ಲಕ್ಷ ರೂಪಾಯಿಗಳಿಗೆ ಬಿಡ್ ಮಾಡುತ್ತಿದ್ದರು, ಅವರನ್ನು ಬಿಟ್ಟು ೩೦ ಲಕ್ಷ ರೂಪಾಯಿಗಳಿಗೆ ಸುಧಾ ಕಂಪನಿಯವರಿಗೆ ಕೊಟ್ಟಿದ್ದಾರೆ. ಕಳೆದಸಾರಿ ೨೯ ಲಕ್ಷದ ೮೦-೮೫ ಸಾವಿರ ರೂಪಾಯಿಗೆ ಕೊಟ್ಟಿದ್ದಾರೆ. ನಾಮಿನಲ್ ಇನ್‌ಕ್ರೀಷ್ ೧೦,೦೦೦ ಪರ್ ಮಂತ್. ಒಂದು ತಿಂಗಳಿಗೆ ೧೦ ಲಕ್ಷ ರೂಪಾಯಿಗಳು ಬೆಂಗಳೂರು ಒಂದು ಜಿಲ್ಲೆಯಿಂದ ಸರ್ಕಾರದ ಖಜಾನೆಗೆ ಬರತಕ್ಕ ಹಣ ಈ ಒಂದು ಕಂಟ್ರಾಕ್ಟುದಾರರಿಗೆ ಸೇರಿದೆ. ಒಂದು ವರ್ಷಕ್ಕೆ ೧.೨೦ ಲಕ್ಷ ರೂಪಾಯಿ ಈ ಬೆಂಗಳೂರು ಜಿಲ್ಲೆಯ ಹರಾಜಿನಲ್ಲಿ ರಾಜ್ಯದ ಬೊಕ್ಕಸಕ್ಕೆ ಲುಕ್ಸಾನು ಆಗಿದೆ ಎಂದು ಈ ಒಂದು ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ಕಮೀಷನ್ ಮುಂದೆ ಇಡೋಣ, ಅದಕ್ಕಾಗಿ ನಾನು ಈ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಉಪಾಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಎಕ್ಸೈಜ್ ಮಂತ್ರಿಗಳನ್ನು ಶ್ಲಾಘನೆ ಮಾಡುತ್ತೇನೆ, ಮೆಚ್ಚುತ್ತೇನೆ. ಈ ಒಂದು ನಿರ್ಣಯ ಮಾಡಿರುವುದಕ್ಕೆ, ಎಲ್ಲಾ ವ್ಯವಹಾರಕ್ಕೂ ಅಲ್ಲ. ರೀ ಸೇಲ್ಸ್ ಮಾಡತಕ್ಕ ಧೈರ್ಯವನ್ನು ತೆಗೆದುಕೊಂಡಿದ್ದಾರೆ. ಎಕ್ಸೈಜ್ ಕಮೀಷನರ್‌ರವರು 'He fought tooth and nail not to have the resales''. ಈ ಸಭೆಗೆ ತಾವು ಹೇಳಬೇಕು. ತಾವು ಎಕ್ಸೈಜ್ ಕಮೀಷ

ನರ್‌ರವರ ಪ್ರೊಪೋಸಲನ್ನು ಟರ್ನ್‌ಡೌನ್ ಮಾಡಿ ರೀ ಸೇಲ್ಸ್‌ಗೆ ಇಟ್ಟಿದ್ದರ ಪರಿಣಾಮವಾಗಿ ರಾಜ್ಯದ ಬೊಕ್ಕಸಕ್ಕೆ ೧೦ ಲಕ್ಷ ರೂಪಾಯಿಗಳ ಅಧಿಕ ಹಣ ಬಂದಿದೆಯೆಂದು ಕೇಳಿದ್ದೇನೆ. ಅದಕ್ಕಾಗಿ ನಿಮ್ಮನ್ನು ನಾನು ಶ್ಲಾಘನೆ ಮಾಡುತ್ತೇನೆ. ಎಕ್ಸೈಜ್ ಕಮೀಷನರ್‌ರವರು ಅವರ ವರ್ತನೆಯಿಂದಲೇ ಅಪ್ರಮಾಣಿಕ ಹಾಗೂ ಅದಕ್ಷ ವ್ಯಕ್ತಿ ಎನ್ನುವುದು ಗೊತ್ತಾಗಿದೆ. ಮತ್ತು ನನ್ನ ಅಪಾದನೆ ಕೂಡ ಸಾಬೀತು ಆಗಿವೆ. ಇಂಥ ಕಳಂಕ ಇರತಕ್ಕ ವ್ಯಕ್ತಿಯನ್ನು ಇನ್ನೂ ಆ ಸ್ಥಾನದಲ್ಲಿಯೇ ಇಟ್ಟುಕೊಂಡರೆ ಸರ್ಕಾರಕ್ಕೆ ಗೌರವ ತರುತ್ತದೆಯೇ ಎಂಬುದನ್ನು ತಿಳಿಸಬೇಕು.

ಮಾನ್ಯ ಉಪಾಧ್ಯಕ್ಷರೇ, ಇನ್ನೂ ನನ್ನ ಮಿತ್ರರಾದ ಶ್ರೀಮಾನ್ ತಿಮ್ಮಪ್ಪನವರು ಇವತ್ತು ಸಾರಾಯಿ ಯಾವ ರೀತಿ ವಿತರಣೆಯಾಗುತ್ತಿದೆ, ಯಾವ ಒಂದು ಮಾರ್ಗದಲ್ಲಿ ನಡೆಯುತ್ತದೆ ಎನ್ನುವ ಬಗ್ಗೆ ಚರ್ಚೆ ಮಾಡಿದರು. ಮಂಡ್ಯ ಡಿಸ್ಟಿಲರಿ, ಉಗಾಂತ ಡಿಸ್ಟಿಲರಿಯಲ್ಲಿ ಸಾರಾಯಿಯನ್ನು ತಯಾರು ಮಾಡಿ, ಪ್ರತಿಯೊಂದು ಜಿಲ್ಲಾ ಕೇಂದ್ರಗಳಿಗೆ ಮುಟ್ಟಿಸುತ್ತಾರೆ. ಆಯಾ ತಾಲ್ಲೂಕು ತಹಶೀಲ್ದಾರರು ರಿಲೀಸ್ ಆರ್ಡರ್ ಕೊಟ್ಟಮೇಲೆ ವಿತರಣೆ ಮಾಡುತ್ತಾರೆ. ಆದರೆ ಎಕ್ಸೈಜ್ ಕಮೀಷನರ್‌ರವರು ರಾಜ್ಯದ ಬೊಕ್ಕಸಕ್ಕೆ ಹಣ ಉಳಿಸಬೇಕು, ಕುಡಿಯುವ ಜನರಿಗೆ ಸಕಾಲದಲ್ಲಿ ಯಾವುದೇ ಅಡ್ಡಿ ಆತಂಕವಿಲ್ಲದೆ ಒದಗಿಸಬೇಕು ಎನ್ನುವ ದೃಷ್ಟಿಯಿಂದ "ಲಾ ಡಬಲ್ ಸ್ಕೀಮು" ಮಾಡಿದ್ದಾರೆಂದು ತಿಳಿದಿದೆ.

ಶ್ರೀ ಬಿ. ಬಸವಲಿಂಗಪ್ಪ.—ಒಳ್ಳೆಯ ಸಲಹೆ.

ಶ್ರೀ ಹೆಚ್. ಡಿ. ದೇವೇಗೌಡ —ಪಾಪ, ಬಹಳ ಒಳ್ಳೆಯ ಸಲಹೆ, ಈ ಸ್ಕೀಮನ್ನು ತಯಾರು ಮಾಡುವಾಗ ೧೯–೨೦ ಲಕ್ಷ ರೂಪಾಯಿ ಸರಿಯಾಗಿ ಜ್ಞಾಪಕ ಇಲ್ಲ, ತಪ್ಪು ಇರಬಹುದು, ೨೦ ಲಕ್ಷ ರೂಪಾಯಿ ಉಳಿತಾಯವಾಗುತ್ತದೆಂದು ಹೇಳಿದ್ದಾರೆ, ಇದರ ಬಗ್ಗೆ ತಾವು ಹೇಳಬೇಕು. ೨೦ ಲಕ್ಷ ರೂಪಾಯಿ ಡಿಸ್ಟ್ರಿಬ್ಯೂಟರ್ಸ್ ಚಾರ್ಜು ಉಳಿತಾಯ, ಮ್ಯಾನುಫ್ಯಾಕ್ಚರಿಂಗ್ ಕಾಸ್ಟ್ ಉಳಿತಾಯ, ಜೊತೆಗೆ ಲಾರಿಯಲ್ಲಿ ಕಳುಹಿಸುವಾಗ ಲಾರಿ ಬ್ರೇಕ್ ಡೌನ್ ಆಗಿ ಆಗತಕ್ಕ ಅಡ್ಡಿಯನ್ನು ತಪ್ಪಿಸುವ ದೃಷ್ಟಿಯಿಂದ ಇಂಥ ಒಂದು ಸ್ಕೀಮನ್ನು ತಯಾರು ಮಾಡಿ ಕಳುಹಿಸಿದ್ದಾರೆ. ಇದನ್ನು ಎಕ್ಸೈಜ್ ಕಮೀಷನರ್‌ರವರು ಕಳುಹಿಸಿದ ಮೇಲೆ ಇದನ್ನು ಜೆಮಿನಿ ಡಿಸ್ಟಿಲರೀಸ್‌ಗೆ ತಯಾರು ಮಾಡುವ ಮತ್ತು ಹಂಚಿಕೆ ಮಾಡುವ ಎರಡೂ ವ್ಯವಸ್ಥೆಯನ್ನು ಕೊಟ್ಟರು. ತಾವು ಟೆಂಡರ್ ಕರೆದು ಕೊಟ್ಟಿದ್ದೀರಾ ಹೇಗೆ ಕೊಟ್ಟಿರಿ ತಾವು ಆಹಾರ ಮಂತ್ರಿಗಳಾಗಿದ್ದಾಗ ವೀರಭದ್ರಯ್ಯ ಎನ್ನುವವರು ಬಾಜ್ರಾ ಪಡೆದುಕೊಂಡಿದ್ದರ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಕಾಮೆಂಟ್ ಮಾಡಿತ್ತು. ನೀವು ಅಲ್ಲಿಂದೀಚೆಗೆ ಎಚ್ಚರಿಕೆ ವಹಿಸಬಹುದಾಗಿತ್ತು, ಈ ಜೆಮಿನಿ ಡಿಸ್ಟಿಲರ್ಸ್ ಹೇಗೆ ಇಲ್ಲಿಗೆ ಬಂದರು ತಾವು ಕರೆದು ನೆಗೋಷಿಯೇಟ್ ಮಾಡಿದ್ದೀರಾ ಏನು ಎಂಬುದನ್ನು ದಯವಿಟ್ಟು ಸಭೆಗೆ ತಿಳಿಸಬೇಕು. ಹಿಂದೆ ನಂದಿ ಬ್ರೀವರೀಸ್ ಎಂದು ಇದ್ದ ಹೆಸರನ್ನು ಪರಿವರ್ತನೆ ಮಾಡಿ ಜೆಮಿನಿ ಬ್ರಿವರೀಸ್ ಎಂದು ಮಾಡಿದ್ದಾರೆ. ಈ ರೀತಿ ಮಾಡಿದ್ದು ಇನ್‌ಕಂಟ್ಯಾಕ್ಸ್ ತಪ್ಪಿಸಲಿಕ್ಕೋ ಯಾವುದಕ್ಕೆ ಎನ್ನುವುದನ್ನು ಹೇಳಬೇಕು. ಮಾನ್ಯ ಉಪಾಧ್ಯಕ್ಷರೇ, ಇದು ಒಂದು ದೊಡ್ಡ ರಾಕೆಟ್. ೯ ಜಿಲ್ಲೆಯಲ್ಲಿ ಬಾಂಡೆಡ್ ವೇರ್ ಹೌಸಸ್‌ನಲ್ಲಿ ಅರಾಕನ್ನು ತಯಾರು ಮಾಡಿದ್ದಾರೆ, ಆಯಾಯಾ ಸ್ಥಳಾಧಿಕಾರಿಗಳ ಸೂಚನೆಮೇರೆಗೆ ವಿತರಣೆ ಮಾಡಿದ್ದಾರೆ. ಅರಾಕನ್ನು ತಯಾರುಮಾಡುವುದಕ್ಕೆ ರೆಕ್ಟಿಫೈಡ್ ಸ್ಪಿರಿಟನ್ನು ಮಾಡುವುದಕ್ಕೆ, ಇವರಿಗೆ ಮೀಡಿಯಂಗ್ರೇಡ್ ಹಾಲ್ಕೋಹಾಲ್‌ನ್ನು ಡೀನೇಚರ್ಡ್ ಸ್ಪಿರಿಟ್‌ನ್ನು ತಯಾರು ಮಾಡಲಿಕ್ಕೆ ಕೊಟ್ಟಿದ್ದಾರೆ. ಎಕ್ಸೈಜ್ ಮಂತ್ರಿಗಳು ದಯವಿಟ್ಟು ಈ ಕಡೆ ಗಮನಹರಿಸಬೇಕು. ಅರಾಕನ್ನು ತಯಾರು ಮಾಡುವುದರ ಜೊತೆಗೆ ಡಿನೇಚರ್ಡ್ ಸ್ಪಿರಿಟನ್ನು ಕೂಡ ಮ್ಯಾನುಫಾಕ್ಚರ್ಡ್ ಮಾಡುವ ಮತ್ತು ಡಿಸ್ಟ್ರಿಬ್ಯೂಟರ್ ಮಾಡುವ ಬಗ್ಗೆ ಪರವಾನಿಗಿ ಅಂದರೆ ಲೈಸೆನ್ಸ್ ಕೊಟ್ಟಿದ್ದಾರೆ. ಪಾಪ, ಅವರು ಡಿನೇಚರ್ಡ್ ಸ್ಪಿರಿಟನ್ನು ಮಾಡುವುದಕ್ಕೆ ಬದಲಾಗಿ ಮೀಡಿಯಂ ಗ್ರೇಡ್ ಹಾಲ್ಕೋಹಾಲ್‌ನಲ್ಲಿಯೂ ಕೂಡ ಅರಾಕನ್ನು ಮಾಡಿದ್ದಾರೆ. ಡೀನೇಚರ್ಡ್ ಸ್ಪಿರಿಟ್‌ನ ಮ್ಯಾನುಫ್ಯಾಕ್ಚರ್ ಕಾಸ್ಟ್ ೨ ರೂಪಾಯಿ. ಇವರು ಮೀಡಿಯಂ ಗ್ರೇಡ್ ಹಾಲ್ಕೋಹಾಲ್‌ನಿಂದ ಡಿನೇಚರ್ಡ್ ಸ್ಪಿರಿಟನ್ನು ತಯಾರು ಮಾಡಿದ್ದಾರೆ ೨ರೂಪಾಯಿ ಸಿಗುತ್ತಿತ್ತು. ಇವರು ಅರಾಕಿಗೆ ಕನ್‌ವರ್ಟ್ ಮಾಡಿದ್ದಕ್ಕೆ ಒಂದು ಲೀಟರ್ ಮೀಡಿಯಂ ಹಾಲ್ಕೋಹಾಲ್‌ಗೆ ಒಂದೂವರೆ ಪಟ್ಟು ನೀರು ಸೇರಿಸಿ, ಅರಾಕಿಗೆ ಕನ್‌ವರ್ಟ್ ಮಾಡಿದ್ದಕ್ಕೆ ೨ರೂಪಾಯಿಗೆ ಬದಲಾಗಿ ಎರಡೂವರೆ ಲೀಟರ್ ಅರಾಕಿಗೆ ಹನ್ನೆರಡುವರೆ ರೂಪಾಯಿ ಇವರಿಗೆ ಸಂಪಾದನೆ ಆಯಿತು. ಈ ರೀತಿ ಒಂದು ತಿಂಗಳಿಗೆ ಒಂದು ಲಕ್ಷ ಲೀಟರ್ ಮೀಡಿಯಂ ಗ್ರೇಡ್ ಆಲ್ಕೋಹಾಲನ್ನು ಕೊಟ್ಟಿದ್ದಾರೆ.

ಅಧ್ಯಕ್ಷರೇ, ನಾನು ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಇವೊತ್ತು ಒಂದು ಲಕ್ಷ ಲೀಟರನ್ನು ಎರಡೂವರೆ ಲಕ್ಷ ಲೀಟರ್ ಅರೆಕ್ ಆಗಿ ಪರಿವರ್ತನೆ ಮಾಡಿಕೊಂಡು ಮಾರಾಟ ಮಾಡುವುದರಿಂದ, ಸುಮಾರು ಹನ್ನೆರಡೂವರೆ ಲಕ್ಷ ರೂಪಾಯಿ ಆಗುತ್ತದೆ. ಇದರಿಂದ ಒಂದು ತಿಂಗಳಿಗೆ ೧೦ಲಕ್ಷ ರೂಪಾಯಿ ಇವರ ಕಿಸೆಗೆ ಬರುತ್ತದೆ! ಅಂದರೆ ಒಂದು ವರ್ಷಕ್ಕೆ ೧ ಕೋಟಿ ೨೦ ಲಕ್ಷ ಚಿಲ್ಲರೆ ರೂಪಾಯಿ ಇವರ ಕಿಸೆಗೆ ಬಂದಂತಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಲೈಸೆನ್ಸ್ ಹೋಲ್ಡರ್ಸ್‌ಗೆ ಡೀನೇಚರ್ಡ್ ಸ್ಪಿರಿಟ್ ವಿತರಣೆ ಮಾಡಿದ್ದೇವೆ ಎಂದು ಲೆಕ್ಕ ಬರೆದುಕೊಂಡಿದ್ದಾರೆ. ಈ ರೆಕ್ಟಿಫೈಡ್ ಸ್ಪಿರಿಟ್ ಅರೆಕ್ ತಯಾರು ಮಾಡುವಾಗ, ಮೀಡಿಯಂ ಗ್ರೇಡ್ ಅಲ್‌ಕೋಹಾಲ್ ತಯಾರು ಮಾಡುವಾಗ ಅದರಿಂದ ವಾಸನೆ ಬರುತ್ತದೆ ಎಂದು ಕೇಳಿದ್ದೇನೆ. ಅದಕ್ಕೆ ಕಾರಣ ಏನು ಎಂದರೆ ಕ್ರೂಸಲ್ ಆಯಿಲ್ ಕಾರಣದಿಂದ ವಾಸನೆ ಬರುತ್ತದೆ ಎಂದು ಕೇಳಿದ್ದೇನೆ. ಈ ರೀತಿ ಮಿಕ್ಸ್ ಮಾಡಿದಂತಹದ್ದನ್ನು ಬಹಳ ವ್ಯವಸ್ಥಿತ ರೀತಿಯಲ್ಲಿ ಮಾರಾಟ ಮಾಡಿದ್ದಾರೆ. ಇಲ್ಲಿ ಎಕ್ಸೈಜ್ ಕಮಿಷನರ್ ಪಾತ್ರ ಕರ್ತವ್ಯ ಲೋಪ ಏನಾಗಿದೆ ಎಂದು ತಿಳಿಯಬೇಕು. ಈಗ ನಿಮ್ಮಲ್ಲಿ ಪ್ರಾಮಾಣಿಕತೆ ಇದೆ ಎಂದು ನಾನು ಒಪ್ಪುತ್ತೇನೆ. ಆದರೆ ಇದಕ್ಕೆ ಯಾರು ವ್ಯವಸ್ಥಾಪಕರಿದ್ದಾರೆ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು. ಡಿನೇಚರ್ಡ್ ಸ್ಪಿರಿಟ್ ಮ್ಯಾನ್ಯುಫ್ಯಾಕ್ಚರ್ ಮಾಡುವ ಬದಲಾಗಿ ಮೀಡಿಯಂ ಗ್ರೇಡ್ ಆಲ್‌ಕೋಹಾಲ್ ಅರೆಕ ಆಗಿ ಕನ್‌ವರ್ಟ್ ಮಾಡಿದ್ದಾರೆ. ಆ ರೀತಿ ಮಾಡತಕ್ಕ ಕಾಲದಲ್ಲಿ ಎಕ್ಸೈಜ್ ಇಲಾಖೆಯ ಅಧಿಕಾರಿಗಳು ತಮ್ಮ ಕರ್ತವ್ಯ ಲೋಪ ಮಾಡಿದ್ದಾರೆ. ಇದರ ಜೊತೆಗೆ ಡೀನೇಚರ್ಡ್ ಸ್ಪಿರಿಟ್ ಡಿಸ್ಟ್ರಿಬ್ಯೂಷನ್ ಮಾಡಲಿಕ್ಕೆ ಜೆಮಿನಿ ಬ್ರುವರೀಸ್ ಅವರಿಗೆ ಅಧಿಕಾರ ಕೊಟ್ಟಿದ್ದಾರೆ Denatured spirit cannot be sold to Tom, Dick and Harry it should be sold to retail licence holders only. (ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಅದು ಅವರಿಗೆ ಕೊಟ್ಟಿದ್ದಾರೆಯೋ, ಇಲ್ಲವೇ ಪ್ರತಿಯೊಂದು ಜಿಲ್ಲೆಯಲ್ಲೂ ಈ ಒಂದು ವ್ಯವಹಾರ ಹೇಗೆ ನಡೆದಿದೆ ಇದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾದ ಜವಾಬ್ದಾರಿ ಎಕ್ಸೈಜ್ ಇಲಾಖಾ ಅಧಿಕಾರಿಗಳಿಗೆ ಸಂಬಂಧಪಟ್ಟದ್ದು. ಇವೊತ್ತು ಮೂರು ಕರ್ತವ್ಯ ಲೋಪ ಮಾಡಿದ್ದಾರೆ. ಒಂದನೆಯದು, ಅರೆಕ್ ತಯಾರು ಮಾಡಿದ ಮೇಲೆ ಅದು ೧೫ ದಿವಸ ಮಾರಾಟಕ್ಕೆ ಬರುವುದಿಲ್ಲ, ಅದನ್ನು ಬಾಂಡೆಡ್ ವೇರ್‌ಹೌಸ್‌ನಲ್ಲಿ ಇಟ್ಟು ಮಾರಾಟ ಮಾಡಬೇಕು. ಅದನ್ನು ಅವರು ನೋಡಲಿಲ್ಲ. ಆ ದಿವಸ ತಯಾರು ಮಾಡುವುದು, ಆ ದಿವಸವೇ ಮಾರುವುದು. ಕ್ವಾಲಿಟಿ ಕಂಟ್ರೋಲ್ ಮಾಡುವುದರಲ್ಲಿ ಇಲಾಖೆ ಆಸಕ್ತಿ ವಹಿಸಲಿಲ್ಲ. ಈ ಡೀನೇಚರ್ಡ್ ಸ್ಪಿರಿಟ್ ವಿತರಣೆ ಆಗತಕ್ಕ ಕಾಲದಲ್ಲಿ ಕಾನೂನು ಪಾಲನೆಯಾಗಿದೆಯೋ, ಸರಿಯಾದ ರೀತಿಯಲ್ಲಿ ಮ್ಯಾನುಫ್ಯಾಕ್ಚರ್ ಆಗಿದೆಯೋ ಯಾವುದನ್ನು ಪರಿಶೀಲನೆ ಮಾಡಲಿಲ್ಲ. ಈ ಇಲಾಖೆಯಲ್ಲಿ ಪ್ರಾಮಾಣಿಕ ಅಧಿಕಾರಿಗಳು ಇಲ್ಲ ಎಂದು ಹೇಳಲಿಲ್ಲ, ಬಹಳ ಜನ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ಆ ಪ್ರಾಮಾಣಿಕ ಅಧಿಕಾರಿಗಳು ಬಾಂಡೆಡ್ ವೇರ್ ಹೌಸ್‌ಗೆ ಹೋಗಿ ಇದನ್ನು ತಪಾಸಣೆ ಮಾಡಬೇಕೆಂದು ಪ್ರಯತ್ನ ಮಾಡಿದರೆ, ಆ ಅಧಿಕಾರಿಗಳಿಗೆ ದೊರೆತಂಥ ಉಡುಗರೆ ವಿಕ್ಟಿಮೈಸೇಷನ್. ಆದ್ದರಿಂದ ಎಕ್ಸೈಜ್ ಕಮಿಷನರ್ ಅವರ ಬಾಯಿಗೆ ಬೀಗ ಹಾಕಲಿಕ್ಕೆ ಹೇಳಬೇಕು. ಯಾವುದೋ ಪ್ರಭಾವ ಇದೆ, ಕಾನೂನು ಅಧಿಕಾರ ಇದೆ ಎಂದು, ವರ್ತನೆ ಮಾಡಬೇಕಾದರೆ ಸರಿಯಾದ ರೀತಿಯಲ್ಲಿ ವರ್ತನೆ ಮಾಡಬೇಕೇ ಹೊರತು, ಹಳ್ಳಿಯ ಭಾಷೆಯನ್ನು ಬಳಸುತ್ತಾರೆ ಅದನ್ನು ಮಾಡಬಾರದು. ಅದನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಸಾರಿ ನಿನ್ನ ವ್ಯಾಪ್ತಿಯಲ್ಲಿ ನಿನ್ನ ಕೆಲಸ ಮಾಡಬೇಕು ಎಂದು ಮೂ ಬಿಚ್ಚಿಕೊಂಡಂತ ಪರಿಸ್ಥಿತಿಗೆ ಹೋಯಿತು. ಆ ರೀತಿ ಮೂ ಎತ್ತಿಕೊಳ್ಳುವಂತ ಪರಿಸ್ಥಿತಿಗೆ ಹೋಗಬಾರದು. ಯಾವಾಗಲೂ ನಾಲಿಗೆ ಮೇಲೆ ಹತೋಟಿ ಇಟ್ಟುಕೊಳ್ಳಬೇಕು. ಅಧಿಕಾರ ಬಹಳ ದಿವಸ ಇರುವುದಿಲ್ಲ. ಇವೊತ್ತು ಈ ಒಂದು ವ್ಯವಹಾರದಲ್ಲಿ ವರ್ಷಕ್ಕೆ ೧ ಕೋಟಿ ೨೫ ಲಕ್ಷ ರೂಪಾಯಿ ರಾಜ್ಯದ ಬೊಕ್ಕಸಕ್ಕೆ ಬರಬೇಕಾದಂತ ಹಣ ಇವರ ಕಿಸೆಗೆ ಹೋಗುತ್ತಿದೆ. ಇದರ ಜೊತೆಗೆ ಗೋವಾಕ್ಕೆ ಒಂದು ತಿಂಗಳಿಗೆ ೧೦ಸಾವಿರ ಲೀಟರ್ ಡಿನೇಚರ್ಡ್ ಸ್ಪಿರಿಟ್ ಕಳುಹಿಸುವ ವ್ಯವಸ್ಥೆ ಬಗ್ಗೆ ನಮ್ಮ ಸರ್ಕಾರದವರು ನಿರ್ಧಾರ ಮಾಡಿದ್ದಾರೆ. ಅದು ಗೋವಾಕ್ಕೆ ಹೋಗುವ ಪ್ರಶ್ನೆ ಇಲ್ಲ ಈ ಜೆಮಿನಿ ಡಿಸ್ಟಿಲರೀಸ್ ಅವರೇ ಅವರಿಗೆ ಒಂದು ರೂಪಾಯಿ ಪ್ರಕಾರ ಕಮಿಷನ್ ಕೊಟ್ಟು ಇಲ್ಲಿಯೇ ಉಳಿಸಿಕೊಳ್ಳುವಂತಾದ್ದು ಇದೆ. ಗೋವಾಕ್ಕೆ ಕೊಟ್ಟ ಹಾಗೆ ಲೆಕ್ಕ ತೋರಿಸಿ ಇಲ್ಲಿ ಅದನ್ನು ಇಲ್ಲಿಯೇ ಉಳಿಸಿಕೊಂಡು ನಂತರ ಅದನ್ನು ಅರೆಕ್ ಆಗಿ ಕನ್‌ವರ್ಟ್ ಮಾಡಿ ಮಾರಾಟ ಮಾಡುವುದರಿಂದ ಇವರಿಗೆ ಸುಮಾರು ೭೫ ಸಾವಿರ ರೂಪಾಯಿವರೆಗೆ ಉಳಿಯುತ್ತದೆ. ಈ ಗೋವಾಕ್ಕೆ ಹೋಗತಕ್ಕ ಡೀನೇಚರ್ ಸ್ಪಿರಿಟ್ ಲೆಕ್ಕ ತೋರಿಸತಕ್ಕ ಬಗ್ಗೆ ಇಲಾಖೆಯೊಳಗೆ ಅತೃಪ್ತಿ ಬೆಳೆಯಿತು. ಇವೊತ್ತು ಇಲಾಖೆಯಲ್ಲಿ ದೇಶ

ಪ್ರೇಮಿಗಳಾದ ಅಧಿಕಾರಿಗಳು ಇದ್ದಾರೆ, ಇದರ ಜೊತೆಗೆ ಕಂಟ್ರಾಕ್ಟರುಗಳಿಗೂ ಕೂಡ ಒಳಗಡೆ ಕುಂದಿದುಂತ್ತಾ ಇರುತ್ತದೆ, ಇದನ್ನು ಯಾರಿಗಾದರೂ ತಿಳಿಸಬೇಕು ಎಂದು ತಿಳಿಸುತ್ತಾರೆ. ಬಹುಶ ಈ ಬಗ್ಗೆ ಮಾನ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಂದು ಗೊತ್ತಾದರೆ ತಮ್ಮ ಗಮನಕ್ಕೂ ಬರಬಹುದು. ಇದು ಬಹುಶಃ ತಮ್ಮ ಗಮನಕ್ಕೆ ಬಂದರೂ ಬರಬಹುದು ಈ ಒಂದು ಪ್ರಕರಣದಲ್ಲಿ ಏನು ಅತೃಪ್ತಿಯು ಹೊಗೆ ತಾಂಡವವಾಡಿತು, ಆ ತಕ್ಷಣವೇ 11 ಜಿಲ್ಲೆಗಳಲ್ಲೂ ಅದನ್ನು ಸಸ್ಪೆಂಡ್ ಮಾಡಿದಿರಿ ಇದನ್ನು ಯಾವಾಗ ಮಾಡಿದಿರಿ ? ಏತಕ್ಕೆ ಮಾಡಿದಿರಿ ? ಇದಕ್ಕೆ ಕಾರಣ ಏನು ? ತಾವು ಹೇಳದೇ ಹೋಗಬಹುದು. ಆದರೆ ನೀವು ಎಷ್ಟೇ ಇಲ್ಲವೆಂದು ಹೇಳಿದರೂ ಕೂಡ ಜನ ಇದನ್ನು ಹಾಗೆಯೇ ಬಿಡುವುದಕ್ಕೆ ಬಿಟ್ಟುಕೊಡುವುದಿಲ್ಲ. ಅವರು ನಿಮ್ಮಜನ್ನು ಹತ್ತುತ್ತಾರೆ. ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್‌ನವರು ಇದನ್ನು ವಿಚಾರ ಮಾಡುತ್ತಾರೆ. ಸರ್ಕಾರದ ಸಂಪನ್ಮೂಲಗಳನ್ನು ಆ ದಕ್ಷ ಅಧಿಕಾರಿ ತಮಗೆ ಉಳಿಸಿಕೊಡುತ್ತಾನೆ ಮಾನ್ಯ ಅಧ್ಯಕ್ಷಿಣಿಯವರೆ ಆ ಅಧಿಕಾರಿಗೆ ಇಬ್ಬರು ಮಕ್ಕಳಿದ್ದಾರೆ. ಅವರ ಹೆಸರನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ ಆ ಇಬ್ಬರು ಮಕ್ಕಳಲ್ಲಿ ಒಬ್ಬ ಮಗ ಪ್ಯಾಕೇಜ್‌ಗೆ ಸಂಬಂಧಪಟ್ಟಂತೆ ಬಾಕ್ಸ್‌ಗಳನ್ನು ಮಾಡುವ ಒಂದು ಫ್ಯಾಕ್ಟರಿಯನ್ನು ತೆಗೆದಿದ್ದಾರೆ. ಎಲ್ಲಾ ಎಕ್ಸೈಸ್ ಕಂಟ್ರಾಕ್ಟರ್‌ಗಳಿಗೂ ಅವನ ಫ್ಯಾಕ್ಟರಿಯಲ್ಲೇ ಈ ಬಾಕ್ಸ್‌ಗಳನ್ನು ಪರ್ಚೇಸ್ ಮಾಡಬೇಕು. ನಮ್ಮ ಮಾನ್ಯ ಬಸವಲಿಂಗಪ್ಪನವರೂ ಒಬ್ಬ ಸಮಾಜವಾದಿಗಳು, ಅವರು ಇಂಥ ಒಬ್ಬ ಅಧಿಕಾರಿಗೆ ರಕ್ಷಣೆ ಕೊಡದಿರುವವರಲ್ಲಿ ಒಬ್ಬರು. ಆದುದರಿಂದ ನಾನು ಅವರ ಹೆಸರನ್ನು ಹೇಳುತ್ತಿದ್ದೇನೆ. When the Excise Commissioner enjoys the confidence of the Chief Minister who can dare to touch him ? ಈ ಎಕ್ಸೈಸ್ ಕಂಟ್ರಾಕ್ಟರ್‌ಗಳೆಲ್ಲಾ ಇಲ್ಲೇ ಬಾಕ್ಸಸ್-ಪರ್ಚೇಸ್ ಮಾಡುತ್ತಿದ್ದುದರಿಂದ ಅವರು ಎಷ್ಟು ಸಂಪಾದನೆ ಮಾಡಿದ್ದಾರೆ ಎಂಬುದಕ್ಕೆ ಮಾನ್ಯ ಸಚಿವರು ಉತ್ತರ ಕೊಡುವಾಗ ನಮಗೆ ತಿಳಿಸಬೇಕು.

6–00 P. M.

ಅಧ್ಯಕ್ಷರು.—ಯಾರೋ ಎಲ್ಲೋ ಇಂಡಸ್ಟ್ರೀ ಮಾಡಿದರೆ ಇವರು ಏತಕ್ಕೆ ಉತ್ತರ ಕೊಡಬೇಕು? ಅದನ್ನು ಪತ್ತೆ ಹಚ್ಚುವುದು ಹೇಗೆ?

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೆ, ತಾವು ಈ ಸದನಕ್ಕೆ ಅಧ್ಯಕ್ಷರು, ಎತ್ತರವಾದ ಜಾಗದಲ್ಲಿ ಕುಳಿತಿದ್ದೀರಿ, ತಾವೇ ಈ ರೀತಿ ಹೇಳಿದರೆ ನಾವು ಮಾಡುವುದಾದರೂ ಏನು ? ಅತನ ಫ್ಯಾಕ್ಟರಿಯಲ್ಲೇ ಬಾಕ್ಸ್‌ಗಳನ್ನು ಪರ್ಚೇಸ್ ಮಾಡಿದ್ದಾರೆಯೇ, ಇಲ್ಲವೆ ಎಂಬುದನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಿಲ್ಲ ಎಂದರೆ ಈ ಸರ್ಕಾರ ಅಷ್ಟು ದುರ್ಬಲವಾಗಿದೆಯೆ?

ಶ್ರೀಮತಿ ಇ. ಇ. ವಾಜ್:— ಅವರ ಮಗ ಅಥವಾ ಮಗಳು ಫ್ಯಾಕ್ಟರಿ ತೆರೆದು ಒಳ್ಳೆಯ ಉತ್ತಮ ತರಹೆಯ ಬಾಕ್ಸ್‌ಗಳನ್ನು ತಯಾರು ಮಾಡುವುದಾದರೆ ಅವರಿಂದಲೇ ತೆಗೆದುಕೊಳ್ಳುವುದರಲ್ಲಿ ತಪ್ಪೇನಿದೆ ?

ಶ್ರೀ ಹೆಚ್. ಡಿ. ದೇವೇಗೌಡ:— ಮಾನ್ಯ ಅಧ್ಯಕ್ಷಿಣಿಯವರೆ, ಈ ಅಧಿಕಾರಿಯು ಎರಡನೇ ಮಗನ ಹೆಸರಿನಲ್ಲಿ ಕಾನಕಾನಹಳ್ಳಿ ರಸ್ತೆಯಲ್ಲಿ ಜಮೀನು ಕೊಡಿಸಿದ್ದಾರೆ. ಇದನ್ನು ಬೆಂಗಳೂರು ಜಿಲ್ಲಾಧಿಕಾರಿಯವರು ತಿರಸ್ಕಾರ ಮಾಡಿದ್ದರಿಂದ ಕೂಡಲೇ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಮಾಡಿಸಿದ್ದಾರೆ. ನಂತರ ಮತ್ತೊಬ್ಬ ಅಧಿಕಾರಿ ಆ ಜಾಗಕ್ಕೆ ಬಂದಾಗ ಅವರಿಂದ ಈ ಜಮೀನಿಗೆ ಮಂಜೂರಾತಿಯನ್ನು ಕೊಡಿಸಿದ್ದಾರೆ. ಈಗ ಅವರ ಹೆಸರಿನಲ್ಲಿ ಕಾನಕಾನಹಳ್ಳಿ ರೋಡ್‌ನಲ್ಲಿ ಒಂದು ಗಂಗಾ ಫಾರಂ ಮತ್ತು ಮೈಸೂರಿನಲ್ಲಿ ಒಂದು ಗಂಗಾ ಫಾರಂ ಎರಡು ಇವೆ. ಈ ವಿಷಯುವನ್ನು ನಾನು ಈ ಸದನದಲ್ಲಿ ಶಂಖ ಹೊಡೆದುಕೊಂಡು ಕಂಠ ಶೋಷಣೆ ಮಾಡಿಕೊಂಡಿದ್ದೇನೆ. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕನಕಪುರ ರಸ್ತೆಯಲ್ಲಿರುವ ಗಂಗಾ ಫಾರಂಗೆ ಜೆಮಿನಿ ಡಿಸ್ಟಿಲರೀಸ್‌ರವರ ಅನುಗ್ರಹ ದಿಂದ ಭಾವಿ ತೆಗೆಸಿದ್ದು, ಫೆನ್ಸಿಂಗ್, ಬುಲ್ಡೋಜರ್ ಕೆಲಸ ಇಷ್ಟೆಲ್ಲಾ ಉಪಕಾರ ಮಾಡಿದ್ದಾರೆ. ಇದರ ಬಗ್ಗೆ ನಾನು ಮಾತನಾಡುತ್ತಾ ಹೋದರೆ ಬಹಳವಾಗುತ್ತದೆ. ಆದುದರಿಂದ ಇದನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯ ಬಂದಾಗ ಹೇಳುತ್ತೇನೆ ಒಬ್ಬ ಜಿಲ್ಲಾಧಿಕಾರಿ ಈರೀತಿ ಒಂದು ಕೇಸ್‌ನಲ್ಲಿ ತಿರಸ್ಕಾರ ಮಾಡಿದರು ಎಂದು ಅವರನ್ನು ಅಲ್ಲಿಂದ ವರ್ಗಮಾಡುವ ಹಕ್ಕು ನಿಮಗಿಲ್ಲ. ಅದನ್ನು ಮುಖ್ಯ ಮಂತ್ರಿಗಳು ಮಾಡಬೇಕಾಗುತ್ತದೆ. ಈಗ ಇನ್ನೊಬ್ಬ ಜಿಲ್ಲಾಧಿಕಾರಿಯಿಂದ ಜಮೀನನ್ನು ಏನು ಮಂಜೂರು ಮಾಡಿಸಿದ್ದೀರಿದ ನ್ನು ತಾವು ಪರಿಶೀಲನೆ ಮಾಡುತ್ತೀರಿ ಎಂದು ನಂಬಿದ್ದೇನೆ. ಈ ಫಾರಂಗೋಸ್ಕರ ಎಷ್ಟು ಹಣ ವೆಚ್ಚ

ಮಾಡಿದೆ ಎಂಬುದರ ಬಗ್ಗೆ ನಾನು ಈಗ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಚನ್ನಬಸಪ್ಪ ನವರು ಹೇಳುತ್ತಿದ್ದುದನ್ನು ನೋಡಿದರೆ ಅವರ ಬಗ್ಗೆ ನನಗೆ ಮರುಕ ಬರುತ್ತಿತ್ತು. ಆದುದರಿಂದ ಇದನ್ನು ತಾವು ತಪಾಸಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಈ ಇಲಾಖೆಯ ಒಬ್ಬ ಮುಖ್ಯಾಧಿಕಾರಿ ಇವತ್ತು ನಮ್ಮ ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಸುಮಾರು 20 ಕೋಟಿ ರೂಪಾಯಿಗಳಷ್ಟು ನಷ್ಟಕ್ಕೆ ಪಾತ್ರರಾಗಿದ್ದಾರೆ. ಇದನ್ನು ತಮಗೆ ಬೇಕಾದರೆ ಅಂಕಿ ಅಂಶಗಳ ಸಮೇತ ಸಾಬೀತು ಮಾಡುತ್ತೇನೆ. ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ಹೊಸದಾಗಿ ಡಿಸ್ಟಿಲರೀಸ್ ಪ್ರಾರಂಭಿಸುವುದಕ್ಕೆ ಲೈಸೆನ್ಸ್ ಕೊಡ ಬಾರದೆಂದು ಕೇಂದ್ರ ಸರ್ಕಾರದಿಂದ ನಿಮಗೆ ಆದೇಶ ಬಂದಿದೆ. ನನಗೆ ಬಂದಿರುವ ವರ್ತಮಾನದ ಪ್ರಕಾರ ಮತ್ತೊಂದು ಲೈಸೆನ್ಸನ್ನು ತಮಿಳ್ನಾಡಿನವರಿಗೆ ಕೊಟ್ಟಿದ್ದೀರೆಂದು ಕೇಳಿದ್ದೇನೆ. ಅದನ್ನು ಕೊಟ್ಟಿದ್ದರೆ ಕೊಟ್ಟಿದ್ದೇವೆ ಎಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಒಂದು ವೇಳೆ ತಾವು ಇಲ್ಲ ಎಂದು ಹೇಳಿದರೆ ಅನಂತರ ನನ್ನ ಗುಪ್ತ ದಳವನ್ನು ಬಿಟ್ಟು ಅದನ್ನು ವೆರಿಫೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೆ, ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತೇನೆ. ಇವತ್ತು ಒಬ್ಬ ಐ ಎ ಎಸ್. ಅಧಿಕಾರಿಯನ್ನು ಸಸ್ಪೆಂಡ್ ಮಾಡತಕ್ಕ ಒಂದು ಶಕ್ತಿ ನಮ್ಮ ಸರ್ಕಾರಕ್ಕೆ ಇದೆಯೆ? ನಮ್ಮ ಈ ಸದನದ ಸಮಿತಿಯವರು ರಿಪೋರ್ಟ್ ಕೊಟ್ಟ $1\frac{1}{2}$ ವರ್ಷದಮೇಲೆ ''ಕೆಳವಾಡಿ'' ಎನ್ನುವವರನ್ನು ಸಸ್ಪೆಂಡ್ ಮಾಡಿದ್ದಾರೆಂದು ಪತ್ರಿಕೆಯಲ್ಲಿ ನಾನು ಒಂದು ಸಾರಿ ನೋಡಿದ್ದೆ. ಆದುದರಿಂದ ನಾನು ಕೇಳುತ್ತಿದ್ದೇನೆ.

ಶ್ರೀಮತಿ ಇ. ಇ. ವಾಜ್.— ಸಸ್ಪೆಂಡ್ ಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇದೆ. The I.A.S. Officer can be suspended but charges must be established.

SRI H. D. DEVE GOWDA.— If the charges I have levelled are proved false I shall take the consequences. Is the Hon'ble Minister prepared to accept this challenge?

ಮಾನ್ಯ ಸಭಾಧ್ಯಕ್ಷಣಿಯವರೆ, ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ಕಷ್ಟದಲ್ಲಿದ್ದಾರೆಂದು ಗೊತ್ತಾಗುತ್ತದೆ. ದೆಹಲಿಯಿಂದ ಬಂದಿರುತ್ತಾರೆ, ಅವರ ಪರಿಸ್ಥಿತಿಯನ್ನು ನೋಡಿದರೆ ಬಹಳ ಮರುಕಬರುತ್ತದೆ. ಈಗಲೂ ಹೇಳುತ್ತೇನೆ. ಅಲ್ಪಸ್ವಲ್ಪ ಸರ್ಕಾರದ ಗೌರವ ಉಳಿಸಿ ಕೊಳ್ಳಬೇಕೆಂದಿದ್ದರೆ ಮೊದಲು ಆ ಆಫೀಸರನ್ನು ಎನ್‌ಕ್ವೈರಿ ಮಾಡಿ ಸಸ್‌ಪೆಂಡ್ ಮಾಡಿ. ಅದನ್ನು ತಾವು ಮಾಡಿಲ್ಲವೆಂದರೆ, ಆ ಅಧಿಕಾರಿಯನ್ನು ತಾವು ಸ್ವಾರ್ಥಕ್ಕಾಗಿ, ರಾಜಕಾರಣಕ್ಕಾಗಿ, ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುವುದಕ್ಕೋಸ್ಕರವಾಗಿ, ಸರ್ಕಾರದ ಹಣವನ್ನು ದುರುಪಯೋಗ ಮಾಡುವುದಕ್ಕಾಗಿ ಉಳಿಸಿಕೊಂಡಿದ್ದೀರೆಂದು ಹೇಳದೆ ಗತ್ಯಂತರವಿಲ್ಲ. ಇದು ಖಚಿತವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾಲ ಈಗಾಗಲೇ ಆರುಗಂಟೆ ಹತ್ತು ನಿಮಿಷಗಳಾಗುತ್ತಾಬರುತ್ತಿದೆ. ನಾನು ಭಾಷಣವನ್ನು ತೀರ ಎಳೆಯುಲಿಕ್ಕೆ ಹೋಗುವುದಿಲ್ಲ, ನೇರವಾಗಿ ಇಲಾಖೆಗೆ ಸಂಬಂದಪಟ್ಟಂತೆ ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ,

ಈ ರಾಜ್ಯದಲ್ಲಿ ಉನ್ನತ ನ್ಯಾಯಾಲಯದಲ್ಲಿ 5 ಜನ ಜಡ್ಜಸ್ ಸ್ಥಾನ ಖಾಲಿ ಇರುತ್ತದೆ. ತಾವು ಲಾ ಮಿನಿಸ್ಟರ್ ಆಗಿರುತ್ತೀರಿ, ಈ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ, ನ್ಯಾಯಾಂಗವನ್ನೆ ನಮ್ಮ ದೇಶದಲ್ಲಿ ಬಹಳಮಟ್ಟಿಗೆ ಟೀಕೆ ಮಾಡಿದ್ದಾರೆ. ಸಕಾಲದಲ್ಲಿ ನ್ಯಾಯ ದೊರಕುತ್ತಾ ಇಲ್ಲ, ಕರ್ನಾಟಕದಲ್ಲಿ ಬಹಳ ವಿಳಂಬವಾಗುತ್ತಿದೆ. ಹಾಗೆ ಹೀಗೆ ಎಂದು ಹೇಳುತ್ತಿದ್ದಾರೆ. ಬಹಳ ದೂರ ಹೋದರೆ ಮಾತಿನಲ್ಲಿ ಉಲ್ಲೇಖ ಮಾಡುವ ಅವಶ್ಯಕತೆ ಬರುತ್ತದೆ. ಹೈಕೋರ್ಟಿನಲ್ಲಿ 5 ಜನ ನ್ಯಾಯದೀಶರ ಸ್ಥಾನ ಖಾಲಿ ಇದೆ. ಈರೀತಿ ಬಹಳ ದಿವಸಗಳ ಕಾಲ ನ್ಯಾಯಾಧೀಶರ ಹುದ್ದೆಗಳು ಖಾಲಿ ಇದ್ದರೆ ಹೇಗೆ ಜನತೆಗೆ ನ್ಯಾಯವನ್ನು ದೊರಕಿಸಿಕೊಡಲಿಕ್ಕೆ ಸಾಧ್ಯ? ಆದ್ದರಿಂದ ನಿಮ್ಮ ಚೌಕಟ್ಟಿನಲ್ಲಿ ಕಾನೂನನ್ನು ಅನುಸರಿಸಿ ಅಪಾಯಿಂಟ್ ಮಾಡುತ್ತೀರೆಂದು ನಂಬಿರುತ್ತೇನೆ. ಈಗಾಗಲೇ ಒಬ್ಬರು ಜಡ್ಜಸ್‌ನ್ನು ಅಪಾಯಿಂಟ್ ಮಾಡಿ ಅದು ಟರ್ನ್‌ಡೌನ್‌ಆಗಿದೆ ಎಂದು ಕೇಳಿದ್ದೇನೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಕನ್‌ಸಲ್ಟ್‌ಮಾಡಿ ಯೋಗ್ಯರನ್ನು ಆ ಸ್ಥಾನಕ್ಕೆ ಭರ್ತಿಮಾಡಿ. ನೀವು ಇದರ ಬಗ್ಗೆ ಸಲಹೆ ಕೊಡುವುದರಲ್ಲಿಯೂ ಕೂಡ ವಿಳಂಬ ಮಾಡಬೇಡಿ ಎಂದು ಹೇಳುತ್ತೇನೆ. ತುರ್ತುಪರಿಸ್ಥಿತಿಯ ಸಂಬಂಧದಲ್ಲಿ ದೊರಣೆಗೆ ವಿರುದ್ಧವಾಗಿ ನಡೆದುಕೊಂಡಿರುತ್ತಾರೆಂಬ ಕಾರಣದಿಂದ ಇಬ್ಬರು ಜಡ್ಜಸ್

ವಾಪಸ್ ಹೈಕೋರ್ಟಿನಿಂದ ಹೋಗತಕ್ಕಂಥ ತೀರ್ಮಾನವನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಅವರು ಇಬ್ಬರೂ ಹೊರಟುಹೋದರೆ ಏಳುಜನವಾಗುತ್ತದೆ. ಇದರಿಂದಾಗಿ ಹೈಕೋರ್ಟಿನ ಕೆಲಸಕಾರ್ಯಗಳು ಸ್ಥಗಿತವಾಗುತ್ತದೆ. ಆದ್ದರಿಂದ ಆದಷ್ಟು ಬೇಗ ಈ ಸ್ಥಾನಗಳನ್ನು ಭರ್ತಿಮಾಡತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ ಎಂದು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಪಬ್ಲಿಕ್ ಪ್ರಾಸಿಕ್ಯೂಟರ್ಸ್, ಅಸಿಸ್ಟೆಂಟ್ ಪ್ರಾಸಿಕ್ಯೂಟರ್ಸ್ ಅಪಾಯಿಂಟ್ ಮಾಡುವ ವಿಷಯದಲ್ಲಿ ಈ ಸ್ಥಿತಿಯಲ್ಲಿ ಎಲ್ಲ ಹಂತದಲ್ಲಿಯೂ ನ್ಯಾಯ ದೊರಕಿಸಿಕೊಡುವಂಥ ದಕ್ಷತೆಯಿಂದ ಕೆಲಸ ಮಾಡತಕ್ಕಂಥ ಯೋಗ್ಯರನ್ನು ಈಗಲಾದರೂ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ಅವರು ಸಂಬಳವನ್ನು ತೆಗೆದುಕೊಳ್ಳುವುದಷ್ಟೇ ಅಲ್ಲ. ಜನತೆಯ ರಕ್ತವನ್ನು ಹೀರತಕ್ಕಂಥ ಪ್ರವೃತ್ತಿಯನ್ನು ಇಟ್ಟುಕೊಂಡಿರುತ್ತಾರೆ. ಯಾವ ಕೆಲಸವಾಗಬೇಕದರೂ ಅವರಿಗೆ ದುಡ್ಡನ್ನು ಕೊಟ್ಟರೇನೇ ಕೆಲಸವಾಗುವುದು, ಇಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಕೆಲವು ಪ್ರಾಮಾಣಿಕ ಜನರು ಇರಬಹುದು, ಎಲ್ಲರನ್ನೂ ಕೆಟ್ಟವರೆಂದು ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ತೀವ್ರ ಆಲೋಚನೆ ಮಾಡಬೇಕು. ಹಾಗೆ ಮಾಡದೆ ಹೋದರೆ ಈವತ್ತು ಜನತೆಗೆ ನ್ಯಾಯ ದೊರಕುವುದೇ ಕಷ್ಟವಾಗುತ್ತದೆ. ಆದ್ದರಿಂದ ಇತ್ತಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇಂದು ಲೀಗಲ್ ಡಿಪಾರ್ಟ್‌ಮೆಂಟ್‌ಗೆ ಅಧಿಕಾರ ಬಹಳವಾಗಿ ಇರುತ್ತದೆ. ಎಲ್ಲರೂ ಕೊಡಬಾರದು ಎಂದು ಹೇಳುತ್ತಾರೆ ನಾನಾದರೂ ಹೇಳುತ್ತೇನೆ. ಅವರು ನಿರ್ಭಯವಾಗಿ ನಿರ್ಭೀತಿಯಾಗಿ ಕಾನೂನಿನ ಚೌಕಟ್ಟಿನಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿರಬೇಕು, ಅವರಿಗೆ ಯಾವುದೇ ರೀತಿಯ ಒತ್ತಡ ಇರಬಾರದು, ಅವರು ಕೊಟ್ಟಂಥ ನಿರ್ಣಯಗಳು ಪದೇಪದೇ ಹೈಕೋರ್ಟ್, ಉಚ್ಚ ನ್ಯಾಯಾಲಯದಲ್ಲಿ ಅದು ತದ್ವಿರುದ್ಧವಾಗಿ ಆದರೆ ಲಾ ಡಿಪಾರ್ಟ್‌ಮೆಂಟ್‌ನ ಮೇಲೆ ರಿಫ್ಲೆಕ್ಟ್ ಆಗುತ್ತದೆ ಇದಕ್ಕೆ ನೀವೇ ಕಾರಣರಾಗಬೇಕಾಗುತ್ತದೆ. ಆದ್ದರಿಂದ ಈ ಇಲಾಖೆಯನ್ನು ಚೊಕ್ಕಮಾಡಿ ಸ್ವಲ್ಪ ವ್ಯವಸ್ಥಿತವಾಗಿ ಅರೇಂಜ್‌ಮೆಂಟ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.— ನಾವು ಯಾವುದೇ ಒತ್ತಡವನ್ನು ಹಾಕಿಲ್ಲ.

SRI H. D. DEVE GOWDA.—The Hon'ble Minister should know that the previous Law Minister had stated that the High Court judgement is not binding on the Government.

SRI H. SIDDAVEERAPPA — I may inform the hon'ble Leader of the Opposition that the Law Officers in the Law Department do not yield to anybody's advice. They are free and they give their opinion clearly without being biased by anybody. This is my experience and I am so happy about that.

ಶ್ರೀ ಎಚ್. ಡಿ. ದೇವೇಗೌಡ.— ತಾವು ಲಾ ಮಂತ್ರಿಗಳಾಗಿದ್ದು ಇಂಥ ಒಂದು ವಾತಾವರಣ ನಿರ್ಮಾಣವಾಗಿದೆ ಎಂದು ಹೇಳಿದಮೇಲೆ ಸಂತೋಷಪಡುತ್ತೇನೆ ಈವತ್ತಿನ ಪರಿಸ್ಥಿತಿಯಲ್ಲಿ ಉಲ್ಲೇಖ ಮಾಡುವುದಕ್ಕೆ ಅವಕಾಶ ಕೊಡದಂತೆ ನಡೆದುಕೊಂಡು ಬಂದಿದ್ದೇವೆಂದು ಹೇಳಿದರೆ ಸಾಲದು. ಉಲ್ಲೇಖ ಮಾಡುವುದಕ್ಕೆ ಅವಕಾಶವಿಲ್ಲದಂಥ ವಾತಾವರಣವನ್ನು ನಿರ್ಮಾಣ ಮಾಡಿರುವುದಕ್ಕೆ ನಮ್ಮ ಶ್ಲಾಘನೆ ಇದ್ದೇ ಇದೆ ಎಂದು ತಿಳಿಸುತ್ತೇನೆ ಈ ಅಧಿವೇಶನವೇ ಕೊನೆಯ ಅಧಿವೇಶನವಾಗಿರುತ್ತದೆ. ಈ ಸದನ ಇನ್ನು 7 ತಿಂಗಳಕಾಲ ಇರಬಹುದು. ಮುಖ್ಯಮಂತ್ರಿಗಳೇ ಹೇಳಿರುತ್ತಾರೆ, ಇದೇ ಕೊನೆಯ ಅಧಿವೇಶನವೆಂದು ಆದರೆ ಇಲ್ಲಿ ಮತ್ತೊಮ್ಮೆ ಹೇಳುತ್ತೇನೆ, ಒಬ್ಬ ಎಕ್ಸೈಸ್ ಕಮಿಷನರಿಗೆ ಸರ್ಕಾರ ಗುಲಾಮರಾಗಬಾರದು ತಾವು ಚಾವಟಿಯನ್ನು ಉಪಯೋಗಿಸುವ ಒಳ್ಳೆಯ ಕೆಲಸ ಮಾಡಿ, ಒಬ್ಬ ಐ.ಎ.ಎಸ್ ಆಫೀಸರನ್ನು ಸಸ್‌ಪೆಂಡ್ ಮಾಡಿದ ಕೀರ್ತಿ ಈ ಸರ್ಕಾರಕ್ಕೆ ಕೊನೆಗಾದರೂ ಬರಲಿ ಎಂದು ಹೇಳುತ್ತೇನೆ. ನಾನು ಈ ಎಕ್ಸೈಜ್ ಕಮೀಷನರ್ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಹೇಳುವ ಚಾರ್ಜಸ್ ಬೇಸ್‌ಲೆಸ್ ಆದರೆ I am prepared to take the consequences. I am giving this challenge. ನೀವು ಇಷ್ಟು ದಿನ ಮಾಡಿಕೊಂಡು ಬಂದಂತಹ ಅಕ್ರಮ ವ್ಯವಹಾರಗಳಲ್ಲಿ

ಒಳ್ಳೆಯ ಕೆಲಸಗಳೂ ಇವೆ. ಆ ಒಳ್ಳೆಯ ಕೆಲಸಗಳು ಯಾವುವು ಎಂದು ನಾನು ಪಟ್ಟಿ ಮಾಡಿ ಹೇಳುತ್ತೇನೆ. ಈ ಅಕ್ರಮ ವ್ಯವಹಾರಗಳ ಬಗ್ಗೆ ನೀವು ಇವತ್ತು ಪೂರ್ಣ ಹೊಣೆಗಾರಿಕೆ ಹೊರಬೇಕಾಗುತ್ತದೆ. ಆ ಪಾಪಕ್ಕೆ ನೀವು ಗುರಿಯಾಗಬೇಕಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI H. SIDDAVEERAPPA (Minister for Law).—Madam Speaker, I thank the hon'ble members who have participated in the discussion and who have given very valuable and useful suggestions for toning up the adminis ration in the Law Department. I agree with the hon'ble member Sri Kagodu Thimmappa that the common man in this country must get the benefit of the Law Department and free legal aid. The Government has been moving in that direction though we have not achieved much substantially. We have already strated functioning and within a faw months after we started, hundreds of cases have received the legal aid for poor tenants. To this Cell two Advocates, one Sri Ponnurangam a member of the Scheduled Caste and a retired Sessions Judge, and another one Sri Subbanna have been appointed. They are doing the work and I have been looking into the progress. Another Cell, *viz.*, Legal Aid and Advice Board constituted by the Government has also started functioning and I am sure it will start functioning expeditiously.

Hon'ble member Sri Kagodu Thimappa said that there is very heavy pendency in the Courts. It is a fact; unfortunately the arrears in the Courts are mounting up. The reason was that in very many Courts Judges to the Munsiffs' Courts have to be appointed. Unfortunately, the Public Service Commission could not give us the required number. There are 25 Courts going abbegging for want of Judges. Very recently the Government passed an order for constituting a committee to make this recruitment as expeditiously as possible, and I hope it will be attended to as early as possible. We have requested the High Court to set up a Committee and the High Court has agreed for examining the workload of the several Courts in the State, find out and give comprehensive proposals regarding the establishment of new Courts if need be. Hon'ble member Sri Kagodu Thimmappa also stated that he wants a Court in each Taluk. We have our experience that in very many taluks there are hardly a few cases and there is no work even for one hour. The establishment of a Court means an annual expenditure of about Rs. 2 lakhs to the Government All these things will have to be examined and wherever there is heavy pendency or need, Government will appoint extra Judges, and we will be able to solve this problem after the High Court gives its report and I hope it will be done as early as possible.

Regarding the vacancies in the High Court, hon'ble the Leader of the Opposition Sri Deve Gowda stated that there are five vacancies We do not know whether the two Judges from other States would opt

to go out or stay here. In any case. these vacancies are there from a long time. It is a fact. I think a time has come that the Government has to apply its mind, consult the Chief Justice of the High Court and make a recommendation for getting the Judges appointed as early as possible because the pendency in the Courts has gone up: even in the High Court the pendency is mounting up. That is our experience and we have seen even in the Lower Courts. in the Munsiffs' Courts and Civil Courts by the end of March 1977 there were 80,675 cases pending. In Criminal Courts 49,712 cases were pending, in Civil Judges' Courts 64,198 cases were pending and in District Courts 10,089 cases were pending In the High Court also cases are pending and very many writ petitions are pending for years as they are not able to complete the work as early as possible for want of Judges. We have seen some Courts which have no work. As the House is aware we have constituted various Tribunals. The jurisdictions of the several Courts have gone to the Tribunals and it is for this reason that some Courts have no work.

Government thought that we must help the Scheduled Castes/ Scheduled Tribes and the backward classes to come up in the Judiciary For that it was thought that there is need to give them proper training instead of directly appointing them. Therefore we have constituted a Committee with the Law Secretary to Government, the Advocate-General and others with the object of selecting annually 10 candidates for being trained for a period of 4 years in the Law Department. The Advocate-General, two Law College Principals and the Secretary to Government, Law Department, will be the Memebers of that Committee. The selected candidates will have to undergo training for four years and during this period Government will pay them a stipend of Rs. 500 per month so that they could be well trained to shoulder the responsibilities when they are appointed It is in Bangalore, and the whole idea behind this is without being strained they find it rather difficult to fit in to the Judicial Department. There are more than 250 Munsiffs' Courts in the State. This is a very useful Government Order that we have passed and we would like to see that it is put into practice as early as possible. I will place a copy of this Government Order on the Table of the House for the benefit of the hon'ble members and I hope the Press will also highlight the importance of this Government order.

So far as the other Tribunal is concerned under the Chairmanship of Sri Venkataramaiah, we have constituted another Committee, They are working at various stages and I hope they will be able to come to some working order as early as possible.

Sri Deve Gowda has suggested that the Assistant Public Prosecutors are fleecing the public and the work is not satisfactory. I will get this examined and if anybody is found wanting I will take suitable action against them Two of them have been dismissed. We take proper steps to see that proper persons are appointed in these places. So far as Prosecutors are concerned, this does not arise, because, under the Criminal Procedure Code itself, we have to take the recommendation of the District Judge and the Deputy Commissioner before we make any appointment, We will have to act according to the recommendotion of those two important offi ers.

ಶ್ರೀ ಎಚ್.ಡಿ. ದೇವೇಗೌಡ.—ಲಾ ಮಿನಿಸ್ಟರ್ ಅವರು ಫೋನ್ ಮಾಡಿ ರೆಕಮೆಂಡೇಷನ್ ಮಾಡಿ ಕಳುಹಿಸುತ್ತಾರೆ.

6–30 P.M.

SRI H. SIDDAVEERAPPA.—I can assure you that it will not be done

ಶ್ರೀ ಎಚ್.ಡಿ ದೇವೇಗೌಡ —ನೇಮಕ ಮಾಡುವ ಸಂದರ್ಭಗಳಲ್ಲಿ ಲಾ ಮಿನಿಸ್ಟರ್ ಆಫೀಸಿನಿಂದ ಜಿಲ್ಲಾಧಿಕಾರಿಗಳಿಗೆ ಎಷ್ಟು ಟ್ರಂಕ್‌ಕಾಲ್‌ಗಳು ಹೋಗಿವೆ? ಏನೇನು ಕಾರುಬಾರು ನಡೆದಿದೆ ಸ್ವಲ್ಪ ತೆಗೆಸಿ.

SRI H. SIDDAVEERAPPA.—I shall try to be as straight as possible so long as I am here. So long as we are here, we will do our duty conscientiously and I can assure you that I cannot think of doing anything different. Fortunately for me, I have a set of Advisers headed by the Law Secretary. I have full confidence in them and I have delegated some of the powers to them by retaining some of the important powers. Otherwise, I cannot manage these mounting up of files. I am sure, they will be able to give good and satisfactory administration and not betray the Government. They will not do anything unjust Even if there is any political pressure they are not the people to yield for such things. If anything goes wrong my Secretary will come and inform me about those things I can tell you that nothing unlawful will be allowed in the Law Department. I am quite satisfied about this. Our relationship with the High Court is also quite satisfactory, because the High Court has to be taken into confidence for administration of justice and specially, so far as I am concerned, I have nothing to complain against the High Court. The Chief Justice has always co-operated with us in the discharge of our duties and I may tell you that the judiciary is one of the important limbs in the administration of the country. I am one of those being a lawyer knowing the rule of law, and I firmly believe that the judiciary cannot be denigrated. With this object in view, I shall try to administer the department of Law. Very many other suggestions have also come for which my other colleague will reply.

Mr. Sheeranali Chandrashekhar said that we must encourage Kannada language. There are some Judges who are writing judgements in beautiful Kannada language. We have published them in the form of books so that everybody must feel about our Judges. We have been trying to encourage by giving prizes and medals. Perhaps we may give some advance increments or something of that kind so that the Kannada language may be encouraged. I have seen the working of the Courts, but I cannot have close contacts with the Judges because it is not within my domain. I can only find out facts but I cannot inspect the courts because it is the work of the High Court. Only whenever a report is received, we can look 'into the working of the Judges. If there is any complaint against anybody in the department, we have taken action. Madam Speaker. within my short experience in this department, I have been very happy away from the Health Department to be in the company of these good Judges and people have never given any complaints so far, I can assure the House that if there is any scope for improvement in the Law department- I will certainly ensure such improvements whenever necessary are given effect to. With these words. I conclude.

SMT E. E. VAZ (Minister for Excise and Kannada Development).–'

Madam Speaker, on behalf of my department, that is, Exciser Stationery, Printing and Kannada Development I wish to answe, some of the points raised by Hon'ble Members. Hon'ble Members have made some suggestions also some have made criticims as our Hon'ble Leader of the Opposition Sri Deve Gowda, First of all I would like to say that the Karnataka Excise Act 1965 was suitably amended in 1967 to give full powers to the Government decided not to have prohibition. Subsequently the Government decided not to have prohibition in places where it found was not necessary. Only in one Taluk i. e. Yalandur, there is prohibition and in rest of the places of the State there is no prohibition. As you know from the statement, the Excise revenue has been steadily increasing from year to year. The year-wise break up will be like this :

During the year 75-76	...	52 crores
During the year 76-77	...	56 crores

And during the year 1977 we are coming very close to 60 crores. Mr. Naidu suggested that there should be complete prohibition. This is a national policy; but not the State policy. Besides, our friends would do well to understand that the excise revenue is also a great source of financial assistance to implement our welfare and developmental schemes in the State. Now, there is so much demand that we

should have good roads, good schools and other civil facilities. For all these things we should have proper resources. As such Rs. 60 crores is not a small amount. We can well imagine how much progress we could receive if we get proper resources. Some of the Members said that these Arrack shops should not be very close to the schools and religious institutions. I can assure the House that time and again we have issued instructions not to open these Arrack shops near schools and religious institutions. Before issuing of licence they should make sure that there are no schools or temples or other religious institutions. Close by and they should also make sure that the poorer section of the society are not living in those areas, particularly Scheduled Caste and Scheduled Tribes.

If the hon'ble members want to know how many shops we have transferred from these places, I will give them detailed explanation, if they put a separate question. I assure my friends that if in spite of that shops are found in places where they should not be located, we will take action.

SRI B. B. SAYANAK.—How many] shops are licenced and how many are started without permission in the State ? Majority of the arrack shops are started without licences.

SMT. E. E. VAZ.—As far as the department is concerned, we will see no shops are started without licenses.

SRI K. PUTTASWAMY.—I had written a letter that there is one arrack shop located near Mandi Market. There are schools in the area which is thickly populated, and where poor people are living. I wrote to the Excise Commissioner and the Deputy Commissioner six months back. Nothing happened.

SRI B. B. SAYANAK.— There is one shop in front of the R. P. D. College. The college students have agitated that it must be closed. There is also another shops. Students and the public have agitated that these shops should not be allowed to continue.

ಅಧ್ಯಕ್ಷರು.—ಅವರಿಗೆ ಎಲ್ಲ ಷಾಪ್‌ಗಳು ಗೊತ್ತಿರಂತ್ತವೆಯೊ ?

SRI K. PUTTASWAMY.—In spite of my repeated requests to see that the officials concerned go and make an inspection, no action has been taken till now.

SRI B. B. SAYANAK.—The Deputy Commissioner has requested the Government to stop these shops. Government has not done it.

ಅಧ್ಯಕ್ಷರು.—ನೀವು ಈ ರೀತಿ ಇಂಟರಪ್ಟ್ ಮಾಡುತ್ತಿದ್ದರೆ You do not deserve a reply.

SMT. E. E. VAZ.—I was not aware of this. I request hon'ble Member Sri K. Puttaswamy to send it in writing and will have it shifted.

SRI K. PUTTASWAMY.—I request the Hon'ble Minister to take action on the representation that I have made in this House, because, I have lost faith in the administration.

ಶ್ರೀ ಕೋಣಂದೂರು ಲಿಂಗಪ್ಪ.—ಬರೆದು ಕೊಡಬೇಕು, ಬರೆದು ಕೊಡಬೇಕು ಎಂದರೆ ನಮಗೇನಾದರು ಗುಮಾಸ್ತರನ್ನು ಕೊಟ್ಟಿದ್ದೀರಾ ? ನಾವು ಏನು ಹೇಳುತ್ತೇವೆ ಅದನ್ನು ಕೇಳಿಕೊಂಡು ಗುರುತು ಹಾಕಿಕೊಂಡು ಉತ್ತರ ಕೊಡಬೇಕು.

ಶ್ರೀ ಎಚ್ ಡಿ, ದೇವೇಗೌಡ.—ಈ ಸದನದ ಸದಸ್ಯರು, ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಣೆ ಮಾಡುವ ಬಗ್ಗೆ ಎಕ್ಸೈಜ್ ಕಮೀಷನರಿಗೆ ಅರ್ಜಿ ಬರೆದರೂ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳದಿದ್ದರೆ, ಈ ಸದನದ ಸದಸ್ಯರು ಬರೆದಂತಹ ಕಾಗದವನ್ನು ಉಪೇಕ್ಷೆಯಿಂದ ನೋಡುವುದಾದರೆ ಅವರಿಗೆ ಇವತ್ತಿನ ದಿವಸ ಶಿಕ್ಷೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಬರೆದಿರುವ ಕಾಗದ ಏನಾಗಿದೆ, ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಮಾಹಿತಿ ಸಂಗ್ರಹಿಸಿ ನಮಗೆ ಹೇಳಬೇಕು. He is a servant of the State Government. He is subordinate officer to the Government whatever the status he may enjoy. ಈ ಸದನದ ಗ್ರಾಂಟನ್ನು ಮಂಜೂರ್ಮಾಡಿಕೊಟ್ಟರೆ ಅವರು ಪಗಾರ ತೆಗೆದುಕೊಳ್ಳುತ್ತಾರೆ. ಅವರು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಈ ಸಭೆಗೆ ತಿಳಿಸಬೇಕು. ಒಂದು ವೇಳೆ ಅವರೇನಾದರು ಆ ಕಾಗದವನ್ನು ಕಸದ ಬುಟ್ಟಿಗೆ ಹಾಕಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನನಗೆ ಈ ಕಾರುಬಾರವನ್ನು ನೋಡಿದರೆ ಹೇಸಿಗೆಯಾಗುತ್ತದೆ. He is not a big man above the Government.

ಶ್ರೀ ಎಚ್. ಸಿದ್ಧವೀರಪ್ಪ.—ಎಲ್ಲರನ್ನು ಸಸ್ಪೆಂಡ್ ಮಾಡುತ್ತಾ ಹೋದರೆ ಆಫೀಸ್ ನಡೆಯುವುದಿಲ್ಲ.

ಶ್ರೀ ಎಚ್. ಡಿ, ದೇವೇಗೌಡ.—ಮಾನ್ಯ ಸಿದ್ಧವೀರಪ್ಪನವರನ್ನು ಸಸ್ಪೆಂಡ್ ಮಾಡಿದರೆ ಮಂತ್ರಿಗಳು ಆಗುವವರು ಇಲ್ಲವೆ ?

ಶ್ರೀ ಹೆಚ್. ಸಿದ್ಧವೀರಪ್ಪ.—ಮಂತ್ರಿಗಳು ಆಗುವವರು ಇದ್ದಾರೆ, ಆದರೆ ಆಫೀಸರ್ ಆಗುವವರು ಇಲ್ಲ.

SMT. E. E. VAZ.—After I took charge, two or three Legislators have brought such instances to my notice and in one or two places we have shifted the shops located near a primary school and place of worship. We take immediate action to cancel licenses also. If such instances are still there and shops are located near schools, etc., we will certainly take action.

Hon'ble member Sri Sheernali Chandrasekhar said that licenses are given at random. They are not given at random. The Deputy Commissioner will take local opinion as to whether it is a fit place for the location of the shops. The local people Village Panchayat people, Corporation Members or authorities and other local authorities are consulted to find out whether they should given licenses at such locations whether it is advisable to give license or not.

The Hon'ble Leader of the Opposition made some serious remarks on our Excise Commissioner.

ಒಬ್ಬ ಸದಸ್ಯರು.—ಆ ಎಕ್ಸೈಜ್ ಕಮೀಷನರಿಗೆ ಫ್ಲೂ ಆಗಿದೆ.

(೫-೬ ಮಂದಿ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡಿದರು)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಭಾಷಣ ಕೇಳಬೇಕೆಂದರೆ ಆನಂದವಾಗುತ್ತದೆ, ಕೇಳುತ್ತೇನೆ. ಈ ಸಭೆಯ ಕಾರ್ಯಕಲಾಪದ ನಿಯಮಾವಳಿಗಳ ಪ್ರಕಾರ ಮಾನ್ಯ ಮಂತ್ರಿಗಳು ಜವಾಬ್ದಾರರು. ಸದನದ ಕಾರ್ಯಕಲಾಪಗಳಿಗೆ ಅಸಿಸ್ಟ್ ಮಾಡಲು ಕೆಲವು ಅಧಿಕಾರಿಗಳು ಬರುತ್ತಾರೆ, ಅದು ಇದುವರೆಗೆ ನಡೆದುಕೊಂಡು ಬಂದಿರುವ ಸಂಪ್ರದಾಯ. ಸಂಬಂಧಪಟ್ಟ ಸೆಕ್ರೆಟರಿಯವರು ಬರಬೇಕು. ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಡುತ್ತಾರೆ, ಟೀಕೆಗಳನ್ನು ಮಾಡುತ್ತಾರೆ ಅವು ಅವರ ಕಿವಿಗೆ ಬೀಳುತ್ತವೆ. ಅದು ಅವರಿಗೆ ತಮ್ಮ ಇಲಾಖೆಯ ಆಡಳಿತವನ್ನು ಟೋನ್ ಅಪ್ ಮಾಡಲು ಸಹಕಾರಿಯಾಗುತ್ತದೆ. ಅವರುಗಳು, ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಏನಾದರು ಅಸಿಸ್ಟ್ ಮಾಡಬೇಕಾಗುತ್ತದೆ ನಿಜವಾಗಿ ಕಾಯಿಲೆ ಬಂದಿರುವ ವಿಷಯ ಬೇರೆ; ನಿಂತಿದ್ದ ಹಾಗೆ ಹೃದಯವೇದನೆ ಬರಬಹುದು. ಎಕ್ಸೈಜ್ ಡಿಪಾರ್ಟ್‌ಮೆಂಟು ಚರ್ಚೆಗೆ ಬರುತ್ತದೆ ಅಂದಾಗ ಎಕ್ಸೈಜ್ ಕಮೀಷನರಿಗೆ ಕಾಯಿಲೆ ಬಂದಿದೆ ಎಂದರೆ ಅದು ಒಂದು ಬಾಗ. ಇನ್ನೊಂದು ಏನೆಂದರೆ, ಇಲ್ಲಿ ಆಗತಕ್ಕ ಟೀಕೆಗಳು ಕಿವಿಗೆ ಬೀಳದೆ ಇದ್ದರೆ ಸಮಾನವಾಗುತ್ತದೆಂದು ಕದ್ದು ಹೊರಗೆ ಇರುವುದು ಎರಡನೇ ಬಾಗ. ಇವೆರಡರಲ್ಲಿ ಯಾವುದು ಸರಿ ?

SMT. E. E. VAZ.—As far as I know he is down with fever. I think you should have that much of consideration.

SRI B. B. SAYANAK.—For how many years the Excise Commissioner is there ?

SMT. E. E. VAZ.—Hon'ble members wanted to know how many people have been suspended.

SRI H. D. DEVE GOWDA.—We have made charges. You have to reply.

SMT. E. E. VAZ.—Government has to take action if there are charges. Some of the persons against whom there have been charges but later on found to be not very serious have been reinstated.

SRI KONANDUR LINGAPPA.—What about the charges against the Commissioner himself ?

SMT. E. E. VAZ.—Hon'ble Leader of the Opposition Sri H. D Devegowda has admitted that the Excise Department is fetching more revenue to the Government. I am really grateful to him

The first charge was that toddy was mixed with Chloral Hydrate. I also of the opinion that some times it does happen Once when I was not an Excise Minister, a complaint was brought to my notice....

ಶ್ರೀ ಕೆ. ಎಚ್. ಹನುಮೇಗೌಡ.—ಯಾವುದಾದರೂ ಒಂದು ತಾಲ್ಲೂಕಿನ ಅಂಕಿ ಅಂಶಗಳನ್ನು ಕೊಡಿ. ಎಷ್ಟು ಈಚಲು ಮರಗಳು ಮತ್ತು ತೆಂಗಿನ ಮರಗಳನ್ನು ಟ್ಯಾಪ್ ಮಾಡಲು ಕಟ್ಟಿದ್ದೀರಿ, ಅದರಿಂದ ಎಷ್ಟು ಹೆಂಡ ಬಂದಿದೆ ? ಎಷ್ಟು ಡಿಸ್ಟ್ರಿಬ್ಯೂಟ್ ಮಾಡಿದ್ದೀರಿ ಹೇಳುತ್ತೀರಾ ? ಕಳ್ಳಬಟ್ಟಿ ಸಾರಾಯಿಯನ್ನು ಕುಡಿದು ಆರೋಗ್ಯ ಕೆಟ್ಟುಹೋಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಟಾಡಿ ಖರ್ಚಾಗುತ್ತಿದೆ ? ಮಾನ್ಯ ಸಚಿವೆಯರು ಯಾವೊತ್ತಾದರೂ ಯಾವುದಾದರು ಟಾಡಿ ಷಾಪನ್ನು ಪರೀಕ್ಷೆ ಮಾಡಿದ್ದಾರೆಯೇ ? ಈ ಟಾಡಿಯನ್ನು ಜನಗಳು ಕುಡಿದು ತೊಂದರೆಯನ್ನು ಅನುಭವಿಸುತ್ತಿದ್ದಾರೆ,

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಚಿವೆಯರು ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಟಾಡಿ ಉತ್ಪತ್ತಿಯಾಗುತ್ತದೆ, ಎಷ್ಟು ಡಿಸ್ಟ್ರಿಬ್ಯೂಟ್ ಆಗುತ್ತದೆ ಎನ್ನುವ ಅಂಕಿ ಅಂಶಗಳನ್ನು ಹೇಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಟಾಡಿಯಿಂದ ಮಾಡುವ ಮೋಸದಿಂದ ಜನರನ್ನು ಕೊಲ್ಲುವಷ್ಟು ಬೇರೆ ಯಾವುದರಲ್ಲಿಯೂ ಇಲ್ಲ.

ಅಧ್ಯಕ್ಷರು .—ಒಂದೊಂದು ಗಂಟೆ ಭಾಷಣ ಮಾಡಿ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುವಾಗ ಮಾನ್ಯ ಸದಸ್ಯರು ಈ ರೀತಿ ಪ್ರಶ್ನೆ ಕೇಳುವುದಕ್ಕೆ ಎದ್ದು ನಿಂತರೇ ಹೇಗೆ ?

SMT. E. E. VAZ.—Two years back, a complaint came to my notice from my District. I got a bottle of toddy and sent it for chemical analyses (examination) and they gave a report saying that it was pure toddy only mixed with more water.

ಕಾಗೋಡು ತಿಮ್ಮಪ್ಪ.—ಕಳ್ಳಬಟ್ಟಿ ಸಾರಾಯನ್ನು ತಯಾರು ಮಾಡತಕ್ಕ ಡಿಸ್ಟಲರಿಗಳಿಗೆ ಸಂಬಂಧಪಟ್ಟಹಾಗೆ ಎಷ್ಟು ಕೇಸುಗಳನ್ನು ಬುಕ್ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ? ಮತ್ತು ಟಾಡಿ ಅಡಲ್ಟರೇಷನ್ ಬಗ್ಗೆ ಎಷ್ಟು ಕೇಸುಗಳನ್ನು ಬುಕ್ ಮಾಡಿದ್ದೀರಾ ?

SRI B. B. SAYANAK.—In Belgaum, toddy was adulterated and two persons died but the Government has uot takan any aotion.

SMT. E.E. VAZ.—A doubt about adulteration will come because we have few trees. They bring it in Vans and Trucks, So, there is a proposal before the Government whether to stop hereafter this manufacturing of toddies, enyway it is not yet finalised. It is under the consideration of the Government.

ಶ್ರೀ ಎಚ್.ಡಿ. ದೇವೇಗೌಡ.—ಜಮಿನಿ ಡಿಸ್ಟಲರಿ ಮತ್ತು ದಾಸಪ್ಪ ಡಿಸ್ಟಲರಿಗಳಲ್ಲಿ ಎಷ್ಟು ಆಡಲ್ಟರೇಷನ್ ಕೇಸುಗಳನ್ನು ಬುಕ್ ಮಾಡಿದ್ದೀರಿ ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಆಡಲ್ಟರೇಷನ್ ಕೇಸುಗಳನ್ನು ಬುಕ್ ಮಾಡಿದ್ದೀರಿ ? Kindly give me those details.

ಶ್ರೀಮತಿ ಇ. ಇ. ವಾಜ್.—ದಯಮಾಡಿ ಸಾವದಾನದಿಂದ ಕುಳಿತುಕೊಂಡು ಕೇಳಿದರೆ ಒಂದೊಂದಾಗಿ ಎಲ್ಲಾ ಪಾಯಿಂಟ್‌ಗಳನ್ನು ಹೇಳುತ್ತಾ ಹೋಗುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ —ಬೆಂಗಳೂರು, ಹಾಸನ ಜಿಲ್ಲೆಗಳಲ್ಲಿ ಟಾಡಿ ಆಡಲ್ಟರೇಷನ್ ಕೇಸುಗಳನ್ನು ಎಷ್ಟು ಬುಕ್ ಮಾಡಿದ್ದೀರಿ ಎಂಬುದನ್ನು ಹೇಳಲಿಲ್ಲ.

SMT E. E. VAZ.—Another charge made by Sri Deve Gowda was about the auction in Bangalore District and he said one Mr. Govindan was threatened by the Excise Commissioner. This fact is not known to us and we are not aware of it–whether he had threatened or whether there was another party which had bids for the auction or come for the auction. Anyway, I will have it looked into and see whether it is a fact and what has happened and on what count he was asked not to bid etc.,

I would like to apprise the Hon. Members with few tacts and figures about the auction at 5 Districts which was held before the Election. I would like t› give a little clarification. Mr Deve Gowda no doubt said that it was before the Grover Commission and would not like to touch upon it.

SRI H. D. DEVE GOWDA.—I don,t want any clarification on this. It is before the Grover Commission.

MADAM SPEAKER.—It is before the Commission. I don't allow to give details about it.

SMT E. E. VAZ.—about Gemini Breweries, there was a package deal in 1975 and the Commissioner is the authority to do it.

SRI KAGODU THIMMAPPA.—What is meant by package deal ?

SMT. E. E. VAZ —Certain number of Taluks will be allotted to each distilleries There are 4 distilleries out of which, one is under Government i. e . Mandya Sugar and rest are private distilleries and they are distributing the apirih.

It is the Excise Commissioner who is to look to it and it is within his powers and it need not come to the notice of the Government. All these agreements and giving of the licences are done at the District level by the Deputy Commissioner's and at the Excise Commissioner's level.

SRI KAGODU THIMMAPPA —What is the arrangement that you have made ?

SRI H. D. DEVE GOWDA – At whose instance these breweries came to the picture before the Excise Commissioner ? How the package deal has been made between Gemini Breweries and the Excise Commissioner's office ?

SMT. E. E. VAZ.—A proposal was sent by the Excise Commissioner and the Government has okeyed it. If there is any shady deal, we will look into it. It is easy to say that it is a shady deal etc., We will see and look into the details. I would like to tell you that it was done for the good of the Government.

SRI. KAGODU THIMMAPPA —We have made a serious charges about the very deal itself. The Hon. Minister has to come out with all details about this deal.

SRI C. BYRE GOWDA.—Let her reply about it tomorrow.

SRI B.B. SAYANAK.–We have not interrupted when Mr. Siddaveerppa was replying for his Demands for Grants. This is a very important matter and there are so many charges against the Excise Commissioner. Therefore, we are asking clarifications.

SMT. E. E. VAZ.—I am in no mood to shield the Excise Commissioner or giving protection if he has done a shady deals but to my knowledge, none of these shady deals have come to my notice and I feel whatever deal he has done and agreements entered into, are absolutely genuine and done in the interest of the economy of the Government of the State.

ಶ್ರೀ ಕಾಗೋಡು ತಿಮ್ಮಪ್ಪ.—ಜೆಮಿನಿ ಡಿಸ್ಟಲರಿಯವರು ಅರೆಕಾ ಸಪ್ಲೈ ಮಾಡುವುದಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ, ಇದರ ವ್ಯವಸ್ಥೆ ಏನು ? ಯಾವ ಯಾವ ಕಂಪೆನಿಗಳಿಗೆ ಅರೆಕಾ ಸರಬರಾಜು ಮಾಡುವುದಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ ? ಇದರ ವಿವರಗಳನ್ನು ಸ್ವಲ್ಪ ಹೇಳುತ್ತೀರಾ ?

SMT. E. E. VAZ.—When other distilleries we asked to construct their own warehouses andto supply bearing the transport cost, it is only one brewery-Gemini Distilleries which came forward to supply bearing the transport cost.

SRI H. D. DEVE GOWDA.—What was the arrangement they were having prior to the entrustment to the Gemini ?

SMT. E. E. VAZ.—If you want further details, I will give.

SRI H. D. DEVE GOWDA.—You are the Minister. Why don't you come out with all details.

SMT. E. E. VAZ.—If you want, I will give you all details.

7-00 P. M.

ಅಧ್ಯಕ್ಷರು.—ತಾವು ಈಗ ತಾನೇ ಭಾಷಣ ಮಾಡಿದ್ದೀರಿ, ಈಗಾಗಲೇ ಅದಕ್ಕೆ ಉತ್ತರ ಬೇಕು ಎಂದರೆ ಹೇಗೆ ಸಾಧ್ಯ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು ತಮಗೆ ಒಂದು ಸಲಹೆ ಕೊಡುತ್ತೇನೆ ನಾನು ಜವಾಬ್ದಾರಿಯಿಂದ ಈ ಆರೋಪಣೆ ಮಾಡಿದ್ದೇನೆ. ವಿರೋಧ ಪಕ್ಷದ ನಾಯಕ ದೇವೇಗೌಡರು ಮಾಡಿದ ಆಪಾದನೆ ನಿಜವಲ್ಲ ಎಂದು ಸಾಬೀತು ಮಾಡಿದರೆ, ಈ ಸದನ ಏನು ಶಿಕ್ಷೆ ಕೊಡುತ್ತದೋ ಅದನ್ನು ಅನುಭವಿಸುವುದಕ್ಕೆ ನಾನು ಸಿದ್ಧ. ನಾನು ನ್ಯಾಯಾಂಗ ತನಿಖೆ ಕೇಳುವುದಿಲ್ಲ. ಬೆಂಗಳೂರು ಡಿವಿಷನಲ್ ಕಮೀಷನರ್ ಶ್ರೀಮಾನ್ ಶಂಕರ್‌ನಾರಾಯಣ್ ಏನು ಇದ್ದಾರೆ ಅವರನ್ನು ನೇಮಕ ಮಾಡಿ ಇದನ್ನು ತನಿಖೆ ಮಾಡಿಸಿ. Shri Shankaranarayan, Divisional Commissioner, Bangalore, is one of the top most officer known for his integrity, belongs to the minor community and let the Government takes a decision today on the floor of this House that Officer will be appointed as an Enquiry Officer to enquire all these things and place the report on the Floor of this House. If the report of that Officers says that the charges made by me or false, I am going to tender my resignation to the membership of this House.

SMT. E. E. VAZ.—If the hon. Member Shri Devegowda wants any clarification, I will give it to him.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮಾನ್ಯ ಮಂತ್ರಿಗಳು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳುತ್ತೇನೆ. ನನಗೆ ಬೇಕಾಗಿರುವುದು ಮಿನಿಮಮ್ ಡಿಮ್ಯಾಂಡ್ ಇಷ್ಟೆ. ನಾನು ಮಾನ್ಯ ಮಂತ್ರಿಗಳ ಪ್ರಾಮಾಣಿಕತನದ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ರೀಸೇಲ್ಸ್ ಟರ್ನ್ಡ್ ಡೌನ್ ಏನು ಮಾಡಿದ್ದೀರಿ ಅದರ ಬಗ್ಗೆ ವಿಚಾರಣೆ

ಮಾಡಿ ಎಂದೂ ನಾನೂ ಒತ್ತಾಯ ಮಾಡುತ್ತೇನೆ. ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳನ್ನು ಅವರಿಗೆ ಅಲಾಟ್ ಮಾಡಿದ್ದಾರೆ, ಎಷ್ಟು ದುಡ್ಡು ಲೂಟಿ ಹೊಡೆದಿದ್ದಾರೆ, ಯಾರು ಯಾರಿಗೆ ಎಷ್ಟು ದುಡ್ಡು ಹೋಗಿದೆ ಹೇಳಲಿ.

SMT. E. E. VAZ.—Madam Speaker, the hon. Leader of the Opposition has made a suggestion Anyway, we will look into it and if any prima facie case is proved, certainly we will take suitable action.

ಅಧ್ಯಕ್ಷರು.—ನೀವು ಹೇಳಿದ ಆಫೀಸರನ್ನೇ ಹಾಕಬೇಕು ಅದನ್ನು ಸರ್ಕಾರ ಹೇಗೆ ಒಪ್ಪಲು ಸಾಧ್ಯ ?

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ತಮ್ಮ ಅಧಿಕಾರ ಚಲಾಯಿಸಿ. ಬೇರೆ ಆಫೀಸರನ್ನೇ ನೇಮಕ ಮಾಡಿ ವಿಚಾರಣೆ ನಡೆಸಿ. ನಾನು ಮಾಡಿದ ಆರೋಪಣೆ ನಿಜವಲ್ಲ ಎಂದು ಕಂಡು ಬಂದರೆ ನಾನು ರಾಜೀನಾಮೆ ಕೊಡುತ್ತೇನೆ.

SRI KAGODU THIMMAPPA.—We are asking only to make an enquiry through that Officer.

ಅಧ್ಯಕ್ಷರು.—ಅವರು I will look into ಅಂತ ಹೇಳಿದ್ದಾರಲ್ಲಾ.

ಶ್ರೀ ಹೆಚ್. ಡಿ. ದೇವೇಗೌಡ.—ನಾನೂ ತಮ್ಮನ್ನು ನ್ಯಾಯ ಕೇಳುತ್ತೇನೆ. ಅದರಂತೆ ಮಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ.—ವಿಚಾರಣೆ ನಡೆಸಿ come out with truth.

SMT. E. E. VAZ.—I will get it investigated and I will look into each and every charge.

SRI H. D. DEVE GOWDA.—You are also equally intersted to clean the administration. I do not doubt the bonafides of the Members of the other side. ಆದುದರಿಂದ ಇದನ್ನು ವಿಚಾರಣೆ ನಡೆಸಿ. I suggested an Officer to make an enquiry into the allegations.

SRI H. SIDDAVEERAPPA.—The hon Leader of the Opposition need not resign now.

ಶ್ರೀಮಂತಿ ಇ. ಇ. ವಾಜ್.—ಅವರು ಡಿಶಂಬರ್‌ವರೆಗೂ ಇರಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಇಷ್ಟು ಭಂಡತನವಾದರೆ ನನಗೆ ಇದರ ಬಗ್ಗೆ ಅರ್ಥವಾಗುವುದಿಲ್ಲಾ. ನೀವು ಇಷ್ಟು ಭಂಡತನ ಇದ್ದೀರಿ ಅಂತ ನನಗಂತೂ ಈವೊತ್ತಿನವರೆಗೂ ಗೊತ್ತಿರಲಿಲ್ಲ. ನಾನು ಇದನ್ನು ಸೀರಿಯಸ್ ಆಗಿ ಹೇಳುತ್ತಿದ್ದೇನೆ. ನಾನು ಇದರ ಬಗ್ಗೆ ಜ್ಯುಡಿಷಿಯಲ್ ಪ್ರೋಬ್ ಮಾಡಿ ಎಂದು ಹೇಳಲಿಲ್ಲಾ ಯಾರನ್ನಾದರೂ ಒಬ್ಬರು ಆಫೀಸರ ಕೈಯಲ್ಲಿ ಇದನ್ನು ವಿಚಾರಣೆ ನಡೆಸಿ ಎಂದು ಹೇಳಿದ್ದೇನೆ. ಇದು ನನ್ನ ಮಿನಿಮಮ್ ಡಿಮ್ಯಾಂಡ್. What is the recommendation of the Excise Commissioner ? Whether it has not been turned down by the Hon. Minister ; if it is turned down, is it not sufficient to doubt the bonafide of that Officer?

SMT. E. E VAZ.—The order of the Excise Commissioner was turned down for resale and it was convinced that the State will get more revenue.

ಶ್ರೀ ಹೆಚ್. ಡಿ. ದೇವೇಗೌಡ.—ಇದನ್ನು ವಿಚಾರಣೆ ನಡೆಸಿದರೆ ಗೊತ್ತಾಗುತ್ತದೆ.

ಅಧ್ಯಕ್ಷರು.—ತಾವೇಕೆ ಇಷ್ಟು ಹಟ ಹಿಡಿದಿದ್ದೀರಲ್ಲಾ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನೇನು ಹಟ ಹಿಡಿಯಲಿಲ್ಲ. ಆ ಫೈಲನ್ನು ಸಭೆಯ ಮುಂದೆ ಇಡಲಿ ಗೊತ್ತಾಗುತ್ತದೆ.

SRI K. PUTTASWAMY.—It is a very serious allegation made against the working of the Department. I am aware that the Hon. Minister is handicapped on account of the Officers of the Excise Commission against whom direct allegations have been made, The very object of this Debate would be frustrated, if proper replies does not come forward after all the public have to Judge. The Opposition have made allegations; it is duty of the Government to answer this augment. Let the Hon. Minister take some time and give reply, otherwise the very object of this Debate is frustrated.

SMT. E. E. VAZ.—The Hon. Member wanted to know whether he has got warehouses and Depot Centres in other places. I would like to tell Mr. Thimmappa that the Gemini Distalliries has got 4 warehouses. One of the Hon. Member has suggested that there should be a Welfare Scheme here also, as such Sohme is there in Kerala. We have suggested to the Social Welfare Department to to take action to formulate the same Scheme in Karnataka.

ಶ್ರೀ ಹೆಚ್. ಡಿ. ದೇವೇಗೌಡ.—ಜೆಮಿನಿ ಬ್ರುವರೀಸ್ ಪ್ರೊಪ್ರೈಟರ್ ಬಸವರಾಜ್ ಅವರಿಗೆ ದುಡ್ಡು ಮಾಡಿಕೊಡುವುದು ಸಾಮಾಜಿಕ ನ್ಯಾಯವೇ ? The proprietor is going to control this Government. You cannot touch him; you cannot shake him.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಕತೆ ಹೇಳುತ್ತಾರೆ. ನಮಗೆ ಬೇಕಾಗಿಲ್ಲ. ನಮಗೆ ಗೊತ್ತಿದೆ. ನಾನು ಪ್ರತಿದಿವಸ ಬರಬೇಕಾದರೆ ಆ ಫ್ಯಾಕ್ಟರಿ ಮುಂದೇನೇ ಬರ್ತಾ ಇದ್ದೇನೆ. ಜೆಮಿನಿ ಸಂಸ್ಥೆಯಲ್ಲಿ ವೇರ್‌ಹೌಸ್ ಡಿಪೋ ಮೊದಲೂ ಇರಲಿಲ್ಲ. ಆಗ ಆ ಫ್ಯಾಕ್ಟರಿ ನಡೆಯುತ್ತಾ ಇಲ್ಲ.

SMT. E. E. VAZ.—With these, I think, the Hon. Members are satisfied that we are giving a revenue of Rs. 60 Crores. ೬೦ ಕೋಟಿ ರೂಪಾಯಿ ವರಮಾನ ಕೊಡುವ ನಾನು ವೆಚ್ಚಕ್ಕೆ ೪ ಕೋಟಿ ರೂಪಾಯಿ ಮಾತ್ರ ಕೇಳುತ್ತಾ ಇದ್ದೇನೆ. ನಾನು ಹೆಚ್ಚಿಗೆ ಕೇಳುತ್ತಾ ಇಲ್ಲ. ಈ ೪ ಕೋಟಿ ಚಿಲ್ಲರೆಯಲ್ಲಿ ೨ ಕೋಟಿ ರೂಪಾಯಿ ಕನ್ನಡ ಡೆವಲಪ್‌ಮೆಂಟ್‌ಗೆ ಕೇಳುತ್ತಾ ಇದ್ದೇನೆ. ನೂರಾರು ಕೋಟಿ ರೂಪಾಯಿ ಮಂಜೂರು ಮಾಡುವಾಗ ಕೇವಲ ೪ ಕೋಟಿ ರೂಪಾಯಿಗೆ ತಾವು ಇಷ್ಟು ಚರ್ಚೆ ಮಾಡಬೇಕಾದ ಅಗತ್ಯ ಇಲ್ಲ ಎಂದು ನನ್ನ ಭಾವನೆ.

ಶ್ರೀ ಕಾಗೋಡು ತಿಮ್ಮಪ್ಪ.—ಜೆಮಿನಿ ಬ್ರೂವರೀಸ್‌ಗೆ ಕೊಟ್ಟಿರುವುದನ್ನು ಈವೊತ್ತು ಮಂಡ್ಯ ಷುಗರ್ ಕಂಪನಿಗೆ ಕೊಟ್ಟಿದ್ದರೆ, ಅದರಿಂದ ೨ ಕೋಟಿ ರೂಪಾಯಿ ಲಾಭ ಆಗುತ್ತಿತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಈಗಾಗಲೇ ಇದರಲ್ಲಿ ೫೧ ಪರ್ಸೆಂಟ್ ಷೇರು ಇದೆ. ಅವರಿಗೆ ಇದು ಬೇರೆ ಕೊಟ್ಟಿರುವುದು ಇನ್ನೂ ದುಡ್ಡು ಹೆಚ್ಚು ಹೊಡೆಯಲಿಕ್ಕೆ ಕೊಟ್ಟಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮಂಡ್ಯದ ಸಕ್ಕರೆ ಕಾರ್ಖಾನೆ ಸರ್ಕಾರದವತಿಯಿಂದ ನಡೆಯುತ್ತಿದ್ದರೂ ಸಹ ಅದಕ್ಕೆ ಕೊಟ್ಟಿದ್ದ ಲೈಸೆನ್ಸ್ ರದ್ದು ಮಾಡಿ ಬೇರೆಯವರಿಗೆ ಕೊಟ್ಟಿರುವುದರ ಉದ್ದೇಶವಾದರೂ ಏನು ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರ ಎಲ್ಲ ಪ್ರಶ್ನೆಗಳಿಗೂ ನಾನು ವಿವರಣೆ ಕೊಟ್ಟಿದ್ದೇನೆ. ಅದು ಅವರಿಗೆ ಸಮಾಧಾನವಾಗದಿದ್ದರೆ ನನಗೆ ಅವರು ಬರೆದು ತಿಳಿಸಿದರೆ ಅದಕ್ಕೆ ನಾನು ಪೂರ್ತಾ ವಿವರಗಳನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಈ ಮೊದಲು ಅವರು ಒಂದು ಲಕ್ಷ ಲೀಟರ್‌ವರೆಗೆ ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದರು. ಆದರೂ ಅವರ ಲೈಸೆನ್ಸ್ ರದ್ದು ಮಾಡುವುದಕ್ಕೆ ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಆದರಿಂದ ಸರ್ಕಾರಕ್ಕೆ ಲಾಭ ಬರುತ್ತದೆ, ಟ್ರಾನ್ಸ್‌ಪೋರ್ಟ್ ಚಾರ್ಜ್ ಉಳಿಯುತ್ತದೆ ಎಂಬ ಕಾರಣದಿಂದ ಸ್ವಲ್ಪ ಬದಲಾವಣೆ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಿದ್ದರೆ ನಿಮ್ಮ ಸರ್ಕಾರವನ್ನು ನಡೆಸುವ ಹಕ್ಕನ್ನು ಒಬ್ಬ ಕಂಟ್ರಾಕ್ಟ್‌ದಾರರಿಗೆ ಏಕೆ ವಹಿಸಬಾರದು ?

ಶ್ರೀ ಕಾಗೋಡು ತಿಮ್ಮಪ್ಪ.—ಜೆವಿನಿ ಸುಗ್ಗಿಯವರು ಸರಬರಾಜು ಮಾಡುತ್ತಿರುವುದು ಕಳ್ಳ ಭಟ್ಟಿಯೇ ಹೊರತು ಅದು ಸಾರಾಯಿ ಅಲ್ಲವೆಂದು ಅಲ್ಲಿ ತಯಾರಾದುದನ್ನು ಕುಡಿದವರು ಹೇಳು ತ್ತಿರುವುದು ತಮಗೆ ಗೊತ್ತಿದೆಯೇ ?

ಅಧ್ಯಕ್ಷರು.—ನನಗೆ ಗೊತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ದೇವರಾಜ ಅರಸ್‌ರವರ ಸರ್ಕಾರವನ್ನು ನಡೆಸಲು ಬಸವರಾಜ್ ಮತ್ತು ಚಾಮರಾಜ್ ಅವರಿಗೇ ಏತಕ್ಕೆ ಕಂಟ್ರಾಕ್ಟ್ ಕೊಡಬಾರದು ? ಅದರಿಂದ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಲಾಭ ಬರುತ್ತದೆ.

ಶ್ರೀಮತಿ ಇ. ಇ. ವಾಜ್.—ಇನ್ನು ಕನ್ನಡಾಭಿವೃದ್ಧಿ ಕಾರ್ಯಕ್ರಮಗಳು.........

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಲಿಂಗಪ್ಪನವರು ಏನೋ ಸಲಹೆ ಕೊಟ್ಟರು;

ಶ್ರೀಮತಿ ಇ. ಇ. ವಾಜ್.—ಅವರ ಸಲಹೆಯನ್ನು ಪರಿಶೀಲಿಸಲಾಗುವುದು.

(ಸಭೆಯಲ್ಲಿ ನಗು)

ಅಧ್ಯಕ್ಷರು.—ಅವರ ಸಲಹೆಯನ್ನು ಒಪ್ಪಿಕೊಳ್ಳುವುದಕಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಈ ಸರ್ಕಾರವನ್ನು ಬಸವರಾಜ್ ಮತ್ತು ಚಾಮರಾಜ್ ಅವರಿಗೆ ವಹಿಸುತ್ತೇವೆಂದು ಹೇಳಿದ್ದಾರೆ: ಅದ್ದರಿಂದ ಅವರ ಬೇಡಿಕೆಗಳನ್ನು ಓಟಿಗೆ ಹಾಕಬಹುದು.

ಶ್ರೀಮತಿ ಇ. ಇ. ವಾಜ್.—ಇನ್ನು ೧೯೭೭-೭೮ನೇ ಸಾಲಿನಲ್ಲಿ ಕನ್ನಡಾಭಿವೃದ್ಧಿಯ ಕಾರ್ಯಕ್ರಮಗಳು ಯಾವುವು ಎಂದು ಮಾನ್ಯ ನಾಯ್ಡು ಅವರು ಕೇಳಿದರು. ಈ ದಿಶೆಯಲ್ಲಿ ೨೧೨೦ ಜನ ಗೆಜೆಟೆಡ್ ಅಧಿಕಾರಿಗಳೂ ಹಾಗೂ ಆಫೀಸರ್‌ಗಳಿಗೆ ಕನ್ನಡ ಆಡಳಿತ ಭಾಷೆಯ ಬಗ್ಗೆ ತರಬೇತಿ ಕೊಡಬೇಕೆಂದು ಮಾಡಿದ್ದೇವೆ. ಮತ್ತು ಮಧ್ಯಮ ದರ್ಜೆಯ ೧೫೦ ಜನ ಅಧಿಕಾರಿಗಳಿಗೆ ಕನ್ನಡ ಆಡಳಿತ ಭಾಷೆಯ ಬಗ್ಗೆ ತರಬೇತಿ ಕೊಡಬೇಕೆಂದು ಮಾಡಿದ್ದೇವೆ.

ಇನ್ನು ಸರ್ಕಾರಿ ನೌಕರರಿಗೆ ಸಹಾಯವಾಗುವಂತಹ ಮೂಲಭೂತ ಸಾಹಿತ್ಯವನ್ನು ಕನ್ನಡಕ್ಕೆ ಭಾಷಾಂತರ ಮಾಡಿಸಿ, ಅವುಗಳನ್ನು ಪ್ರತಿಯೊಂದು ಕಛೇರಿಗೂ ಒದಗಿಸಬೇಕೆಂದು ಏರ್ಪಾಡು ಮಾಡಿದ್ದೇವೆ.

ಶ್ರೀ ಎಂ. ವೆಂಕಟಲಿಂಗಯ್ಯ.—ರಾಜ್ಯಮಟ್ಟದಲ್ಲಿ ಕನ್ನಡವನ್ನು ಆಡಳಿತಭಾಷೆಯನ್ನಾಗಿ ಮಾಡಲು ಇನ್ನು ಎಷ್ಟು ವರ್ಷಗಳು ಬೇಕು ?

ಅಧ್ಯಕ್ಷರು.—ಅದನ್ನು ಬೇಗಬೇಗ ಮಾಡಿಸೋಣ, ತಾವು ಕುಳಿತುಕೊಳ್ಳಿ.

I shall now put the Demands to the vote of the House. The question is :

"That respective sums not exceeding the amounts mentioned in the list of demands be granted to the Government to defray the charges which will come in course of payment during the financial year ending 31st day of March 1978 in respect demands Nos. 7, 15 and 3."

The motion was adopted and the sums were granted.

As ordered by the chair the motion of Demands for grants adopted by the House are reproduced below :

DEMAND No. 3.—ADMINISTRATION OF JUSTICE

"That a sum not exceeding Rs. 5,06,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Administration of Justice."

DEMAND No. 7.—STATE EXCISE

"That a sum not exceeding Rs. 4,22,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "State Excise."

DEMAND No. 15.—STATIONERY AND PRINTING AND DEVELOPMENT OF KANNADA

"That a sum not exceeding Rs. 2,74,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Stationery and Printing and Development of Kannada."

MADAM SPEAKER.—The House will now adjourned and meet tomorrow at 1 P.M.

The House adjourned at fifteen Minuets past Seven of the Clock to meet again at One of the Clock on Tuesday the 28th June 1977.

WD 7120—GPB